# ಅಪರಂಜಿ

**ತಿಳಿನಗೆಯ ಕಾರಂಜಿ** **ಫೆಬ್ರವರಿ 2018**

**ಒಂದು ಒಳ್ಳೇ ಪಾಸ್ ವರ್ಡ್ ಸಜೆಸ್ಟ್ ಮಾಡಿ ಗುರುಗಳೇ...**
**ಶಿವರಾತ್ರಿ ದಿವಸ ಛೇಂಜ್ ಮಾಡೋಣ ಅಂತಿದೀನಿ...**





# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 35
ಸಂಚಿಕೆ - 5
ಫೆಬ್ರವರಿ - 2018

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಎಂ. ಶಿವಕುಮಾರ್

ಟ್ರಸ್ಟಿಗಳು
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಉಲ್ಲಾಸ್ ರಾಯಸಂ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | *ಪ್ರಕಾಶ್* | 2 |
| ಸೇತುವೆ ಪಟೋಲಮ್ಮ... | *ವತ್ಸಲ* | 3 |
| ಹಾಗಾದ್ರೆ ಮೀಸೆ...... | *ಎಸ್.ಆರ್. ವಿಜಯಶಂಕರ* | 7 |
| ಚಾಚಾ ಚಂದ್ರು | *ಪಾಲಹಳ್ಳಿ ವಿಶ್ವನಾಥ್* | 11 |
| ತುಂತುರು | *ದಂನಾ* | 19 |
| ಪ್ರಶಸ್ತಿ | *ಸಿ.ಆರ್. ಸತ್ಯ* | 20 |
| ಸ್ವಲ್ಪ ನಗ್ತೀರಾ? | *ಕೆ.ಆರ್. ಸ್ವಾಮಿ* | 22 |
| ಸೇರಿಗೆ ಸವಾಸೇರು | *ಬೇಲೂರು ರಾಮಮೂರ್ತಿ* | 25 |
| ನಮ್ಮೊಳಗಿರುವುದು.... | *ಗಣೇಶ್ ಹೆಗ್ಡೆ* | 26 |
| ವ್ಯಂಗ್ಯ ಮೆಲುಕು | *ಪ್ರಕಾಶ್ ಶೆಟ್ಟಿ* | 29 |
| ಯಾರಾಕಿ? | *ಗುಂಡುರಾವ್ ದೇಸಾಯಿ* | 30 |
| ರಾಜೇಂದ್ರನ ರಗಳೆ | *ಗಾಯತ್ರಿ ಮೂರ್ತಿ* | 33 |
| ಹೆಸರಿನಲ್ಲಿದೆ ಎಲ್ಲವೂ | *ಕುಮುದಾ ಪುರುಷೋತ್ತಮ್* | 36 |
| ಹೀಗೊಂದು ಸುದ್ದಿ | *ಕೆ.ಆರ್. ಮಧುಸೂದನ್* | 38 |

**ಮುಖಪುಟ ವ್ಯಂಗ್ಯಚಿತ್ರ - ಜಿ.ಎಸ್. ನಾಗನಾಥ್**

ಪ್ರಕಾಶಕರು *:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಆಧಾರ್‌ನಿಂದ ಉಪನ್ಯಾಸಕರ ಅಕ್ರಮ ಪತ್ತೆ – ಸುದ್ದಿ

*● ಸುದ್ದಿ ನಿರಾಧಾರವಾಗಿದ್ದರೆ ಚೆನ್ನ !!*

★★★

ಗಾಂಧಿ ಪ್ರತಿಮೆ ಮರೆಮಾಚಲಿದೆ ಸ್ಕೈ ವಾಕ್ – ಪತ್ರಿಕೆ

*● ಅವರಾಗಲೇ ಸ್ಕೈ ವಾಕ್ ಮಾಡಿದ್ದಾರಲ್ಲ !!*

★★★

ಚಿನ್ನದ ಪದಕ ಬೇಕಿದ್ದರೆ 500 ರೂ. ಪಾವತಿಸಿ – ವಿಶ್ವವಿದ್ಯಾಲಯ

*● ಸರಸ್ವತಿ ನಸುನಕ್ಕಳಂತೆ !!*

★★★

ಒಂದೇ ದಿನಕ್ಕೆ ನಿವೃತ್ತನಾದ ಪ್ರಾಂಶುಪಾಲ! – ಸುದ್ದಿ

*● ಸುಖಪುರುಷ !!*

★★★

ಪಕ್ಷಗಳಿಗೆ ದೇಣಿಗೆ; ಪಾರದರ್ಶಕತೆ ಸಾಧ್ಯವೆ? – ಪತ್ರಿಕೆ

*● ಅರಣ್ಯರೋದನ ಎಂದರೆ ಇದೇ !!*

★★★

ಇನ್‌ಫೋಸಿಸ್; ಪಾರೇಖ್‌ಗೆ ಕಡಿಮೆ ವೇತನ 'ಸಿಕ್ಕ' ಸುದ್ದಿ ಆಶ್ಚರ್ಯಕರ !!

★★★

ಕಾರುಗಳಲ್ಲಿ ಬಂದು ಇಂದಿರಾ ಕ್ಯಾಂಟೀನ್‌ನಲ್ಲಿ ಸೇವೆ ಪಡೆಯುವವರನ್ನು ನೋಡಿ ಅಪರಂಜಿ ಚಕಿತಳಾದಳಂತೆ !!

★★★

ಬ್ಯಾಟಿಂಗ್ ಮತ್ತು ಬೌಲಿಂಗ್ ಸಮನ್ವಯ ಗೆಲುವಿಗೆ ಹಾದಿ – ತಜ್ಞರು

*● ಸ್ಪೇಟಿಂಗ್ ದ ಆಬಿಲಿಯಸ್ !!*

★★★



# ಸೇತುವೆ ಪಟೋಲಮ್ಮ ಗುಡಿ ಪ್ರಸಂಗ

**- ವತ್ಸನ**

ಇಪ್ಪತ್ತು ವರ್ಷಗಳ ನಂತರದ ಈ ಕಾಲಘಟ್ಟದಲ್ಲಿ, ಕಲ್ಯಾಣನಗರಿಯ ದಟ್ಟವಾದ ಜನಸಂದಣಿಯ ನಡುವೆ ಇರುವ ಆಸ್ತಿಕ ಮಹಾಜನಗಳಿಗೆ ಬಹು ಪ್ರಿಯವಾದ ''ಸೇತುವೆ ಪಟೋಲಮ್ಮನ ಗುಡಿ''ಯ ಹಿನ್ನಲೆ ಅದರ ನಿರ್ಮಾಣಕ್ಕೆ ಕಾರಣರಾದವರ ವಿವರ ಇವೆಲ್ಲಾ ಜನಮಾನಸದಿಂದ ಜಾರಿರುವುದು ತೀರ ಸಾಧ್ಯ. ಈ ಪವಿತ್ರವಾದ ಗುಡಿಯ ಸೃಷ್ಟಿಯಲ್ಲಿ ಶರಲೇಖನ ಕೈವಾಡವೂ ಇದ್ದುದರಿಂದ ಈ ಚಳಿಗಾಲದ ಸಂಜೆ ಕಂಪ್ಯೂಟರಿನ ಮುಂದೆ ಕುಳಿತು ಶರಲೇಖನ ಈ ಸಾಹಸವನ್ನು ನಿಮ್ಮ ಮುಂದಿಡುತ್ತಿರುವೆ.

ಅದು ಜನವರಿ 2019ರ ಒಂದು ಸಂಜೆ. ಜನತಾದಳದ ಆಳ್ವಿಕೆಯಲ್ಲಿ ರಾಜ್ಯದ ಜನರು ಎಂದೂ ಕಾಣದ ಸುಭಿಕ್ಷವನ್ನು ಅನುಭವಿಸುತ್ತಿದ್ದ ಕಾಲವದು. ಕಳೆದ ತಿಂಗಳು ತಾನೇ ಮುಂಬರುವ ಲೋಕಸಭೆಯ ಚುನಾವಣೆಗಾಗಿ ದೇಶದ ಪ್ರಧಾನಿಗಳು ಬಂದು ಹೋಗಿದ್ದು, ಅವರನ್ನು ಮಾನ್ಯ ಮುಖ್ಯಮಂತ್ರಿಗಳು ಬಹು ಆದರದಿಂದ ಸ್ವಾಗತಿಸಿದ್ದು ಇವೆಲ್ಲಾ ರಾಜಧರ್ಮದ ಒಂದು ಮೈಲಿಗಲ್ಲು ಎಂದು ಜನರು ಹಾಡಿ ಹೊಗಳಿದ್ದರು. ಆ ಸಂಜೆ ಶರಲೇಖ ತನ್ನ ಎಂದಿನ ಸೋಫಾದಲ್ಲಿ ಕುಳಿತು ಪ್ರಜಾವಾಣಿ ಪದಬಂಧವನ್ನು ಬಿಡಿಸುತ್ತಿದ್ದ. ನಾನು ಯೂಟ್ಯೂಬಿನಲ್ಲಿ ಯಾವುದೋ ಬಿಬಿಸಿ ಕಾರ್ಯಕ್ರಮ ನೋಡುತ್ತಿದ್ದೆ. ನಾವಿಬ್ಬರೂ ಶರಲೇಖನ ಪರಮ ಮಿತ್ರ ಇನ್ಸ್‌ಪೆಕ್ಟರ್ ಪ್ರಸಾದ್‌ರವರ ಹಾದಿ ಕಾಯುತ್ತಿದ್ದೆವು. ಅಂದು ಬೆಳಗ್ಗೆ ಅವರು ಫೋನ್ ಮಾಡಿ ಒಂದು ತುರ್ತಿನ ಕೆಲಸದ ಮೇಲೆ ನಮ್ಮನ್ನು ಕಾಣುವ ಇಚ್ಛೆಯನ್ನು ತಿಳಿಸಿದ್ದರು. ಏಳೂವರೆ ಗಂಟೆಗೆ ಕರಾರುವಾಕ್ಕಾಗಿ ಬಾಗಿಲ ಕರೆಗಂಟೆ ಟ್ರಿನ್‌ಗುಟ್ಟಿತು. ಪ್ರಸಾದ್‌ರವರ ಜೊತೆ ಒಬ್ಬ ತರುಣ ಮತ್ತು ಒಬ್ಬ ಯುವತಿ ಬಂದಿದ್ದರು. ''ಇವರು ಮೋಹನ್. ಇಂಜಿನಿಯರ್. ತಮ್ಮದೇ ಒಂದು ಕನ್‌ಸ್ಟ್ರಕ್ಷನ್ ಕಂಪನಿ ನಡೆಸುತ್ತಿದ್ದಾರೆ. ಈಕೆ ಭಾವನಾ. ಬಹು ಪ್ರತಿಭಾವಂತೆ. ನ್ಯೂಜಿಲೆಂಡಿನಲ್ಲಿ ಟ್ರಾಫಿಕ್ ಸ್ಟಡೀಸ್ ಪದವಿ ಪಡೆದು ಈಗ ಇಲ್ಲಿನ ಎನ್.ಜಿ.ಓ. ಒಂದರಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರಿಬ್ಬರೂ ನಿಮ್ಮನ್ನು ಪರಿಚಯಿಸಬೇಕೆಂದು ನನ್ನ ಮೇಲೆ ದುಂಬಾಲುಬಿದ್ದಿದ್ದರು. ಈಗ ಅವರನ್ನು ಇಲ್ಲಿ ಕರೆತಂದಿದ್ದೇನೆ'' ಅಂತ ಬಂದ ಅಭ್ಯಾಗತರನ್ನು ನಮಗೆ ಪರಿಚಯಿಸಿದರು.

ಎಲ್ಲರೂ ಆಸೀನರಾಗಿ ಸರೋಜಮ್ಮನವರು ಕೊಟ್ಟ ಕಾಫಿಯನ್ನು ಸೇವಿಸಿದ ನಂತರ ಮೋಹನ್ ತಮ್ಮ ಅಹವಾಲನ್ನು ವಿವರಿಸತೊಡಗಿದರು ''ನೋಡಿ, ನೇರವಾಗಿ ವಿಷಯಕ್ಕೆ ಬರುವೆ. ನಗರದ ಉಕ್ಕಿನ ಮೇಲ್ಸೇತುವೆ ಕೆಲಸ ನನ್ನ ಕಂಪನಿಗೇ ಸಿಕ್ಕಿದೆ. ನಾನು ನನ್ನ ಕೈಲಾದಷ್ಟು ಪ್ರಾಮಾಣಿಕವಾಗಿಯೇ ಕೆಲಸ ಪ್ರಾರಂಭಮಾಡಿದೆ. ಕೆಲಸದ ಪ್ರಾರಂಭದಲ್ಲೇ ನೂರೆಂಟು ವಿಘ್ನಗಳು ಇದುರಾದವು. ''ಸೇತುವೆ ಬೇಡ'', ''ನೋ ಸ್ಟೀಲ್ ಫ್ಲೈಓವರ್'' ಎಂಬ ಫಲಕಗಳನ್ನು ಹಿಡಿದು ಸಾರ್ವಜನಿಕರು ಪ್ರತಿಭಟನೆ ಸೂಚಿಸಿ ನಮ್ಮ ಕೆಲಸಕ್ಕೆ ಅಡ್ಡಿಬಂದರು. ಆಗಲೇ ನಾನು ಭಾವನಾ ಅವರನ್ನು ಭೆಟ್ಟಿಯಾದದ್ದು. ಅವರು ಆಗ ಒಂದು ಪ್ರತಿಭಟನೆಯ ಗುಂಪಿನ ಮುಂಚೂಣಿಯಲ್ಲಿದ್ದರು. ನನಗೋ ಅವರ ಮೇಲೆ ವಿಪರೀತ ಕೋಪ.

ಇಂಜಿನಿಯರಿಂಗ್ ಪಾಸ್ ಮಾಡಿ ಸ್ವಂತ ಉದ್ಯಮ ಪ್ರಾರಂಭಿಸಿ ಜೀವನ ಸಾಗಿಸೋ ಉತ್ಸಾಹದಲ್ಲಿದ್ದ ನನಗೆ ಈ ಬಗೆಯ ಇಲ್ಲೀಗಲ್ ಪ್ರತಿಭಟನೆಗಳು ಒಂದು ನಾಗರಿಕ ಸಮಾಜದ ಒಳಿತಿಗೆ ಮಾರಕ ಎಂಬ ಖಚಿತ ನಂಬಿಕೆ. ಹಾಗಾಗಿ ಒಮ್ಮೆ ನಾನು ಭಾವನಾ ಅವರನ್ನು ನೇರವಾಗಿ ಭೇಟಿಮಾಡಿ ''ಮೇಡಮ್, ಯಾಕೆ ಹೀಗೆ ಪ್ರತಿಭಟನೆ ಮಾಡಿ ನಮ್ಮ ನ್ಯಾಯವಾದ ಕೆಲಸಕ್ಕೆ ಅಡ್ಡಿಬರುತ್ತೀರ. ನಾವೇನು ನ್ಯಾಯಬಾಹಿರವಾದ ಕೆಲಸ ನಡೆಸಿದ್ದೇವೆಯೇ? ಸರ್ಕಾರ ವಹಿಸಿಕೊಟ್ಟಿರೋ ಕೆಲಸಾನೇ ನಾವು ಮಾಡ್ತಾ ಇರೋದು?'' ಅಂತ ದಬಾಯಿಸಿದೆ. ಆಕೆಯ ಪ್ರತಿಕ್ರಿಯೆ ಬಹು ಅನಿರೀಕ್ಷಿತವಾಗಿತ್ತು. ''ಫಾಗ್ ಉಪಯೋಗಿಸುತ್ತೀರ ಅಲ್ವಾ ನೀವು. ಅದಕ್ಕೆ ನಿಮ್ಮ ಕಣ್ಣಮುಂದೆ ಫಾಗ್ ಆವರಿಸಿದೆ'' ಅಂತ ಹೇಳಿ ಮುಗುಳ್ನಕ್ಕರು. ನನ್ನ ಕೋಪವೆಲ್ಲಾ ಕರಗಿಹೋಯಿತು. ''ಕಣ್ಣಮುಂದೆ ಫಾಗ್ ಆವರಿಸಿಕೊಂಡಿದ್ದರೆ ನೀವು ಅದನ್ನ ಕ್ಲಿಯರ್ ಮಾಡಿ ಮೇಡಮ್'' ಅಂತ ಒಂದು ಸವಾಲನ್ನೆಸೆದೆ. ಮಾರನೆಯ ದಿನ ಆಕೆ ನಮ್ಮ ಆಫೀಸಿಗೆ ಬಂದು ಒಂದು ಪವರ್ ಪಾಯಿಂಟ್ ಪ್ರೆಸೆಂಟೇಷನ್ ಕೊಟ್ಟರು. ಮುಂದಿನ ವಿಷಯಾನ ಭಾವನಾ ಅವರು ವಿವರಿಸುವುದೇ ಸೂಕ್ತ ಅಂತ ಅನನಿಸುತ್ತೆ'' ಎಂದು ಹೇಳಿ ಮೋಹನ್ ತನ್ನ ಮಾತು ಮುಗಿಸಿದ.

ಈಗ ಭಾವನಾ ಅವರ ಸರದಿ. ''ಶರಲೇಖ ಅವರೇ, ನನ್ನ ವಿಶೇಷ ಅಧ್ಯಯನವೆಂದರೆ ನಗರಗಳ ಸಂಚಾರೀ ವ್ಯವಸ್ಥೆಯನ್ನು ಕುರಿತದ್ದು. ಈ ಉಕ್ಕಿನ ಸೇತುವೆಯ ಪ್ರಾಜೆಕ್ಟನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡಿದರೆ ಭಯವಾಗುವಷ್ಟು ಡಿಫೆಕ್ಟುಗಳಿಂದ ತುಂಬಿದೆ. ಈಗ ನೋಡಿ, ನಗರದ ಮಧ್ಯಭಾಗದಿಂದ ಬರುವ ಎಲ್ಲಾ ವಾಹನಗಳೂ ಈ ಉಕ್ಕಿನ ಸೇತುವೆಯಮೇಲೆ ಹರಿದು ರೇಲ್ವೇ ಅಂಡರ್‌ಬ್ರಿಡ್ಜನ್ನು ದಾಟಿಯೇ ಮುಂದೆ ಸರಿಯಬೇಕು. ಈಗ ಟ್ರಾಫಿಕ್ ಲೈಟ್ ಇರುವುದರಿಂದ ವಾಹನಗಳ ಹರಿವು ನಿಂತು ನಿಂತು ಬರುತ್ತಿದ್ದು ಅಂಡರ್‌ಬ್ರಿಡ್ಜಿನ ಕೆಳಗೆ ಸದಾಕಾಲ ಜಾಮ್ ಆಗುತ್ತಿಲ್ಲ. ಈ ಇಲ್ ಕನ್ಸೀವ್ಡ್ ಉಕ್ಕಿನ ಸೇತುವೆ ನಿರ್ಮಾಣವಾಗಿ ಬಿಟ್ಟಿದೆ ಅಂದರೆ, ವಾಹನ ಸಂಚಾರ ನಿರರ್ಗಳವಾಗಿ ಅಂಡರ್‌ಬ್ರಿಡ್ಜಿನ ಕೆಳಕ್ಕೆ ಹರಿದು ಬಂದು ಒಂದು ನಿರಂತರ ಜಾಮ್ ಸೇತುವೆಯ ಮೇಲೆ ನಿಂತಿರುತ್ತದೆ. ಇದನ್ನ ಮೋಹನ್ ಅವರಿಗೆ ವಿವರಿಸಿದ ಮೇಲೆ ಅವರಿಗೆ ಇದರಲ್ಲಿನ ಸತ್ಯ ಅರಿವಾಗಿ, ಆಗಿನಿಂದ ಅವರು ಒಂದು ದ್ವಂದ್ವಕ್ಕೆ ಸಿಕ್ಕಿ ಚಿಂತೆಗೆ ಒಳಗಾಗಿದ್ದಾರೆ. ಕೆಲಸ ಮಾಡೋಹಾಗೂ ಇಲ್ಲ, ಬಿಡೋಹಾಗೂ ಇಲ್ಲ ಎಂಬ ಪರಿಸ್ಥಿತಿ ಇವರದ್ದು. ಇದನ್ನ ನಮ್ಮ ಅಂಕಲ್‌ನ ಮಿತ್ರರಾದ ಪ್ರಸಾದ್ ಅವರಿಗೆ ಹೇಳಿದಾಗ ಅವರು ನಿಮ್ಮನ್ನ ಭೇಟಿ ಮಾಡುವಂತೆ ಸೂಚಿಸಿದರು. ಹಾಗಾಗಿ ನಮಗೆ ಈ ರುಚಿಯಾದ ಕಾಫಿ ಕುಡಿಯುವ ಸೌಭಾಗ್ಯ ದೊರಕಿತು'' ಎನ್ನುತ್ತಾ ಭಾವನಾ ಮುಗುಳ್ನಕ್ಕಳು. ಮೋಹನ್‌ನ ದ್ವಂದ್ವಕ್ಕೆ ಅನೇಕ ಕಾರಣಗಳಿರಬಹುದು ಅಂತ ಅನ್ನಿಸಿತು ನನಗೆ.

ಆಗ ಪ್ರಸಾದ್ ಮಾತನಾಡಲು ಶುರುಮಾಡಿದರು. ''ಅಲ್ರೀ, ಸರ್ಕಾರ ಅಂದ್ರೆ ಕಡಲೆ ಪುರಿ ತಿಂದಹಾಗೆ ಅಂದುಕೊಂಡ್ರಾ? ಸರ್ಕಾರೀ ಕಂಟ್ರಾಕ್ಟ್ ಒಮ್ಮೆ ಜಾರಿಗೆ ಬಂದರೆ ಮುಗೀತು. ಬ್ರಹ್ಮ ಬಂದರೂ ಅದನ್ನ ಬದಲಿಸೋಹಾಗಿಲ್ಲ'' ಅಂತ ಹೇಳುತ್ತಿದ್ದಾಗಲೇ ಶರಲೇಖ ಮಧ್ಯೆ ಪ್ರವೇಶಿಸಿ,

''ಸರ್ಕಾರ ಕಾಂಟ್ರಾಕ್ಟನ್ನ ಜಾರಿಗೆ ತಂದಿರಬಹುದು ಆದರೆ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳದ್ದೇ ಅಂತಿಮ ನಿರ್ಧಾರ. ಪ್ರಜೆಗಳು ತಮ್ಮ ಪ್ರತಿನಿಧಿಗಳ ಮೂಲಕ ಏನನ್ನಾದರೂ ಸಾಧಿಸಬಹುದು. ಇರಲಿ ಯೋಚಿಸಿ ನನ್ನ ಮುಂದಿನ ಹೆಜ್ಜೆ ಏನು ಎಂಬುದನ್ನು ನಿರ್ಧರಿಸುವೆ'' ಅಂತ ಮಾರ್ಮಿಕವಾಗಿ ನುಡಿದ ನಂತರ ಬಂದವರೆಲ್ಲಾ ನಮಗೆ ಬೀಳ್ಕೊಟ್ಟು ಹೊರಟರು.

ಮುಂದಿನ ಒಂದೆರಡು ವಾರಗಳಲ್ಲಿ ಶರಲೇಖ ಇನ್ನಾವುದೋ ಒಂದು ತುರ್ತಿನ ಕೆಲಸದಲ್ಲಿ ನಿರತನಾದ. ನಾನೂ ಸಹಾ ನನ್ನ ತಂಗಿಯ ಮನೆಯವರೊಂದಿಗೆ ಈಶಾನ್ಯ ರಾಜ್ಯಗಳ ಪ್ರವಾಸ ಹೊರಡಬೇಕಾಯಿತು. ಒಂದು ತಿಂಗಳ ನಂತರ ಶರಲೇಖ ''ತೀರ್ಥಹಳ್ಳಿಯ ಹತ್ತಿರದ ಹರಿಹರಪುರಕ್ಕೆ ನಾಳೆ ಬೆಳಗ್ಗೆ ಹೊರಡಬೇಕು'' ಅಂತ ಹೇಳಿದ. ಅವನು ಯಾವಾಗಲೂ ಹೀಗೆ. ಕೊನೆಯ ನಿಮಿಷದಲ್ಲಿ ಇಂತಹ ಪ್ರೋಗ್ರಾಮ್ ನಿರ್ಧರಿಸಿಬಿಡುತ್ತಾನೆ. ನನಗೆ ಇದೆಲ್ಲಾ ಅಭ್ಯಾಸವಾಗಿರುವುದರಿಂದ ಯಾವಾಗಲು ಒಂದು ಟ್ರಾವೆಲ್ ಕಿಟ್ಟನ್ನು ಸಿದ್ಧಪಡಿಸಿಯೇ ಇಟ್ಟಿರುತ್ತೇನೆ. ಹರಿಹರಪುರಕ್ಕೆ ನಮ್ಮ ಪ್ರಯಾಣ ಎರಡು ಕಾರುಗಳಲ್ಲಿ ಸಾಗಿತು. ಒಂದರಲ್ಲಿ ಇನ್ಸ್ಪೆಕ್ಟರ್ ಪ್ರಸಾದ್ ಜೊತೆ ಶರಲೇಖ ಮತ್ತು ನಾನು ಕುಳಿತೆವು. ಇನ್ನೊಂದರಲ್ಲಿ ಮೋಹನ್ ಮತ್ತು ಭಾವನಾ ಜೊತೆ ಸಂಭಾವಿತರಂತೆ ಕಾಣುತ್ತಿದ್ದ ಅಪರಿಚಿತರಿಬ್ಬರು ಇದ್ದರು. ದಾರಿಯಲ್ಲಿ ಹೋಗುತ್ತಾ ಶರಲೇಖ ನಮ್ಮ ಪ್ರಯಾಣದ ಕಾರಣವನ್ನು ವಿವರಿಸಿದ. ''ಕಳೆದವಾರ ಸೇತುವೆಗಾಗಿ ಪಾಯ ತೋಡಲು ಅಗೆಯುತ್ತಿದ್ದಾಗ ಕೆಲಸಗಾರರಿಗೆ ಒಂದು ದೇವತೆಯ ವಿಗ್ರಹ ಸಿಕ್ಕಿತಂತೆ. ಅದೇ ರಾತ್ರಿ ಮೋಹನ್‌ಗೆ ದೇವತೆ ಕನಸಿನಲ್ಲಿ ಬಂದು ''ನಾನು ಪಟೋಲಮ್ಮ. ಮೂರು ಸಾವಿರ ವರ್ಷಗಳಿಂದ ಇಲ್ಲಿ ನೆಲೆಸಿದ್ದೇನೆ. ನಿನ್ನ ಅದೃಷ್ಟ, ನಾನು ನಿನಗೆ ಅನುಗ್ರಹ ಮಾಡುವಂತಾಯಿತು. ಇಲ್ಲೇ ಇದೇ ಜಾಗದಲ್ಲಿ ನನಗಾಗಿ ಪುಟ್ಟ ಗುಡಿಯೊಂದನ್ನು ಕಟ್ಟಿಸು. ಇದಕ್ಕೆ ಯಾರಾದರೂ ಅಡ್ಡಬಂದರೆ ಅವರ ವಂಶ ಹೇಳಹೆಸರಿಲ್ಲದಂತಾಗುತ್ತದೆ'' ಅಂತ ಹೇಳಿದಳಂತೆ. ಮೋಹನ್ ಏನು ಮಾಡಲೂ ತೋಚದೆ ತನಗೆ ಕಾಂಟ್ರಾಕ್ಟ್ ಕೊಟ್ಟ ಅಧಿಕಾರಿಗೆ ಇದನ್ನು ತಿಳಿಸಿ ಅವರ ಸಲಹೆ ಕೇಳಿದನಂತೆ. ಅವರು ಇದನ್ನ ಸಚಿವರಿಗೆ ತಿಳಿಸಿ ಅವರ ಆಣತಿಯಂತೆ ನಡೆಯುವುದಾಗಿ ಹೇಳಿದರಂತೆ. ಇನ್ನೊಂದು ಕಾರಿನಲ್ಲಿ ಸಚಿವರು ಮತ್ತು ಅವರ ಆಪ್ತ ಕಾರ್ಯದರ್ಶಿ ಇದ್ದಾರೆ. ಹರಿಹರಪುರದ ಸಮೀಪದ ಮಠವೊಂದರ ಸ್ವಾಮಿಗಳಲ್ಲಿ ಸಚಿವರಿಗೆ ಅಪಾರ ನಂಬಿಕೆ. ಹಾಗಾಗಿ ಅವರ ಸಲಹೆ ಕೇಳಲು ನಮ್ಮ ಪಯಣ'' ಅಂದ ಶರಲೇಖ. ಇದರಲ್ಲಿ ಶರಲೇಖನ ಕೈವಾಡ ಏನು ಎಂಬುದು ತಿಳಿಯಲಿಲ್ಲ. ಮುಂದೆ ತಾನೇ ತಿಳಿಯುತ್ತೆ ಅಂದುಕೊಂಡು ನಾನು ಸುಮ್ಮನಾದೆ.

ಮಠದಲ್ಲಿ ಸ್ವಾಮಿಜೀ ನಮ್ಮನ್ನೆಲ್ಲಾ ಆದರದಿಂದ ಬರಮಾಡಿಕೊಂಡರು. ಸಚಿವರು ತಮ್ಮ ಸಮಸ್ಯೆಯನ್ನು ಅವರ ಮುಂದಿಟ್ಟಾಗ ಸ್ವಾಮಿಜೀ ''ಅರೆ, ಎಂತಹ ಕಾಕತಾಳನ್ಯಾಯ! ನನಗೂ ನಿನ್ನೆ ರಾತ್ರಿ ಪಟೋಲಮ್ಮ ಕನಸಿನಲ್ಲಿ ಬಂದು ನಿಮ್ಮನ್ನು ಸರಿಯಾದ ಹಾದಿಯಲ್ಲಿ ನಡೆಸುವಂತೆ ಆಜ್ಞಾಪಿಸಿದಳು. ಇದರಲ್ಲಿ ಸಮಸ್ಯೆ ಏನಿದೆ? ಗುಡಿ ಕಟ್ಟಿಸಿ ಬಿಡಿ'' ಎಂದರು. ಸಚಿವರು ''ಅದು ಹಾಗಲ್ಲ ಸ್ವಾಮಿ, ಈಗಾಗಲೇ ಸೇತುವೆ ಅರ್ಧ ನಿರ್ಮಾಣವಾಗಿದೆ. ಈಗ ಅದನ್ನೆಲ್ಲಾ ನಾಶಮಾಡಿ ಗುಡಿ ಕಟ್ಟಿಸುವುದು ಹೇಗೆ?'' ಅಂತ ಕೇಳಿದರು. ಅದಕ್ಕೆ ಸ್ವಾಮಿಜೀ ನಗುತ್ತಾ, ''ಸೇತುವೆ ನಾಶಪಡಿಸಲು ಯಾರು ಹೇಳಿದ್ದು ನಿಮಗೆ? ಹೇಗಿದ್ದರೂ ಸೇತುವೆಯ ಮೇಲಕ್ಕೆ ಹೋಗಲು ಅರ್ಧ ರಾಂಪ್ ಸಿದ್ಧವಾಗಿದೆ ಅದರಲ್ಲೇ ಮೆಟ್ಟಲು ನಿರ್ಮಿಸಿ ಸೇತುವೆಯ ಮೇಲೆ ಒಂದು ಪುಟ್ಟ ಗುಡಿ ಕಟ್ಟಿಸಿ ಬಿಡಿ. ದೇವಿಕ ಕೃಪಾಕಟಾಕ್ಷದಿಂದ ವಾಹನ ಚಾಲಕರೆಲ್ಲರೂ ಯಾವ ಅಪಘಾತವೂ ಇಲ್ಲದೇ ಸುಖವಾಗಿ ಬಾಳಿಬದುಕುವರು'' ಅಂತ ಉತ್ತರಿಸಿದರು. ಸಚಿವರಿಗೆ ಇನ್ನೂ ಒಂದು ಭೀತಿ ಕಾಡುತ್ತಿತ್ತು. ''ಈಗಾಗಲೇ ಸೇತುವೆ ಪ್ರಾಜೆಕ್ಟ್ ಸ್ಯಾಂಕ್ಷನ್ ಆಗಿ ಕೆಲಸ ಭರದಿಂದ ಸಾಗಿದೆ. ಇದನ್ನ ನಿಲ್ಲಿಸಿ ಗುಡಿ ಕಟ್ಟೋದಾದ್ರೂ ಹೇಗೆ?'' ಅಂತ ಪ್ರಶ್ನಿಸಿದರು. ಸ್ವಾಮಿಜೀಯವರು ಕೊಟ್ಟ ಉತ್ತರವನ್ನು ನಾನು ಮರೆಯುವಂತೆಯೇ ಇಲ್ಲ. ''ಸಚಿವರೇ, ಇದರಲ್ಲಿ ನೀವು ಆತಂಕಪಡುವುದೇನಿದೆ? ಇರುವ ಸಂಗತಿಯನ್ನು ಎಲ್ಲ ಸಚಿವರುಗಳಿಗೆ ತಿಳಿಸಿ




ಅಸೆಂಬ್ಲಿಯಲ್ಲಿ ಒಂದು ನಿರ್ಣಯ ಮಂಡಿಸಿ. ವಂಶ ನಿರ್ಮೂಲಮಾಡಿಕೊಳ್ಳಲು ಇಚ್ಛೆ ಇರುವವರೆಲ್ಲಾ ಇದನ್ನ ವಿರೋಧಿಸಲಿ. ಜನರ ಇಚ್ಚೆಯಂತೆ ಎಲ್ಲವೂ ನಡೆಯುತ್ತದೆ. ಗುಡಿಯಲ್ಲಿ ದೇವತೆಯ ಪ್ರತಿಷ್ಠಾಪನೆಗೆ ನಾನು ಖಂಡಿತ ಬರುವೆ'' ಎಂದು ಹೇಳಿ ಸ್ವಾಮಿಜೀ ನಮ್ಮನ್ನು ಬೀಳ್ಕೊಟ್ಟರು.

ಎಲ್ಲವೂ ಸ್ವಾಮಿಜೀ ಹೇಳಿದಂತೆಯೇ ನಡೆದು ಮುಂದಿನ ಮೂರು ತಿಂಗಳಲ್ಲಿ ಗುಡಿ, ದೇವತೆಯ ಪ್ರತಿಷ್ಠಾಪನೆಗೆ ಸಿದ್ಧವಾಯಿತು. ಮೃದು ಹಿಂದುತ್ವಕ್ಕೆ ಹೆಸರಾಗಿದ್ದ ನೂತನ ಪ್ರಧಾನಿಗಳ ಅಮೃತ ಹಸ್ತದಿಂದ ದೇವತೆಯ ಪ್ರತಿಷ್ಠಾಪನೆಯೂ ಆಯಿತು. ಸಚಿವರ ನಂತರದ ಪೂಜೆಯನ್ನು ನವದಂಪತಿಗಳಾದ ಮೋಹನ್ ಮತ್ತು ಭಾವನಾ ಸಲ್ಲಿಸಿದರು.

ಪ್ರತಿಷ್ಠಾಪನೆಯ ಮಾರನೆಯ ದಿನ ನಾನು ಶರಲೇಖನೊಂದಿಗೆ ಮಾತನಾಡುತ್ತಿದ್ದಾಗ ''ದೇವತೆಯ ಹೆಸರು ಪಟೋಲಮ್ಮ ಅಂತ ಮೋಹನ್‌ಗೆ ಕನಸಿನಲ್ಲಿ ತಿಳಿಯಿತಂತೆ. ಎಂತಹ ವಿಚಿತ್ರ ಹೆಸರು. ಅದನ್ನ ಕೇಳಿಯೇ ಇಲ್ಲವಲ್ಲಾ'' ಎಂದೆ. ಶರಲೇಖ, ''ವಿಗ್ರಹ ದೊರಕಿದ್ದು ಒಂದು ಪಾಟ್ ಹೋಲ್‌ನಲ್ಲಿ. ಹಾಗಾಗಿ ಪಾಟ್ ಹೋಲ್ ಅಮ್ಮ ಅನ್ನೋದರ ತದ್ಭವ ಪಟೋಲಮ್ಮ ಅಷ್ಟೇ'' ಎಂದ. ''ಸ್ವಾಮೀಜೀಗೂ ಅದೇ ಕನಸು ಬಿದ್ದದ್ದು ನಿಜಕ್ಕೂ ಆಶ್ಚರ್ಯ ಅಲ್ಲವೇ?'' ಅಂತ ನನ್ನ ಸಂಶಯ ಕೇಳಿದೆ. ''ಮೋಹನ್ ಒಂದು ತಿಂಗಳ ಮುಂಚೆಯೇ ಅವರನ್ನ ಭೇಟಿಮಾಡಿ ಹೊಸದಾಗಿ ಕಟ್ಟಿಸುವ ಗುಡಿಯ ಸಂಪೂರ್ಣ ವಹಿವಾಟನ್ನು ಸ್ವಾಮೀಜೀಯವರೇ ನೋಡಿಕೊಳ್ಳುವಂತೆ ಪ್ರಾರ್ಥಿಸಿದ. ಅವರು ಬಹು ಅನುಕಂಪದಿಂದ ಅವನ ಕೋರಿಕೆಯನ್ನು ಮನ್ನಿಸಿದರು ಅದರಲ್ಲೇನು ಆಶ್ಚರ್ಯ?'' ಅಂತ ನಗುತ್ತಾ ಹೇಳಿದ.

ಇದೆಲ್ಲಾ ಇಪ್ಪತ್ತು ವರ್ಷಗಳ ಹಿಂದಿನ ಮಾತು. ಇಂದಿಗೂ ದೇವಿಯ ಕೃಪೆ ವಾಹನ ಚಾಲಕರ ಮೇಲೆ ನಿರಂತರವಾಗಿ ಹರಿದುಬರುತ್ತಿದೆ. 2025ರಲ್ಲಿ ಭಕ್ತಾದಿಗಳ ಅನುಕೂಲಕ್ಕಾಗಿ ಗುಡಿಯ ಸುತ್ತ ಇರುವ ನಾಲ್ಕೂ ರಸ್ತೆಗಳನ್ನು ವಾಹನ ನಿಲುಗಡೆಗಾಗಿ ಮೀಸಲಿಟ್ಟಾಗಿನಿಂದ ಆ ಜಾಗದಲ್ಲಿ ವಾಹನ ಸಂಚಾರವೇ ಇಲ್ಲದೇ ಅಲ್ಲಿನ ಆಸುಪಾಸಿನ ನಿವಾಸಿಗಳು ಸಮಾಧಾನದ ನಿಟ್ಟುಸಿರು ಬಿಟ್ಟು ದೇವತೆಗೆ ಭಕ್ತಿಪೂರ್ವಕವಾಗಿ ವಂದನೆಗಳನ್ನು ಸಲ್ಲಿಸುತ್ತಿದ್ದಾರೆ.

★

**ಅಪರಂಜಿ ಸಂಭ್ರಮ**

**01–04–2018, ಭಾನುವಾರ ರೇಸ್ ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ಅಪರಂಜಿ ಸಂಭ್ರಮ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಇದೊಂದು ಬೆಳಗಿನ ಕಾರ್ಯಕ್ರಮ. ವಿವರಗಳು ಮುಂದಿನ ಸಂಚಿಕೆಯಲ್ಲಿ, ಎಲ್ಲ ಆಸಕ್ತರಿಗೂ ಆದರದ ಆಹ್ವಾನ.**

**(ಖಂಡಿತ ಇದು ಏಪ್ರಿಲ್ ಒಂದರ ಜೋಕ್ ಅಲ್ಲ)**

# ಹಾಗಾದ್ರೆ ಮೀಸೆವೊತ್ತಣ್ಣಂಗಳ್ ಬರೆ ಪಡಪೋಶಿಯಾ?

**- ಎಸ್.ಆರ್. ವಿಜಯಶಂಕರ**

**ಈ** ಅಪ್ಪಣ್ಣ ಎಲ್ಲಿದ್ದಾನೆ ಮಾರಾಯ? ಎಷ್ಟು ಫೋನು ಮಾಡಿದರೂ ನಾಟ್ ರೀಚೆಬಲ್ ಅಂತ ಬರ್ತಾ ಇದೆಯಲ್ಲ ಎಂದು ಪೊಮ್ಮ ಕೇಳಿದ ಪ್ರಶ್ನೆಗೆ 'ನಿಕ್ಕು ಗೊಂತಿಜ್ಜೆಯಾ'(ನಿನಗೆ ತಿಳಿದಿಲ್ಲವೆ? ಎಂದು ಹೇಳಿದ ಆದ್ರಾಮ. ಸಂಗತಿ ಎಂಚಿನ (ಎಂತದು) ಎಂದು ಕೇಳಿದ್ದಕ್ಕೆ ಆದ್ರಾಮ ವಿವರಿಸಿದ: ಅಪ್ಪಣ್ಣನ ತಂದೆಗೆ ಉಶಾರಿಲ್ಲ ಹಾಗಾಗಿ ಊರಿಗೆ ಹೋಗಿದ್ದಾನೆ ಅಲ್ಲಿ ಗುಡ್ಡಗಳ ನಡುವೆ ಇರುವ ಅವನ ಮನೆಯಲ್ಲಿ ಏರ್‌ಟೆಲ್ ಕನೆಕ್ಟಿವಿಟಿ ಇಲ್ಲ. ಹಾಗಾಗಿ ನೀನು ನಾಲ್ಕು ಸಲ ಅಲ್ಲ ನಲವತ್ತು ಸಲ ಫೋನು ಮಾಡಿದರೂ ಸಿಗುವುದು ಹೇಗೆ? ಎಂದು ಹೇಳಿ ಭಾನುವಾರ ರಾತ್ರಿ ಬಸ್ಸಿಗೆ ಹೊರಟು ಬರುತ್ತಾನೆ ಎಂದೂ ಸೇರಿಸಿದ.

ಪೊಮ್ಮನ ಪಕ್ಕದ ಮನೆಯ ಪರಿಣಿತಳ ಡಿಗ್ರಿ ಕ್ಲಾಸಿನಲ್ಲಿ ರನ್ನನ ಅತ್ತಿಮಬ್ಬೆ ವಿಚಾರ ಟೆಕ್ಸ್ಟ್ ಬುಕ್‌ನಲ್ಲಿ ಇದೆ. ಆ ಬಗ್ಗೆ ಗೊತ್ತಿಲ್ಲದಿರುವ ವಿಚಾರ ಸ್ವಲ್ಪ ಕೇಳಲು ಬರ್ತೇನೆ ಅಂಕಲ್. ಸ್ವಲ್ಪ ಕನ್ನಡ ಹೇಳಿಕೊಡಿ ಅಂತ ಕಾನ್ವೆಂಟ್‌ನಲ್ಲಿ ಕಲಿತ ಆ ಹುಡುಗಿ ಕೇಳಿದ್ದಾಳಂತೆ ಹಾಗಾಗಿ ಅಪ್ಪಣ್ಣನ ಜೊತೆ ಸ್ವಲ್ಪ ಡಿಸ್‌ಕಸ್ ಮಾಡುವ ಅಂತ ತೋರಿತು ಎಂಬುದು ಪೊಮ್ಮನ ಅಭಿಪ್ರಾಯ.

ಪರವಾಗಿಲ್ಲ ಬಿಡು. ನಾಳೆ ಅಪ್ಪಣ್ಣ ಸಿಕ್ತಾನೆ. ಅವನ ಹತ್ತಿರ ಉಮ್ಮ (ಅಮ್ಮ) ಒಂದು ಉರ್ಕು (ತಾಯತ) ಕಳಿಸ್ತೇನೆ ಅಂತ ಹೇಳಿದ್ದಾಳೆ ನಾಳೆ ಸಂಜೆ ಅಪ್ಪಣ್ಣ ನನ್ನು ಮಂತ್ರಿಮಾಲ್‌ನ ಹತ್ತಿರದ 'ದೊನ್ನೆ ಬಿರಿಯಾನಿ' ಹೋಟೆಲ್‌ಗೆ ಬರುವಂತೆ ಹೇಳ್ತೇನೆ. ನೀನೂ ಬಾ ನನಗೆ ಉರ್ಕು ತಕ್ಕೊಂಡ ಹಾಗೆ ಆಯ್ತು. ನಿನಗೆ ವಿಚಾರ ಕೇಳಿದ ಹಾಗಾಯ್ತು. ಮೂರೂ ಬಿರಿಯಾನಿ ದೊನ್ನೆಗಳ ಬಿಲ್ಲು ನೀನೇ ಕೊಡು ಆಯ್ತಾ ಎಂದ ಅದ್ರಾಮ.

ಮೂರನೆ ದಿನ ಸಂಜೆ ಬಿರಿಯಾನಿ ಹೋಟೆಲ್‌ನಲ್ಲಿ ಮೊದಲಿಗೆ ಅದ್ರಾಮ ಒಂದು ಸ್ವೀಟ್ ಆರ್ಡರ್ ಮಾಡಿದಾಗ ಪೊಮ್ಮ ಹೇಳಿದ "ಈ ಸಾಯಿಬ್ಬ ಕತ್ತರಿಸುವುದರಲ್ಲಿ ಬಲ ನಿನ್ನೆಯೆ ನಾನು ಇವತ್ತಿನ ಬಿಲ್ ಕೊಡಬೇಕೆಂದು ಹೇಳಿದ್ದಾನೆ. ಈಗ ನೋಡು ಲಗಾಯಿಸ್ಲಿಕ್ಕೆ ಸುರು ಮಾಡಿದ" ಎಂದೊಂದ ಬಾಣ ಬಿಟ್ಟ. ನಿನ್ನದು ಹರಟೆ ಸಾಕು ಅಲ್ಲಿ ನಾನು ಬಿರಿಯಾನಿ , ಕಾಫಿ ಎಲ್ಲಾ ಮುಗಿದ ಮೇಲೆಯೇ ಮಾತನಾಡುವುದು. ನಿನ್ನದೆಂತದೋ ಅತ್ತಿಮಬ್ಬೆ ಉಂಟಲ್ಲ. ಅದು... ಸುಮ್ಮನೆ ಹರಟೆ ಬೇಡ. ಬಾಯಿ ಮುಚ್ಚಿ ಬಿಲ್ಲು ಕೊಡು ಎಂದು ಅದ್ರಾಮ ತಿರುಗೇಟು ನೀಡಿದ.

ಅತ್ತಿಮಬ್ಬೆ ಸಂಗತಿ ಈ ಅದ್ರಾಮನಿಗೆ ಯಾಕೆ. ಈ ಪೊಮ್ಮನ ಮೀಸೆಗಿಂತ ಎರಡು ಪಾಲು ಮೀಸೆ ಹೊತ್ತ ಗಂಡುಗಳೂ ಅವಳ ಎದುರು ರೈಸಲಿಕ್ಕೆ ಇಲ್ಲ ಆಯ್ತಾ ಎಂದು ಅಪ್ಪಣ್ಣ ಹೇಳಿದ್ದು

ಕಲಿಯೆನೆ ನೆಗಲ್ದಳ್ ಕಸವರ

ಗಲಿಯನೆ ಗುಣದಂಕಕಾರ್ತಿ ಮೊನೆಯೊಳ್ ಮನೆಯೊಳ್

ಮೊಲೆ ಪೊತ್ತ ತೈಲ ಜನನಿಯ

ಕೆಲದೊಳ್ ರಂಜಿಪರೆ ಮೀಸೆವೊತ್ತಣ್ಣಂಗಳ್

ದಾನ ಚಿಂತಾಮಣಿ ಅತ್ತಿಮಬ್ಬೆಯ ಬಗ್ಗೆ ರನ್ನ ತನ್ನ ಅಜಿತ ತೀರ್ಥಂಕರ ಪುರಾಣದಲ್ಲಿ ಹೇಳುವುದಪ್ಪಾ. ಅಜಿತನಾಥ ಜೈನರ ಎರಡನ ತೀರ್ಥಂಕರ. ಅಂತಹ ಅತ್ತಿಮಬ್ಬೆಯ ಮನೆಯ ಹೊರಗೆ ಕಾಣಿಸಿಕೊಳ್ಳುವಾಗ ಅಂತಹವಳ ಪಕ್ಕದಲ್ಲಿ (ಕೆಲದೊಳ್) ಮೀಸೆವೊತ್ತಣ್ಣಂಗಳ್ ರಂಜಿಪರೆ (ಶೋಭಿಸಿಯಾರೆ)? ಎಂದು ಕೇಳುದ್ರಪ್ಪಾ ರನ್ನ. ಇಂಗ್ಲಿಷ್ ಭಾಷೆ ಬರುವ ಮೊದಲು ಕನ್ನಡ ವಾಕ್ಯಗಳಲ್ಲಿ ವಿರಾಮ ಚಿಹ್ನೆಗಳು ಇರಲಿಲ್ಲ. ಹಾಗಾಗಿ ಪ್ರಶ್ನಾರ್ಥಕ ಚಿಹ್ನೆಯನ್ನು ರನ್ನಹಾಕಲಿಲ್ಲ. ಮಾತಿನ ದಾಟಿ ಅದುವೆ ಎಂದ ಅಪ್ಪಣ್ಣ.

ಅಂದರೆ ನೀನು ಎಂತದು ಹೇಳುದು? ಎಂದು ಅಡ್ಡ ಬಾಯಿ ಹಾಕಿದ ಅದ್ರಾಮ ''ದನಗಳು ತಿನ್ನುವ ಬೈಹುಲ್ಲು ಕಂತೆಯಷ್ಟು ದೊಡ್ಡ ಮೀಸೆ ಇಟ್ಟುಕೊಂಡ ಕವಿಗಳು ಈಗಲೂ ಕನ್ನಡದಲ್ಲಿದ್ದಾರೆ. ಮೀಸೆ ಸಾಲದು ಅಂತ ಸಾಕಷ್ಟು ಉದ್ದಕ್ಕೆ ಗಡ್ಡ ಬಿಡುವ ಬುದ್ಧಿ ಜೀವಿಗಳೂ ಇದ್ದಾರೆ ಇವರಾರೂ ಸ್ತ್ರೀವಾದಿಗಳಾದ ಸ್ಟಾರ್ ಬರಹಗಾರ್ತಿಯರು ಹಾಗೂ ವಿಮರ್ಶಕಿಯರ ಎದುರು ಇಂದು ಹೇಗೆ ಕಾಣಿಸುವುದಿಲ್ಲವೋ ಹಾಗೆ ಅತ್ತಿಮಬ್ಬೆ ಎದುರು ಮೀಸೆ ಪೊತ್ತ ಅಣ್ಣಂಗಳ್ ಕಾಣಿಸುತ್ತಿರಲಿಲ್ಲ ಅಂತ ಈ ಪಣ್‌ಪುನಿಯಾ (ನೀನು ಹೇಳೂದಾ)'' ಎಂದ.

ಹಾಗಲ್ಲ ಮಾರಾಯಾ ಕಲಿ ಎಂಬ ಕೀರ್ತಿ (ನಗಲ್ದಳ್) ಕಸವರ ಅಂದರೆ ಚಿನ್ನ, ಹೊನ್ನ ಕಸವರಗಲಿಯೆನ್ನೆ ಗುಣದಂಕಕಾರ್ಕಿ ಮೊನೆಯೊಳ್. ಅಂಕ ಅಂದರೆ ಬಿರುದು ಅಂತ ಅರ್ಥ. ಮೊನೆಯೊಳ್ ಅಂದರೆ ಕಾರ್ಯಕಲಿತನದಲ್ಲಿ ಕಸವರಗಲಿ ಎಂಬ ಗುಣದ ಬಿರುದು. ಮನೆಯೊಳ್ ಮೊಲೆಮೊತ್ತ ತೈಲ ಜನಿಸಿ. ಇಲ್ಲಿ ತೈಲ ಅಂದರೆ ಎಣ್ಣೆ ಅಂತ ಅರ್ಥ ಅಲ್ಲ ಮಾರಾಯ. ತೈಲಪ ಅಂತೆಲ್ಲ ಹಿಂದೆ ಹೇಳುತ್ತಿದ್ದರಲ್ಲ, ಹಾಗೆ ಒಂದು ರೀತಿಯ ವಿಶೇಷ ನಾಮ ತೈಲ ಅಂದರೆ ಅತ್ತಿಮಬ್ಬೆ ಮತ್ತು ನಾಗದೇವರ ಮಗನಾದ ಅಣ್ಣಿಗ ದೇವ. ಇವನಿಗೆ 'ಪಡೆವಳ ತೈಲ? 'ನೂರ್ಮಡಿ ತೈಲ' 'ನನ್ನಿ ನಾರಾಯಣ' ಮೊದಲಾದ ಹೆಸರುಗಳಿದ್ದವು. ಅವನು ಚಕ್ರವರ್ತಿಯ 'ಸೈನ್ಯಾಧೀಶ'ನಾಗಿದ್ದ ಎಂದೂ ಹೇಳುತ್ತಾರೆ. ಲಕ್ಕುಂಡಿ ಶಾಸನ ಆತನ ಆಳ್ವಿಕೆಯನ್ನು ಹೇಳುತ್ತದೆ. ಅಂತಹ ತೈಲನ ಅಮ್ಮ ಅವಳು. ದಾನ ಚಿಂತಾಮಣಿ.

ಅಂದರೆ, ಕರ್ನಾಟಕದಲ್ಲಿ ಈಗ ಬರಹಗಾರ್ತಿಯರಿಗೆ ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಅಂತ ಕೊಡ್ತಾರಲ್ಲ, ಅದು ಇವಳ ಹೆಸರಿನಲ್ಲಾ? ಎಂದು ಬಾಯಿ ಹಾಕಿದ ಅದ್ರಾಮನಿಗೆ, ನೀನೊಮ್ಮೆ ಸುಮ್ಮನೆ ಕೂತುಕೋ ಎಂದ ಪೊಮ್ಮ.

ಕೇಳಲು ಕಿವಿ ಸಿಕ್ಕರೆ ಅಪ್ಪಣ್ಣ ಬಿಡ್ತಾನಾ? ಮುಂದುವರಿಸಿ ಹೇಳಿದ: ಲೌಕಿಕ ಮತ್ತು ಆಗಮಿಕ ಕಾವ್ಯಗಳು ಎಂಬ ವಿಭಾಗ ಹೇಗೂ ಬಂದಿದೆ ಪಂಪ, ವಿಕ್ರಮಾರ್ಜುನ ವಿಜಯ ಹಾಗೂ ಆದಿ ಪುರಾಣ ಬರೆವ ಹಾಗೆ ರನ್ನ ಸಾಹಸ ಭೀಮ ವಿಜಯ (ಗದಾಯುದ್ಧ) ಹಾಗೂ ಅಜಿತ ತೀರ್ಥಂಕರ ಪುರಾಣ ಬರೆದ. ಪಂಪ, ಪೊನ್ನ ರನ್ನರು ಇವರುಗಳು ಜೈನ ಸಮಯ ದೀಪಕರ್ ಎಂಬ ರನ್ನನ ಮಾತು ನಿಜ. ಆದಿ ಪುರಾಣ ಪೊನ್ನ ಬರೆದ ಶಾಂತಿ ಪುರಾಣ ಮತ್ತು ರನ್ನನ ಅಜಿತ ಪುರಾಣಗಳ ರೇಖೆಗೆ ಉಳಿದ ಪುರಾಣಗಳು ಬರಲಾರವೆಂದು ಹೇಳುವ ರನ್ನನ ಮಾತು ನಿಜ.

ಆದರೆ ಸಾಹಿತ್ಯ ಬಲ್ಲವರಿಗೆ ಆದಿಪುರಾಣದ ರೇಖೆಗೆ ಶಾಂತಿ ಪುರಾಣ ಅಜಿತ ಪುರಾಣಗಳೆರಡೂ ಬರಲಾರವು ಎಂಬುದು ತಿಳಿದಿರುತ್ತದೆ.

ಅಂದರೆ ಮೀಸೆವೊತ್ತಣ್ಣಂಗಳ್ ಬರೆ ಪಡಪೋಶಿಯಾ? ಎಂದ ಅದ್ರಾಮನಿಗೆ, ಇದಂದೊಂದು ರಾಮಾಯಣದೊಳಗೆ ಪಿಚ್‌ಕಾಯನ. ಸುಮ್ಮನೆ ಕೂತುಕೊ ಎಂದು ಪೊಮ್ಮ ಗೊಣಗಿದ.

ಈ ಪ್ರಶಸ್ತಿಯ ಅರ್ಥ ಕ್ರಿ.ಶ. ಹತ್ತನೇ ಶತಮಾನದಲ್ಲಿ ಇದ್ದ ರನ್ನನ ಅತ್ತಿಮಬ್ಬೆ ಇವತ್ತಿಗೂ ಒಂದು ಪ್ರತೀಕ ಅಂತ. ಕವಿರತ್ನ ಕವಿ ಚಕ್ರವರ್ತಿ, ಕವಿಕುಂಜರಾಂಕುಶ, ಉಭಯ ಕವಿ, ಕವಿ ತಿಲಕ ಇತ್ಯಾದಿ ಬಿರುದುಗಳಿದ್ದ ರನ್ನ ಹನ್ನೆರಡು ಆಶ್ವಾಸಗಳಲ್ಲಿ ಅಜಿತ ಪುರಾಣವೆಂಬ ಆಗಮಿಕ ಕಾವ್ಯ ಬರೆದಿದ್ದಾನೆ. ಆದರೆ ಮೊದಲ ಮತ್ತು ಕೊನೆಯ ಆಶ್ವಾಸಗಳಲ್ಲಿ ಕವಿಯ ಸ್ವಂತದ ವಿಚಾರ ಕಾವ್ಯ ಸಮರ್ಥನೆ ಹಾಗೂ ತನ್ನ ಆಶ್ರಯ ದಾತೆಯಾದ ಅತ್ತಿಮಬ್ಬೆಯ ಚಿತ್ರಣಗಳಿವೆ. ಅತ್ತಿಮಬ್ಬೆಯ ಬಗ್ಗೆ ಸ್ತುತಿ ರೂಪದ ಕಾವ್ಯ. ಉಳಿದ ಹತ್ತು ಆಶ್ವಾಸಗಳಲ್ಲಿ ಇನ್ನೆರಡು ಕತೆಗಳಿವೆ. ಅವುಗಳಲ್ಲಿ ಏಳು ಆಶ್ವಾಸಗಳಲ್ಲಿ ತೀರ್ಥಂಕರರ ಕತೆ.

ಉಳಿದ ಮೂರು ಸಗರ ಚಕ್ರವರ್ತಿಯ ಕತೆ. ಇದೊಂದು ಧಾರ್ಮಿಕ ಕಾವ್ಯ. ಹಾಗಾಗಿ ಕಥಾ ನಾಯಕನಾದ ತೀರ್ಥಂಕರರು ವೈರಾಗ್ಯ ಹೊಂದಿ ಲೌಕಿಕವನ್ನು ತ್ಯಜಿಸಿ ಅಲೌಕಿಕ ಜೀವನದತ್ತ ನಡೆಯುವ ಕತೆಗೆ ಮಹತ್ವಉಂಟು ಸಗರ ಚಕ್ರವರ್ತಿಯ ಕಥೆ ಮಾತ್ರ ಅವನ ಮೂರನೆ ಜನ್ಮದಿಂದ ಪ್ರಾರಂಭವಾಗುತ್ತದೆ.

ನಿನ್ನ ಪಕ್ಕದ ಮನೆಯ ವಿದ್ಯಾರ್ಥಿನಿ ಪರಿಣಿತಳಿಗೆ ಹೇಳುವುದಕ್ಕೆ ಇಷ್ಟು ಸಾಕೊ? ಅಥವಾ ಇನ್ನೂ ಕೇಳಬೇಕಾದರೆ ತಿನ್ನಲಿಕ್ಕೆ ಬೇರೇನಾದರೂ ಆರ್ಡರ್ ಮಾಡಬೇಕೊ? ಎಂದು ಅದ್ರಾಮ ಪೊಮ್ಮನ ಕಾಲೆಳೆದ.

ಈ ಒರ ಮನಿಪ್ಪಾಂದೆ ಕುಳ್ಳು (ನೀನು ಸುಮ್ಮನೆ ಕುಳಿತುಕೋ) ಅತ್ತಿಮಬ್ಬೆ ಸಂಗತಿ ಇನ್ನೂ ಸ್ಪಷ್ಟವಾಗಲಿಲ್ಲ, ಮೀಸೆವೊತ್ತಣ್ಣಂಗಳ್ ಅಂತ ಯಾರಿಗೆ ಹೇಳುದಾ? ಎಂದ ಪೊಮ್ಮನಿಗೆ ಅದ್ರಾಮ, ಅದೊಂದು ಸಮಾಸ ಪದ ಅಂತ ಹೇಳು ಎಂದು ಛೇಡಿಸಿದ.

ಎರಡನೆಯ ತೀರ್ಥಂಕರನಾದ ಅಜಿತನಾಥನ ಚರಿತೆಯನ್ನು ಚಂಪೂರೂಪದಲ್ಲಿ ಕವಿ ರನ್ನನು ದಾನ ಚಿಂತಾಮಣಿ ಅತ್ತಿಮಬ್ಬೆಗಾಗಿ ರಚಿಸಿದನು ಎಂದು ಅಪ್ಪಣ್ಣ ಮುಂದುವರಿಸಿದ. ಚಾಲುಕ್ಯ ರಾಜಪುತ್ರ ಇಮ್ಮಡಿ ತೈಲಪನ ಸೈನ್ಯ ನೇತೃತ್ವವನ್ನು ವಹಿಸಿ ಜಯಗಳಿಸಿದ ಮಲ್ಲಪನ ಮೂವರು ಹೆಣ್ಣು ಮಕ್ಕಳಲ್ಲಿ ಅತ್ತಿಮಬ್ಬೆ ಮತ್ತು ಗುಂಡ ಮಬ್ಬೆಯರನ್ನು ಚಾಳುಕ್ಯ ಚಕ್ರವರ್ತಿಯ ಮುಖ್ಯ ಸಚಿವನಾಗಿದ್ದ 'ದಲ್ಲಪ'ನ ಮಗನಾದ ನಾಗದೇವನಿಗೆ ಕೊಟ್ಟು ವಿವಾಹವಾಗಿತ್ತು. ಮುಂದೆ ಗುಂಡಮಬ್ಬೆ ಪತಿಯೊಡನೆ ಚಿತೆಯೇರಿದ ಬಳಿಕ ಅತ್ತಿಮಬ್ಬೆ ಇನ್ನೂ ಹೆಚ್ಚು ಧಾರ್ಮಿಕಳಾಗುತ್ತಾಳೆ. ಕವಿಯೇ ಹೇಳಿದಂತೆ ಒಡಲನ್ನು ಉಪವಾಸದಿಂದಲೂ ಒಡವೆಗಳನ್ನು ದಾನಧರ್ಮಗಳಿಂದಲೂ ಕಡಿಮೆ ಮಾಡಿಕೊಳ್ಳುತ್ತಾ ಕೀರ್ತಿ ಪಡೆದಳು. ಜಿನ ಭಕ್ತೆಯೂ, ಚಕ್ರವರ್ತಿ ಪೂಜಿತೆಯೂ ಆಗಿದ್ದ ಅವಳನ್ನು ಕವಿ ತೀರ್ಥಂಕರ ಜನನಿಗೆ ಸಮಾನವಾದ ಗೌರವದಿಂದ ಕಾಣುತ್ತಾನೆ. ರನ್ನ ಹೇಳುವ ಹಾಗೆ,

*ಸಂಜೆಯಮಾವುದೋ ಮಾಡುವೆ*

*ನೆಂದೊಡೆ ಮಾಡಿದೊಡೆ ಕುಡುವೆನೆಂದೊಡೆ ಪೆರತೇ*

*ನೆಂದೊಡಮೆಗೊಟ್ಟಳಾ ನುಡಿ*

*ದಂದದೊಳಗೆ ಪೊಗಳಿ ದಾನಚಿಂತಾಮಣಿಯಂ*

ಹಾಗಾದರೆ ರನ್ನನಲ್ಲಿ ಬರಿ ಕತೆ ಮಾತ್ರ ಇರುವುದೋ? ಎಂದು ಸಹಜ ಕುತೂಹಲದಿಂದ ಅದ್ರಾಮ ಕೇಳಿದ್ದಕ್ಕೆ ಅಪ್ಪಣ್ಣನ ಉತ್ತರ ಚುಟುಕಾಗಿತ್ತು.

''ಹಾಗೇನೂ ಇಲ್ಲ, ಕತೆ ಪೂರ್ವದ್ದು ಕತೆಯ ಜೊತೆ ರನ್ನ ಮಾಡುವ ವರ್ಣನೆ, ಸ್ವಂತದ್ದು. ಅಭಿಷೇಕದ ವರ್ಣನೆ, ಇಂದ್ರ ಪೂಜೆಯ ವರ್ಣನೆ ಅಜಿತನಾಥನ ತಪಸ್ಸಿನ ವರ್ಣನೆ ಇವೆಲ್ಲಾ ಕಥೆಯ ಪ್ರವಾಹವನ್ನು ತಡೆ ಹಿಡಿದು ವಿಚಾರ ಹೇಳುತ್ತವೆ. ಮಹಾಭಾರತಲ್ಲಿ ಮುಂದೆ ಯುದ್ಧ ಏನಾಗುತ್ತದೆ ಎಂಬ ಕುತೂಹಲ ಕತೆಯ ಓಟವನ್ನು ತಡೆ ಹಿಡಿದು ಭಗವದ್ಗೀತೆಯ ಮೂಲಕ ತತ್ವ ಶಾಸ್ತ್ರವನ್ನು ವ್ಯಾಸರು ಹೇಳುವುದಿಲ್ಲವೆ? ಹಾಗೆ ದೊಡ್ಡ ಕವಿಗಳು ಕಥನ ಕುತೂಹಲಕ್ಕೆ ಶರಣಾಗುವುದಿಲ್ಲ, ಆದರೆ ವರ್ಣನೆಗಳು, ಪ್ರತಿಭೆ, ಕಾವ್ಯ ವಿವೇಕಗಳಿಂದ ಕೂಡಿರಬೇಕು ಇಲ್ಲವಾದಲ್ಲಿ ಅನೇಕ ಸಲ ಅರ್ಥಪೂರ್ಣವಾಗುವುದಿಲ್ಲ.

ಆದಿ ಪುರಾಣದಲ್ಲಿ ಕೊನೆಗೆ ಬಾಹುಬಲಿಯ ಕತೆ ಇರುವಂತೆ ಅಜಿತ ಪುರಾಣದಲ್ಲಿ ಕೊನೆಗೆ ಸಗರ ಚಕ್ರವರ್ತಿಯ ಕತೆ ಇದೆ ಅಲ್ಲವಾ, ಎಂದ ಪೊಮ್ಮ.

'ಹೌದು' ಎಂದ ಅಪ್ಪಣ್ಣನಲ್ಲಿ ಅದ್ರಾಮ ಕೇಳಿದ ಅಜಿತನಾಥ, ಸಗರ ಚಕ್ರವರ್ತಿ ಅತ್ತಿಮಬ್ಬೆ ಎಲ್ಲರ ಕತೆಗಳು ಪಂಪನಲ್ಲಿ, ಆಗುವಂತೆ ಪರಸ್ಪರ ಪೂರಕವಾಗಿ ಬೆಳೆಯುತ್ತವೆಯೆ? ಅಥವಾ ಅವು ಪ್ರತ್ಯೇಕವಾಗಿ ಉಳಿಯುತ್ತವೆಯೆ?

''ಅಜಿತನಾಥ ತೀರ್ಥಂಕರನಾಗಿದ್ದಾಗಲೇ ಸಗರ ಚಕ್ರವರ್ತಿಯಾಗುತ್ತಾನೆ. ಕೊನೆಯಲ್ಲಿ ತನ್ನ ಅರುವತ್ತು ಸಾವಿರ ಮಕ್ಕಳನ್ನು ಕಳಕೊಂಡ ಸಗರ ನಿರ್ವೇಗಪರವಾಗಿ ಮೋಕ್ಷಗಾಮಿಯಾಗುತ್ತಾನೆ. ಸಗರನ ಕತೆ ಮುಗಿದ ಕೂಡಲೆ ರನ್ನ ಅತ್ತಿಮಬ್ಬೆಯ ಪಾವನ ಚರಿತೆಯನ್ನು ಸ್ತುತಿಸಲು ಪ್ರಾರಂಭಿಸುತ್ತಾನೆ.''

''ಹಾಗಾದರೆ ರನ್ನನ ಪ್ರಯತ್ನ ಅಜಿತ ತೀರ್ಥಂಕರ. ಸಗರ ಚಕ್ರವರ್ತಿ ಹಾಗೂ ಅತ್ತಿಮಬ್ಬೆ ಈ ಮೂವರ ಚರಿತ್ರೆಯನ್ನು ಜೈನಧಾರ್ಮಿಕತೆಯ ಒಂದು ಅಂಶದಲ್ಲಿ ಒಂದಾಗಿ ಬೆಸೆಯುವುದು ಆಗಿತ್ತೋ ಏನೋ ಎಂದ ಅದ್ರಾಮನಿಗೆ ಅಪ್ಪಣ್ಣ ಹೇಳಿದ.

''ಹಾಗೆ ತೋರುವುದು ನಿಜ, ಆದರೆ ನಮ್ಮ ಓದಿನ ಗುರುಗಳಿಂದ ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರು ರನ್ನನ ಆ ಕಾವ್ಯ ಪ್ರಯತ್ನ ಯಶಸ್ವಿಯಾಗಲಿಲ್ಲ ಎನ್ನುತ್ತಾರಲ್ಲ''

ನಿಜಕ್ಕೂ ನೀನು ಕನ್ನಡ ಪರೀಕ್ಷೆಗಾಗಿ ಸಾಹಿತ್ಯ ಪರಿಷತ್ತಿನಲ್ಲಿ ಸಂಜೆ ಕ್ಲಾಸಿಗೆ ಹೋದ್ದು ನನಗೆ ತುಂಬ ಉಪಕಾರಕ್ಕೆ ಬಂತಪ್ಪ ಅಪ್ಪಣ್ಣ, ನಿನಗೆ ಪರಿಣಿತಳ ಪರವಾಗಿಯೂ ಥ್ಯಾಂಕ್ಸ್ ಅಪ್ಪಣ್ಣ ಎಂದು ಹೇಳಿದ ಪೊಮ್ಮ ಹೋಟೆಲ್ ಬಿಲ್ ಎತ್ತಿಕೊಂಡು ಮುಂದಿನ ಸಲದ ಹೋಟೆಲ್‌ನಲ್ಲಿ ಈ ಅದ್ರಾಮನಿಗೊಂದು ಬರೆಹಾಕುವ ಎಂದು ಪ್ಯಾಂಟಿನ ಜೋಬಿನಿಂದ ಪರ್ಸ್ ತೆಗೆದ.

☆

# ಚಾಚಾ ಚಂದ್ರು

- ಪಾಲಹಳ್ಳಿ ವಿಶ್ವನಾಥ್

ನಮ್ಮ ಚಾಚಾ ಚಂದ್ರು ವಿಚಿತ್ರ ಮನುಷ್ಯ ಎಂದು ಹೇಳಿದರೆ ಗೌರೀಶಂಕರಾನ ಬರೇ ಪರ್ವತ ಅಂತ ಹೇಳಿಬಿಟ್ಟರೆ ಹೇಗೋ ಹಾಗೆ! ಅವರ ಜೊತೆ ನನ್ನ ಒಂದು ಅನುಭವವನ್ನು ಹಂಚಿಕೊಂಡರೆ ಅವರು ಎಷ್ಟು ವಿಚಿತ್ರ ಎಂದು ನಿಮಗೆ ಗೊತ್ತಾಗಬಹುದು. ಅವರ ಪೂರ್ತಿ ಹೆಸರು ಚಂದ್ರಕಾಂತರಾವ್. ಅವರು ಇರುವುದು ತಿಪಟೂರಿನಲ್ಲಿ. ದೊಡ್ಡ ತೆಂಗಿನ ತೋಟದ ಮಾಲೀಕರು. ನಮ್ಮೆಲ್ಲೆಲ್ಲಾ ಹಣವಂತರೆಂದರೆ ಅವರೇ. ಆ ಊರಿನಲ್ಲಿ ಅವರಿಗೆ ಬಹಳ ಮರ್ಯಾದೆ. ಎಲ್ಲರು ಧಣಿ, ಧಣಿ ಅಂತ ನಮಸ್ಕಾರ ಮಾಡ್ತಾ ಇರ್ತಾರೆ. ಆ ಊರಿನಲ್ಲಿ ಅವರು ಸಭ್ಯರೆ ಇರಬಹುದು. ಆದರೆ ಅವರಿಗೆ ಬೆಂಗಳೂರಿಗೆ ಬಂದರೆ ಏನಾಗುತ್ತೋ ಗೊತ್ತಿಲ್ಲ. ಅವರ ವಯಸ್ಸು 65. ಬೆಂಗಳೂರಿಗೆ ಬರ್ತಾ ಬರ್ತಾ ಒಂದೊಂದು ಕಿಲೊಮೀಟರ್‌ಗೂ ಅವರಿಗೆ ಒಂದೊಂದು ವರ್ಷ ಕಡಿಮೆ ಆಗುತ್ತಾ ಹೋಗುತ್ತೆ. ನಮ್ಮ ಮನೇಗೆ ಬರೋ ಹೊತ್ತಿಗೆ 18ರ ಪ್ರಾಯದ ಯುವಕನ ಮನಸ್ಥಿತಿ ಬಂದಿರುತ್ತೆ. ಅಂತೂ ಅವರ ಕಾರು ಬೆಂಗಳೂರಿನ ಒಳಗೆ ಬಂದರೆ ಸಾಕು ನಮ್ಮ ಚಾಚಾ ಅವರ ವಿಚಿತ್ರ ಚೇಷ್ಠೆಗಳು ಶುರುವಾಗುತ್ತವೆ. ಚಿಕ್ಕ ಊರಿನಲ್ಲಿ ಚೆನ್ನಾಗಿ ಆಯಾಮ ಸಿಗುತ್ತದೆ. ದೇಹಾನೂ ಚೆನ್ನಾಗಿ ಇಟ್ಟುಕ್ಕೊಂಡಿದ್ದಾರೆ. ನನ್ನ ಜೊತೆ ಕ್ಲಬ್ಬಿಗೆ ಬಂದು ಅಲ್ಲಿ ಏನಾದ್ರೂ ಮಾಡಿಕೊಳ್ಳಲಿ ಅಂದ್ರೆ ನಮ್ಮ ಚಾಚಾಗೆ ಅದು ಸಾಲದು. ಸಾಹಸಗಳೆಲ್ಲಾ ಮನೆ/ಕ್ಲಬ್ಬು ಹೊರಗೇ ಆಗಬೇಕು.

ಅಂತೂ ಒಂದು ಬುಧವಾರ. ಆಗಲೇ ಎರಡು ದಿನ ಕೆಲಸ ಮಾಡಿ ಸುಸ್ತಾಗಿತ್ತು. ಮನೇಲಿ ಆರಾಮ ಮಾಡೋಣ ಅಂದುಕೊಂಡಿದ್ದೆ. ಆದರೆ ಹೊರಗಡೆ ಹಾರ್ನ್ ಶಬ್ದ. ಅದು ನಮ್ಮ ಚಾಚಾ ಚಂದ್ರು ಅವರ ಕಾರಿನ ಹಾರ್ನ್! ಏನಪ್ಪ ಮಾಡೋದು ಅಂದುಕೊಂಡೆ.. ಸರಿ ಒಳಗೆ ಬಂದರು. ಎರಡು ನಿಮಿಷ ಕೂತರು. ಎದ್ದರು. 'ಬಾ ಹೊರಗೆ ಹೋಗೋಣ. ಬಸವನಗುಡಿಯಲ್ಲಿ ನಮ್ಮ ಸಂಬಂಧದವರು ಒಬ್ಬರು ಇದ್ದಾರೆ, ಗುರುತು ಮಾಡಿಸ್ಕೊಡ್ತೀನಿ' ಅಂದರು. ಯಾರು ಅಂತ ಕೇಳಿದಾಗ ಏನೋ ಬಾದರಾಯಣ ಸಂಬಂಧ ಹೇಳಿದ್ರು. ಅಂತೂ ಬಸವನಗುಡಿ ಕಡೆ ನಡೆಯಲು ಶುರು ಮಾಡಿದೆವು. ಇದ್ದಕ್ಕಿದ್ದ ಹಾಗೆ ಮಳೆ ಶುರುವಾಯಿತು. ಜೋರೂ ಆಯಿತು. ಚಾಚಾ ಸುತ್ತಮುತ್ತ ನೋಡಿದರು. ಒಂದು ದೊಡ್ಡ ಬಂಗಲೆ ಕಾಣಿಸಿತು. ಬಾ ಒಳಗೆ ಹೋಗೋಣ ಎಂದು ನನ್ನನ್ನು ಎಳೆದುಕೊಂಡು ಹೋದರು. ದೊಡ್ಡ ಮನೆ, ದೊಡ್ಡ ಕಾಂಪೌಂಡ್. ವರಾಂಡಾದಲ್ಲಿ ಒಬ್ಬ ಹೆಂಗಸು ನಿಂತಿದ್ದರು. ಮನೆ ನೋಡಿಕೊಳ್ಳುವವರ ತರಹ ಇದ್ದರು.

'ನಮಸ್ಕಾರ' ಎಂದರು ಚಾಚಾ.

ಆಕೆಯೂ ನಮಸ್ಕಾರ ಹೇಳಿದರು.

''ಇದು 'ಶಂಕರ ಪ್ರಸಾದ' ತಾನೇ''

''ಹೌದು''

''ಶ್ರೀಕಂಠಯ್ಯನವರ ಮನೆ ತಾನೇ''

''ಹೌದು''

ನನ್ನ ಕಡೆ ತಿರುಗಿ 'ಸರಿಯಾದ ಮನೆಗೇ ಬಂದಿದ್ದೇವೆ' ಅಂದರು. ಒಳಗೆ ಬರೋವಾಗಲೇ ಮನೆ ಮುಂದಿದ್ದ ಬೋರ್ಡು ನೋಡಿದ್ದರಲ್ಲವೆ ಚಾಚಾ!

''ಏನಮ್ಮ ಮನೆಯಲ್ಲಿ ಯಾರೂ ಇಲ್ಲವಾ?''

''ಇಲ್ಲ ಸ್ವಾಮಿ, ಎಲ್ಲರೂ ಹೊರಗೆ ಹೋಗಿದ್ದಾರೆ''

''ನಿನ್ನ ಹೆಸರೇನಮ್ಮ''

''ಚೆನ್ನಮ್ಮ, ಸ್ವಾಮೀ''

''ಚೆನ್ನಾಗಿಯೆ ಇಟ್ಟಿದ್ದಾರೆ'' ಆ ಹೆಂಗಸು ಸ್ವಲ್ಪ ನಾಚಿಕೊಂಡರು.

''ನಾನು ಹೋಗ್ತಾ ಇದ್ದೆ. ಈವತ್ತು ನನಗೆ ಮಧ್ಯಾಹ್ನ ರಜ.''

''ಹೊರಗೆ ಹೋಗ್ತಾ ಇದೀಯ? ಹೋಗು ಹೋಗು''

''ಆದ್ರೆ ನೀವು?''

''ನಿನಗೆ ಹೇಳಲಿಲ್ಲವಾ ನಿಮ್ಮ ಮನೇವರು''

''ಅವ್ರು ನನಗೆ ಏನೂ ಹೇಳೋಲ್ಲ. ನನಗೆ ಯಾಕೆ ಅಂತ ನಾನೂ ಸುಮ್ಮನಿರ್ತೀನಿ''

''ಪಾಪ.. ಇರಲಿ! ಶ್ರೀಕಂಠಯ್ಯನವರು ಫೋನ್ ಮಾಡಿದ್ದರು. ನಿಮ್ಮ ನಾಯಿ ಇದೆಯಲ್ಲ...''

''ಎರಡು ನಾಯಿಗಳಿವೆ ಸ್ವಾಮಿ! ಒಂದು ಅಲ್ ಸೇಶಿಯನ್. ಇನ್ನೊಂದು..''

''ಇರಲಿ, ನಾವು ಬಂದಿರುವುದು ನಾಯಿಗಳ ಉಗುರು ಕತ್ತರಿಸೋದಕ್ಕೆ''

''ನಾಯಿಯ ಉಗುರಾ? ಅವುಗಳು ಭಯಂಕರ''

''ಗೊತ್ತು. ಇವನು ಪ್ರಾಣಿಗಳ ಡಾಕ್ಟರ್. ನನ್ನ ಸೋದರಳಿಯ. ಪಶುಪತಿ ಅಂತ. ತಂಗಿ ಮನೇಲಿ ಸುಮ್ಮನೆ ಕೂತಿದ್ದ. ನಾನೇ ಅವನನ್ನ ಓದಿಸಿದೆ''

ಇದನ್ನೆಲ್ಲಾ ನೋಡಿ, ಕೇಳಿ ನನಗೆ ಆಶ್ಚರ್ಯ ಆಗಲಿಲ್ಲವಾ ಅಂತ ಕೇಳ್ತಾ ಇದ್ದೀರ, ಅಲ್ಲವೆ? ಇಲ್ಲ ಅಂತಲೇ ಹೇಳಬೇಕು. ಇದೆಲ್ಲಾ ಅವರಿಗೆ ಮಾಮೂಲು. ಮುಂದೆ ಇನ್ನೇನು ಮಾಡ್ತಾರೊ ಅಂತ ಸ್ವಲ್ಪ ಯೋಚನೆಯಂತೂ ಇತ್ತು.

''ನಾನು ನಾಯಿನ ಹಿಡಿದುಕೊಂಡಾಗ ಇವನು ಅದಕ್ಕೆ ಹಿಂದಿನಿಂದ ಇಂಜೆಕ್ಷನ್ ಕೊಡ್ತಾನೆ. ಆಗ ಅದು ಸುಮ್ಮನಾಗಿ ಬಿಡುತ್ತೆ..''

''ನಾನು ಇಂಜೆಕ್ಷನ್ ಕೊಡಬೇಕಾ?'' ಮೊದಲ ಬಾರಿಗೆ ನಾನು ನನ್ನ ಬಾಯಿ ತೆರೆದಿದ್ದೆ.

''ಹೌದು! ನೀನೆ ಕಣಯ್ಯ. ಇಂಜೆಕ್ಷನ್ ತಂದಿದೀಯ ತಾನೆ? ಹಿಂದಿನ ತರಹ ಮರೆತಿಲ್ಲವಲ್ಲ.. ಆಯ್ತು ಅದು ಕೊಟ್ಟ ನಂತರ ನಾಯಿಗೆ ನಿದ್ದೆ ಬರುತ್ತೆ.. ಆಗ ನಾನು ಸುಲಭವಾಗಿ ಅವುಗಳ ಉಗುರನ್ನು ಕತ್ತರಿಸಬಹುದು..''

''ಏನೋ ಹುಷಾರಾಗಿರಿ ಸ್ವಾಮೀ! ಆದರೆ ಸ್ವಾಮೀ ನಾನು...''

''ನೀನು ಹೊರಗೆ ಹೋಗಬೇಕಲ್ವ... ಹೋಗಿ ಬಾ. ನಾವು ಶ್ರೀಕಂಠಯ್ಯನವರಿಗೆ ಕಾಯ್ತೀವಿ. ವರಾಂಡಾಲೇ ಕೂತಿರ್ತೀವಿ.''

''ಆದರೆ..''

''ಮನೆ ಬಗ್ಗೆ ಯೋಚನೇನಾ. ನಾವೇನು ಕಳ್ಳರ ತರಹ ಕಾಣಿಸ್ತೀವಾ''

''ಬಿಡತು ಅನ್ನಿ ಸ್ವಾಮೀ. ನಿಮ್ಮನ್ನು ನೋಡಿದರೆ ನಮಸ್ಕಾರ ಮಾಡೋಣ ಅನ್ನಿಸುತ್ತೆ''

''ಮಾಡು ಬೇಕಾದರೆ. ಆಶೀರ್ವಾದಾನೂ ಮಾಡ್ತೀನಿ''

''ಸರಿ, ಹೋಗಿಬರ್ತೀನಿ ಸ್ವಾಮಿ''

ಅವಳು ಹೋದ ನಂತರ ವರಾಂಡಾದಲ್ಲಿದ್ದ ಕುರ್ಚಿಯ ಮೇಲೆ ಚಾಚಾ ಕುಳಿತರು. ನನಗೆ ಕುಳಿತುಕೊ ಅಂದರು.

''ಈಗ ನೋಡು. ಮಳೆ ತಪ್ಪಿಸಿಕೊಂಡೆವಲ್ಲವೆ?

''ಸರಿ, ಚಾಚಾ! ಆದರೆ ನಾವು ಇಲ್ಲಿ ನಿಲ್ಲೋ ಹಾಗಿಲ್ಲ''

''ಏಕೆ? ಮಳೇಲಿ ಹೊರಗೆ ಹೋಗು ಅಂತೀಯಾ? ಏನಾಗುತ್ತೆ ಗೊತ್ತಾ. ನನ್ಗೆ ಛಳಿ ಬರುತ್ತೆ, ನಾನು ಸೀನ್ತಾ ಇರ್ತೀನಿ. ಹಾಗೇ ನಾನು ವಾಪಸ್ಸು ಮನೇಗೆ ಹೋದರೆ ನಿಮ್ಮ ಚಿಕ್ಕಮ್ಮ ತರಾಟೆಗೆ ತೆಗೆದುಕೋತಾಳೆ. ಬೆಂಗಳೂರು ಪ್ರಯಾಣಗಳೆಲ್ಲ ನಿಂತು ಹೋಗುತ್ತೆ''

''ಸಂತೋಷ'' ಎಂದು ಹೇಳಿದೆ, ಆದರೆ ಮೆತ್ತಗೆ.

''ಇಲ್ಲಪ್ಪ, ನಾನು ಇಲ್ಲೆ ಇರ್ತೀನಿ''

ನನಗೆ ಕಾನೂನು ಹೆಚ್ಚೇನೂ ಗೊತ್ತಿಲ್ಲ.. ಆದರೆ ಈ ತರಹ ಯಾರದೋ ಮನೆಗೆ ಹೋಗಿ ನಾಯಿ ಉಗುರು ಕತ್ತರಿಸೋಕೆ ಬಂದೆವು ಎಂದರೆ ನ್ಯಾಯಾಧೀಶರು ನಂಬ್ತಾರಾ? 'ಸಂತೋಷ, ಜೈಲಿನಲ್ಲೂ ಬೇಕಾದಷ್ಟು ನಾಯಿಗಳಿಗೆ ಅಲ್ಲಿ ಹೋಗಿ 4 ದಿನ ಇರಿ' ಅಂತಾರೆ.

''ಅಲ್ಲ ಚಾಚಾ! ಮನೆ ಯಜಮಾನ ಬಂದರೆ ಏನು ಮಾಡ್ತೀರಿ''

ನಾನು ಹೇಳೋದಕ್ಕೂ ಗೇಟು ತೆಗೆದುಕೊಂಡು ಯಾರೋ ಒಳಗೆ ಬರೋದಕ್ಕೂ ಸರಿಯಾಯ್ತು.

''ಈಗ ಏನು ಮಾಡ್ತೀರಿ?'' ಅಂದೆ

ಒಬ್ಬ ಯುವಕ ಒಳಗೆ ಬಂದ. ಬಂದು 'ಶ್ರೀಕಂಠಯ್ಯನವರು ಇದ್ದಾರೆಯೇ' ಎಂದು ಕೇಳಿದ'

ನಾನು 'ಇಲ್ಲ' ಎಂದು ಉತ್ತರ ಕೊಟ್ಟೆ.

ತಕ್ಷಣ ಚಾಚಾ ಏ ಮೃತ್ಯಂಜಯ! ಏನು ಹೇಳ್ತಿದ್ದೀಯ? ಬನ್ನಿ, ನಾನೇ ಶ್ರೀಕಂಠಯ್ಯ, ಇವನು ನನ್ನ ಮಗ ಮೃತ್ಯಂಜಯ.

ಹತ್ತು ನಿಮಿಷದ ಹಿಂದೆ ನಾನು ಪಶುಪತಿ ಆಗಿದ್ದೆ. ಈಗ ಮೃತ್ಯಂಜಯ!

ಚಾಚಾ ಕೇಳಿದರು ''ನಿಮ್ಮ ಹೆಸರು?''

''ಶಿವಶಂಕರ ನಾಗ್''

''ಓ ನಾಗ್ ಸಹೋದರರ ಸಂಬಂಧವೆ''

''ಇಲ್ಲ, ನಾನು ಅವರ ಅಭಿಮಾನಿ. ದೊಡ್ಡ ಅಭಿಮಾನಿ. ಜಾನಕಿ ಇದ್ದಾಳಾ?''

ಚಾಚಾ ನನ್ನ ಕಡೆ ತಿರುಗಿ ''ಜಾನಕಿ ಇದ್ದಾಳಾ'' ಎಂದು ಕೇಳಿದರು.

ನಾನು 'ಇಲ್ಲ' ಎಂದೆ.

''ಈವತ್ತು ಬರ್ತೀನಿ ಅಂತ ನನಗೆ ಫೋನ್ ಮಾಡಿದ್ದಳು. ನೀವು ಅವಳನ್ನ ನೋಡಿಲ್ಲ ಅಂತ ಕಾಣುತ್ತೆ. ಸಂಬಂಧ ಚೆನ್ನಾಗಿಲ್ಲ ಅಂತ ಹೇಳಿದಳು. ಜಾನಕಿ ನಿಮ್ಮ ಹೆಂಡತಿ ವಿಶಾಲಕ್ಷಮ್ಮನವರ ಸೋದರಸೊಸೆ.''

''ಗೊತ್ತು, ವಿಶಾಲಾಕ್ಷಿ ಹೇಳ್ತಾ ಇರ್ತಾಳೆ, ಕೇಳಿದ್ದೀನಿ''

''ನಾನು ಅವಳನ್ನ ಮದುವೆ ಮಾಡ್ಕೊಬೇಕು ಅಂತ ಇದ್ದೀನಿ''

''ಆದರೆ ವಿಶಾಲಾಕ್ಷಿಗೆ ಆಗಲೇ ಮದುವೆ ಯಾಗಿದೆಯಲ್ಲ''

''ಅಲ್ಲ ಸಾರ್, ಜಾನಕೀನ ಮಾಡಿಕೊಬೇಕು ಅಂತಾ ಇದೀನಿ. ಆದರೆ ಅವರು ಬಿಡ್ತಾ ಇಲ್ಲ''

''ಅವರು ಅಂದರೆ ಯಾರು?''

''ಇನ್ಯಾರು ಅವರೇ! ಅವಳ ಅಪ್ಪ, ಅಮ್ಮ ಆಮೇಲೆ ಅವಳ ದೊಡ್ಡಪ್ಪ, ಚಿಕ್ಕಪ್ಪ! ಬಿಡಿ ಅವರ ಮನೆ ಕಡೆ ಯಾರಿಗೂ ನಾನು ಇಷ್ಟವಿಲ್ಲ. ಅವರ ಅಂತಸ್ತಿಗೆ ಸರಿ ಇಲ್ಲವಂತೆ''

''ಅವರೇನೂ ಸ್ವರ್ಗದಿಂದ ಇಳಿದು ಬಂದಿದಾರಂತ?''

''ಹಾಗೇ ಆಡ್ತಾರೆ ಸಾರ್! ಏನೋ ಸ್ವಲ್ಪ ಹಣ ಇದೆ ಅಂತ ಜೋರು ಮಾಡ್ತಾರೆ. ಅದಲ್ಲದೆ ಅವಳ ಅಮ್ಮನ್ನ ಸ್ವಲ್ಪ ಕೆಟ್ಟದಾಗಿ ಬೈದೂ ಬಿಟ್ಟೆ.. ಬಹಳ ಕಷ್ಟ ಸಾರ್ ಆ ಹೆಂಗಸು''

ಅಷ್ಟರಲ್ಲಿ ಗೇಟು ಶಬ್ದವಾಯಿತು.

''ಸಾರ್, ಓ ಜಾನಕಿ, ಅವಳಮ್ಮ ಬರ್ತಾ ಇದಾರೆ. ನಾನು ಅವಿತ್ಕೋತೀನಿ'' ಅಂತ ಹೇಳಿ ಅವನ ದೂರದ ಪೊದೆಯ ಹಿಂದೆ ಕೂತ್ಕೊಂಡ.

''ಚಾಚಾ! ನೀನು ಏನು ಮಾಡ್ತಾ ಇದ್ದೀಯಾ ಗೊತ್ತೆ?''

''ಈಗ ಹೋಗೋದು ತಪ್ಪಾಗುತ್ತೆ. ಇದನ್ನೆ ಮುಂದುವರಿಸೋಣ. ಆದರೆ ಅವರಿಗೆ ಶ್ರೀಕಂಠಯ್ಯನವರಿಗೆ ಮಗ ಇಲ್ಲ ಎಂದು ಗೊತ್ತಿರುತ್ತೆ. ಆದ್ದರಿಂದ ನಾವು ನಮ್ಮ ಹಳೆಯ ಕೆಲಸಕ್ಕೆ ಹೋಗೋಣ''

''ಅಂದರೆ?''

''ಅದೇ ನಾಯಿಯ ಉಗುರು ಕತ್ತರಿಸೋ ಕೆಲಸ''

‘‘ಚಾಚಾ! ಎಂದು ಹೇಳ್ತಿದ್ದ ಹಾಗೆ ಒಬ್ಬ ಮಹಿಳೆ ಮತ್ತು ಅವರ ಮಗಳು ವರಾಂಡಾಗೆ ಬಂದರು. ಮಗಳು ನೋಡೋಕೆ ಚೆನ್ನಾಗೇ ಇದ್ದಳು. ಹೋಗಿ ಹೋಗಿ ಆ ಶಿವಶಂಕರನಲ್ಲಿ ಇವಳು ಏನಪ್ಪ ಕಂಡಳು ಅನ್ನಿಸಿತು.

ಪ್ರೀತಿ ಅಂದ್ರೆ ಹಾಗೆ ಅಂತ ಕಾಣಿಸುತ್ತೆ.

ಹೆಂಗಸು ಮುಂದೆ ಬಂದು ‘‘ಭಾವಾ’’ ಎಂದಳು. ಅದನ್ನು ಕೇಳಿದ ತಕ್ಷಣ ಚಾಚಾ ನನ್ನನ್ನು ನೋಡಿ ಕಣ್ಣು ಮಿಟುಕಿಸಿದರು.

‘‘ನಿಮಗೆ ನಾನು ಯಾರು ಅಂತ ಗೊತ್ತಿಲ್ಲ. ನಾನು ವಿಶಾಲಾಕ್ಷಿಯ ತಂಗಿ ಕಾಮಾಕ್ಷಿ. ಇವಳು ನನ್ನ ಮಗಳು ಜಾನಕಿ’’

‘‘ಹೌದು! ನೀನು ಬಂದೇ ಇಲ್ಲ ನಮ್ಮ ಮನೆಗೆ’’

‘‘ಹೌದು, ಭಾವ! ನೀವು ಇನ್ನೂ ಚಿಕ್ಕವರಿರಬೇಕು ಅಂದುಕೊಂಡಿದ್ದೆ.’

‘‘ಪ್ರಯತ್ನಿಸ್ತಾ ಇರ್ತೀನಮ್ಮ. ದಿವಸಾ ವ್ಯಾಯಾಮ ಮಾಡ್ತೀನಿ. ಆದರೆ ಈ ತಲೆ ಮೇಲೆ ಕೂದಲು ನನ್ನ ಮಾತು ಕೇಳದೆ ಹೊರಟುಹೋಗಿದೆ’’

‘‘ವಿಶಾಲಾಕ್ಷಿ ಇಲ್ಲ ಅಂತ ಕಾಣಿಸುತ್ತೆ..’’

‘‘ಇಲ್ಲ. ಮಂತ್ರಾಲಯಕ್ಕೆ ಹೋಗಿದಾಳೆ. ಅವರದ್ದು ಒಂದು ಭಜನೆ ತಂಡ ಇದೆ. ಅವರೆಲ್ಲ ಹೋಗಿದಾರೆ’

‘‘ಈ ಮನುಷ್ಯ ಯಾರು?’’

‘‘ಅವನು ನಾಯಿಗೆ ಉಗುರು ಕತ್ತರಿಸೋಕೆ ಬಂದಿದ್ದಾರೆ. ಡಾಕ್ಟರ್ ಪಶುಪತಿ ಅಂತ’’

‘‘ಅವನ ಮುಖ ನೋಡಿದರೆ ನಾಯಿಗೆ ಪಾಪಾ ಅನ್ನಿಸುತ್ತೆ! ನಿಮ್ಮ ಜೊತೆ ಮಾತಾಡಬೇಕು. ಆದರೆ ಅವನ ಮುಂದೆ ನಾನು ಮಾತಾಡೋಕೆ ಆಗೋಲ್ಲ’’

‘‘ಪರವಾಗಿಲ್ಲ ಮಾತಾಡು. ಅವನು ಪೂರ್ತಿ ಕಿವುಡ. ಪಾಪಾ. ನಾಯಿ ಬೊಗಳಿದರೂ ಅವನಿಗೆ ಕೇಳಿಸೋಲ್ಲ. ಅದಕ್ಕೆ ಹೆದರಿಕೆ ಇಲ್ಲದೆ ನಾಯಿಯ ಹತ್ತಿರ ಹೋಗ್ತಾನೆ..’’

ನನ್ನ ಗುಣಗಾನ ಕೇಳಿಸಿತು. ಈ ಚಾಚಾ ನನ್ನ ಎಂತೆಂತಹ ಪರಿಸ್ಥಿತಿಯಲ್ಲಿ ಇರಿಸ್ತಾರೆ ಅಂದರೆ...

‘‘ಸರಿ, ಈಗ ನಾನು ಹೇಳೋದು ಬಹಳ ಇದೆ. ವಿಶಾಲಾಕ್ಷಿಗೆ ಮದುವೆ ಆದಾಗ ನಾನು ಚಿಕ್ಕವಳು. ನನಗೆ ಪರೀಕ್ಷೆ ಬೇರೆ ಇತ್ತು. ಆಮೇಲೆ ನಿಮಗೇ ಗೊತ್ತಲ್ಲ. ವರದಕ್ಷಿಣೆ ಸರಿಯಾಗಿಲ್ಲ ಅಂತ ನೀವು ಮನೇಗೇ ಬರಲೇ ಇಲ್ಲ.’’

‘‘ನಿಲ್ಲು! ಏನು ಮಹಾ ಕೇಳಿದೆ! ಒಂದು ಸ್ಕೂಟರು! ಅದನ್ನೂ ನಿಮ್ಮ ಮನೇವರು ಕೊಡಲಿಲ್ಲ’’

‘‘ಆಗಿದ್ದು ಆಯ್ತು. ನಾವೂ ನಿಮ್ಮನ್ನು ಕರೀಲಿಲ್ಲ, ನೀವೂ ಬರಲಿಲ್ಲ.. ಈಗ ನಾನು ಬರಲೇ ಬೇಕಾದ ಪ್ರಸಂಗ ಹುಟ್ಟಿದೆ.’’

''ಹಳೇದೆಲ್ಲ ಮರೆತುಬಿಡೋಣ''

''ಅದೆ ನಾನು ಹೇಳ್ತಾ ಇರೋದು. ಈಗ ಜಾನಕಿ..''

''ಇವಳಾ ಜಾನಕಿ?! ಲಕ್ಷಣವಾಗಿದ್ದಾಳೆ. ಚೆನ್ನಾಗಿದೀಯಾ ಮಗು?''

ಮಗು ಉತ್ತರ ಕೊಡಲಿಲ್ಲ. ನಾನು ಅವಳನ್ನೆ ನೋಡುತ್ತಿದ್ದೆ. ಹೋಗಿ ಹೋಗಿ ಆ ಶಿವಶಂಕರನಂತಹವನ್ನ ಪ್ರೀತಿಸ್ತಾ ಇದ್ದಾಳಲ್ಲ ಅಂತ ಮತ್ತೆ ಅನ್ನಿಸಿತು.

''ಭಾವ! ಬೆಂಗಳೂರಿಗೆ ಓದೋಕೆ ಬಂದಳು. ಹಾಸ್ಟೆಲ್ಲಿನಲ್ಲಿ ಇದ್ದಳು.''

''ಅಲ್ಲಮ್ಮ! ಹಾಸ್ಟೆಲಿನಲ್ಲಿ ಯಾಕೆ? ವಿಶಾಲಾಕ್ಷಿ ಇಲ್ಲವೇ? ನಮ್ಮ ಮನೆ ಇಲ್ಲವೇ?''

''ಏನೋ ಆಯ್ತು, ಈಗಾ ಇನ್ನೆರಡು ವಾರಕ್ಕೆ ಪರೀಕ್ಷೆ ಇದೆ. ಆದರೆ ರಾದ್ಧಾಂತ ಮಾಡಿಕೊಂಡುಬಿಟ್ಟಿದ್ದಾಳೆ!''

''ಅಂಥಾದ್ದು ಏನಾಯಿತು?''

''ಹಾಸ್ಟೆಲ್ಲಿನಲ್ಲಿರೋವಾಗ ಯಾವನೋ ಗುರುತಾದನಂತೆ ಪ್ರೇಮ-ಗೀಮ ಅಂತೆಲ್ಲ ಮಾತಾಡೋಕೆ ಶುರುಮಾಡಿದಾಳೆ''

''ಹೌದು, ನಾನು ಪ್ರೀತಿಸ್ತಾ ಇದ್ದೀನಿ''

''ಹೊಡೆದ್ಬಿಡ್ತೀನಿ ನೋಡು'' ಎಂದು ಕಾಮಾಕ್ಷಿ ಕೈ ಎತ್ತಿದಳು.

''ಕಾಮಾಕ್ಷಿ, ಅವಳೇನೂ ಚಿಕ್ಕ ಹುಡುಗೀನಾ ಈಗ ಏನು ತೊಂದರೆ?''

''ಅವಳು ಯಾರನ್ನು ಪ್ರೀತಿಸಿದಾಳೆ ಗೊತ್ತಾ? ಅವನ ಹೆಸರು ಶಿವಶಂಕರ ನಾಗ್ ಅಂತೆ.

ಅದು ಅವನ ನಿಜವಾದ ಹೆಸರೂ ಅಲ್ಲ. ಅವನ ಹೆಸರು ಕೆಂಪಯ್ಯ.''

''ಅಮ್ಮ, ಹೆಸರು ಹೇಗಾದರೂ ಇರಲಿ.. ಶಂಕರನಾಗ್ ಅವನ ಆರಾಧ್ಯ ದೇವರು. ಅವರು ಹೆಸರು ಇಟ್ಟುಕೊಂಡರೆ ತಪ್ಪಾಗುತ್ತೆ ಅಂತ ಈ ಹೆಸರು ಇಟ್ಟುಕೊಂಡಿದಾನೆ''

''ಅವನ ಕೆಲಸ ಏನು ಗೊತ್ತಾ ಭಾವ? ಸಿನೆಮಾ ಶೂಟಿಂಗ್ನಲ್ಲಿ ಇವನು ಲೈಟ್ ಬಾಯ್ ಅಂತೆ''

''ನೀವೆಲ್ಲಾ ನೋಡ್ತಾ ಇರಿ! ಶಿವಶಂಕರ ಮುಂದೆ ಹೀರೋ ಆಗ್ತಾನೆ'' ಕರ್ನಾಟಕದಲ್ಲಿ ಎಲ್ಲಾ ಕಡೇನೂ ಅವನ ಪೋಸ್ಟರ್ ಇರುತ್ತೆ.''

''ಜಾನಕೀ! ಲೈಟ್ ಬಾಯ್ ಅಂತೆ! ಲೈಟ್ ಬಾಯ್! ನಮ್ಮಂತಹವರು ಇಂತಹ ಕೆಳವರ್ಗದ ಬಾಯ್‌ಗೀಯ ಜೊತೆ ಮದುವೆಯಾಗೋ ದಾ?''

''ನಮ್ಮಂತಹರು ಅಂದರೆ?''

''ನಮ್ಮದು ಎಂತಹ ದೊಡ್ಡ ವಂಶ! ಗೌರವಸ್ಥರು! ಭಾರದ್ವಾಜ ಮನೆತನ ಅಂದರೆ ಬಿಟ್ಟೀನಾ?''

''ಕಾಮಾಕ್ಷಿ, ನೀವು ಈ ಮದುವೆಗೆ ಒಪ್ಪಿಕೋ''

‘‘ಏನು ಭಾವ ನೀವು ಹೇಳೋದು’’

‘‘ನನಗೆ ಗೊತ್ತು ಭಾರದ್ವಾಜ ಮನೇವರು ಎಷ್ಟು ದೊಡ್ಡವ್ರು ಅಂತ? ನಿಮ್ಮ ಯಜಮಾನರ ಅಣ್ಣ ತಮ್ಮಂದಿರೆಲ್ಲ ಹೇಗೆ ದುಡ್ಡು ಮಾಡಿದರು ಗೊತ್ತ? ಅದು ಏಕೆ, ನಿಮ್ಮ ಮಾವನವರು ಹೇಗೆ ದುಡ್ಡು ಮಾಡಿದರು?’’

‘‘ಏನೇನೋ ಹೇಳ್ತಿದ್ದೀರಲ್ಲ’’

‘‘ವಿಶಾಲಾಕ್ಷಿ ಎಲ್ಲ ಹೇಳಿದಾಳೆ. ನಿಮ್ಮನೇಲಿ ಒಬ್ಬರಾರೂ ಒಳ್ಳೆ ವಿಧಾನದಲ್ಲಿ ದುಡ್ಡು ಮಾಡಿಲ್ಲ’’

‘‘ಭಾವ! ನಿಮಗೇನಾದ್ರೂ ಹುಚ್ಚು ಹಿಡಿದಿದೆಯೆ?

‘‘ನೋಡಮ್ಮ ಜಾನ್ಕಿ! ನಿಮ್ಮ ತಾತ ಹೇಗೆ ದುಡ್ಡು ಮಾಡಿದರು ಗೊತ್ತಾ? ಹೇಳಬಾರದು ಆದರೂ...’’

‘‘ಇಲ್ಲ, ಹೇಳಿ ದೊಡ್ಡಪ್ಪ!

‘‘ದೊಡ್ಡಪ್ಪ! ಸರಿ, ಹುಬ್ಬಳ್ಳೀಲಿ ಹೋಗಿ ಕೇಳು ರಾಮಚಂದ್ರ ಭಾರದ್ವಾಜ ಹೇಗೆ ದುಡ್ಡು ಮಾಡಿದರು ಅಂತ.’’

‘‘ಅವರ ಹೆಸರು ರಾಮಚಂದ್ರ ಅಲ್ಲ’’

‘‘ನೀ ಸುಮ್ಮನಿರು, ಕಾಮಾಕ್ಷಿ! 50 ರೂಪಾಯಿಗೆ ಯಾರು ಬೇಕಾದ್ರೂ ಹೆಸರು ಬದಲಾಯಿಸ್ಕೋಬೋದು! ಇದು ನಿಮ್ಮ ಮಾವನವರ ಪೂರ್ವಾಶ್ರಮದ ಕಥೆ!’’

‘‘ಜಾನಕಿ! ಇವರ ಮಾತು ಕೇಳಬೇಡ’’

‘‘ನೀವು ಹೇಳಿ ದೊಡ್ಡಪ್ಪ!’’

‘‘ನೋಡು ಮಗು! ಅದೂ ನೀನು ಹೆಣ್ಣು ಮಗು! ನಾನು ಬಿಡಿಸಿ ಹೇಳೋಕಾಗೊಲ್ಲ. ಆಗ ಹುಬ್ಬಳ್ಳಿ ಚಿಕ್ಕದಿತ್ತು ಅನ್ನು. ಅಲ್ಲಿ ಪೇಟೇಲಿ ನಿಮ್ಮ ತಾತ ನಡೆಸ್ತಿದ್ದ ಬಿಸಿನೆಸ್ಸೋ.’’

‘‘ಏನದು ದೊಡ್ಡಪ್ಪ!’’

‘‘ನಾನು ಹೆಚ್ಚು ಹೇಳೋದಿಲ್ಲ! ಕೆಂಪು ದೀಪದ ಬೀದಿ ಅಂತ ಕೇಳಿದೀಯಲ್ಲವ?’’

‘‘ಜಾನಕೀ!! ಇವರಿಗೆ ಹುಚ್ಚು!’’

‘‘ತಾತಾ ಆ ಬಿಸಿನೆಸ್ ಮಾಡ್ತಾ ಇದ್ದರಾ?’’

‘‘ಹೌದು ಮಗು! ಅದಲ್ಲದೆ ನಿಮ್ಮ ತಂದೆಯ ಅಣ್ಣ, ತಮ್ಮ ಎಲ್ಲಾ ಏನು ಮಾಡ್ತಾ ಇದ್ದರು ಗೊತ್ತಾ. ಹೋಗಲಿ ಬಿಡು. ಮಾಡಿದವರ ಪಾಪ ಆಡಿದವರ ಬಾಯಲ್ಲಿ’’

‘‘ಗೊತ್ತಾಯ್ತು ದೊಡ್ಡಪ್ಪ. ಅಮ್ಮ! ಮನೆ ಗೌರವ ಅಂತಾ ಎಲ್ಲ ಜಂಭ ಕೊಚ್ಕೋತಿದ್ದೆಯಲ್ಲ! ಇದೇನೆ ನಿಮ್ಮ ಮನೆ ಗೌರವ’’

‘‘ಜಾನಕಿ! ಇವರ ಮಾತು ಕೇಳಬೇಡ’’

''ಪಾಪ ದೊಡ್ಡಪ್ಪ ಏಕೆ ಸುಳ್ಳು ಹೇಳ್ತಾರೆ! ನಿಮ್ಮ ಮನೇವರಿಗಿಂತ ನನ್ನ ಶಿವ ಎಷ್ಟೋ ವಾಸಿ!''

''ನಿನ್ನ ಶಿವ?''

''ಹೌದಮ್ಮ, ನನ್ನ ಶಿವ! ನನ್ನ ಶಿವ! ಎಷ್ಟು ಸತಿ ಬೇಕಾದರೂ ಹೇಳ್ತೀನಿ! ಓ ಇಲ್ಲೇ ಇದ್ದಾನೆ! ಶಿವು! ನೀನೇ ನೋಡ್ತಾ ಇದೀಯ. ನಾನು ಒಳ್ಳೆಯ ಮನೆತನದಿಂದ ಬಂದಿಲ್ಲ, ನಿನಗೆ ಪರ್ವಾಗಿಲ್ಲ, ಅಲ್ಲವಾ?''

''ಇಲ್ಲ, ಜಾನು''

''ಜಾನು ಅಂತೆ! ಜಾನು! ಏನೋ ನೀವು''

''ಕಾಮಾಕ್ಷಿ! ಸುಮ್ಮನಿರು! ಇದು ನನ್ನ ಮನೆ! ಇಲ್ಲಿ ನೀನು ಈತರಹ ಎಲ್ಲ ಕೂಗಾಡೋಕೆ ಆಗೋಲ್ಲ.. ಏನೋ ಇಬ್ಬರು ಚಿಕ್ಕವರು, ಪ್ರೀತಿಸಿ ಮದುವೆ ಮಾಡ್ಕೋತಾರಂತೆ. ಸಂತೋಷ ಅನ್ನೋದು ಬಿಟ್ಟು ಕಿರುಚಾಡ್ತಿದೀಯಲ್ಲ.''

''ನಾನು ಪೋಲೀಸರ ಹತ್ತಿರ ಹೋಗ್ತೀನಿ''

''ಏನು ಬೇಕಾದರೂ ಮಾಡು. ಇಬ್ಬರೂ ವಯಸ್ಕರು ಅನ್ನೋದನ್ನ ಮರೀಬೇಡ... ನೋಡು ಜಾನಕಿ, ನಿಮ್ಮ ಅಮ್ಮ ಹೋಗ್ತಾ ಇದ್ದಾಳೆ''

''ಹೋಗ್ಲಿ ಬಿಡಿ. ನಮ್ಮ ದಾರೀಗೆ ಬಂದೇ ಬರ್ತಾಳೆ. ಬಹಳ ಥ್ಯಾಂಕ್ಸ್ ದೊಡ್ಡಪ್ಪ''

''ನೋಡಮ್ಮ, ನಾನು ನಿಜವಾಗಿಯೂ ನಿನ್ನ ದೊಡ್ಡಪ್ಪನಲ್ಲ''

''ಬಿಡಿ ದೊಡ್ಡಪ್ಪ! ಯಾವುದು ನಿಜ ಯಾವುದು ಸುಳ್ಳು ಅಂತ ನಾನು ಈಗ ನೋಡ್ತಾ ಇದ್ದೀನಲ್ಲ''

''ಅವಸರ ಪಡಬೇಡಿ. ಎರಡು ಮೂರು ತಿಂಗಳು ಕಾಯಿರಿ. ಇನ್ನೂ ಹಾಗೇ ಪ್ರೀತಿಗೀತಿ ಇದ್ದರೆ ನಮ್ಮ ತಿಪಟೂರಿಗೆ ಬನ್ನಿ. ಅಲ್ಲಿ ನನ್ನದು ದೊಡ್ಡ ತೋಟ ಇದೆ. ಅಲ್ಲೇ ನಾನೆ ನಿಮ್ಮ ಮದುವೆ ಜೋರಾಗಿ ಮಾಡಿಸ್ತೀನಿ. ಜಾನಕಿ, ಅದೇನಾದರೂ ಸರಿಹೋಗದಿದ್ದರೆ ಈ ನನ್ನ ಸೋದರಳಿಯ ನೀನು ಬಂದಾಗಿನಿಂದ ನಿನ್ನನ್ನೇ ನೋಡ್ತಾ ಇದ್ದಾನೆ. ಅವನಿಗೊಂದು ಚಾನ್ಸ್ ಕೊಡು. ಈಗ ನನ್ನ ಕಾರ್ಡ್ ತೊಗೊ''

ಮಳೆ ನಿಂತಿತ್ತು. ನಾನು ಮತ್ತು ಚಾಚಾ ಚಂದ್ರು ಶ್ರೀಕಂಠಯ್ಯನವರ ಮನೆಯಿಂದ ಹೊರಗೆ ಬಂದೆವು. ನನ್ನ ನೋಡುತ್ತಾ ಚಾಚಾ 'ಸಾವಿರ ಸುಳ್ಳು ಹೇಳಿ ಮದುವೆ ಮಾಡಿಸಿ' ಅಂತಾರಲ್ವೇನೋ. ವರ್ಗಗಳ ಅಂತರ ಹೀಗೆಯೇ ಕೊನೆಯಾಗಬೇಕು ನಮ್ಮ ದೇಶದಲ್ಲಿ! ಈಗ ವಾಪಸ್ಸು ಹೋಗೋಣ ಎಂದರು. ಮುಂದಿನ ಸತಿ ಚಾಚಾ ಬಂದಾಗ ಏನು ಮಾಡ್ತಾರೋ ಅಂತ ಯೋಚನೆಯಾಗಿದೆ!

*(ಸ್ಫೂರ್ತಿ: ಅಂಕಲ್ ಫ್ರೆಡ್ ಫ್ಲಿಟ್ಸ್ ಬೈ)*

☆

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ನಮ್ಮ ದೇಶದ ಪರಿಸ್ಥಿತಿಯನ್ನು ನೋಡಿದರೆ ನಾವು ಅಡ್ಡದಾರಿಯಲ್ಲಿ ಬಹು ದೂರ ಸಾಗಿ ಬಂದಿದ್ದೇವೆ ಎಂದು ಅನಿಸದೆ?
- ಹೊಟ್ಟೆಯನ್ನು ಕೊಟ್ಟ ದೇವರು ಅದರ ಜೊತೆಗೆ ಹೊಟ್ಟೆಕಿಚ್ಚು, ಹೊಟ್ಟೆ ಉರಿ ಮುಂತಾದವುಗಳನ್ನೂ ಯಾಕೆ ಕೊಟ್ಟ?
- ಕಪ್ಪು ಹಣವೂ ಬೆವರು ಸುರಿಸಿ ಸಂಪಾದಿಸಿದ್ದೇ ಅಲ್ಲವೆ? ತೆರಿಗೆ ಮಾತ್ರ ಕಟ್ಟಿರುವುದಿಲ್ಲ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಸುಖದುಃಖೇ ಸಮೇ ಕೃತ್ವಾ ಎಂದು ಗೀತೆಯಲ್ಲಿ ಕೃಷ್ಣ ಪರಮಾತ್ಮ ಅರ್ಜುನನಿಗೆ ಹೇಳಿದ್ದು ಬದುಕು ಚೌಚೌ ಭಾತ್ ಆಗಿರುತ್ತದೆ, ಎರಡನ್ನೂ ಸಮವಾಗಿ ಸ್ವೀಕರಿಸು ಎಂಬ ಅರ್ಥದಲ್ಲಿಯೇ.
- 'ಐ ಡೋಂಟ್ ನೊ' ಈಸ್ ಎ ಟ್ರೆಮೆಂಡಸ್ ಡೋರ್‌ವೆ - ದಿ ಓನ್ಲಿ ಡೋರ್‌ವೆ ಟು ನೋಯಿಂಗ್.
- ಜ್ಞಾನಕ್ಕೆ ಮಿತಿ ಇದೆ, ಅಜ್ಞಾನಕ್ಕಲ್ಲ.
- ಶಬ್ದವನ್ನು ಮೇಲಕ್ಕೆತ್ತಿ, ದನಿಯನ್ನಲ್ಲ. ಮಳೆಯಿಂದ ಗಿಡ ಚಿಗುರುತ್ತದೆ, ಗುಡುಗಿನಿಂದಲ್ಲ.
- ಟೀವಿಯನ್ನು ಆರಿಸಿ, ದೇವರು ನಿಮ್ಮ ಜೊತೆ ಮಾತನಾಡಲು ಪ್ರಯತ್ನಿಸುತ್ತಿರಬಹುದು.
- ಜನರು ಒಬ್ಬರ ಬಗ್ಗೆ ಮಾತನಾಡುವ ಬದಲು ಒಬ್ಬರಿಗೊಬ್ಬರು ಮಾತನಾಡುವಂತಾದರೆ ಎಷ್ಟು ಚೆನ್ನ!
- ಡಬ್ಲ್ಯೂ ಡಬ್ಲ್ಯೂ ಡಬ್ಲ್ಯೂ - ವರ್ಕ್ ವಿಥೌಟ್ ವರಿ.
- ಅಪಾರ್ಟ್‌ಮೆಂಟ್ ಒಂದರಲ್ಲಿ ಒಬ್ಬರಿಗೆ ಹೃದಯಾಘಾತವಾದರೆ ಮರುದಿನ ಎಲ್ಲರೂ ವಾಕಿಂಗ್ ಮಾಡಲು ಆರಂಭಿಸುತ್ತಾರೆ.
- ಎಲ್ಲರೂ ಸಮಸ್ಯೆಗಳಿಗೆ ಪರಿಹಾರ ಹುಡುಕುವುದರಲ್ಲೇ ನಿರತರಾಗಿರುತ್ತಾರೆ, ಸಮಸ್ಯೆಗಳೇ ಇರದಂತೆ ಹೇಗೆ ಮಾಡುವುದು ಎಂಬುದರ ಬಗ್ಗೆ ಯೋಚಿಸುವುದೇ ಇಲ್ಲ.
- ಎವೆರಿಮ್ಯಾನ್ ಈಸ್ ಗಿಲ್ಟಿ ಆಫ್ ಆಲ್ ದಿ ಗುಡ್ ವರ್ಕ್ ಹಿ ಡಿಡ್ ನಾಟ್ ಡು.
- ಕೌನ್ ಬನೇಗ ಕ್ರೋರ್ ಪತಿ ಅಲ್ಲ, ಕೌನ್ ಬನೊ ಮೊದಲು.
- ಮಂಗನಿಂದ ಮಾನವ ಸರಿಯಷ್ಟೆ, ಮುಂದೆ ಆತ ಹೇಗಾಗುತ್ತಾನೆ?

☆

# ಪ್ರಶಸ್ತಿ

**- ಸಿ.ಆರ್. ಸತ್ಯ**

ನಮ್ಮ ಬಡಾವಣೆಲ್ಲಿರುವ ಗಂಗಮ್ಮ ಹಾಲಿನ ಡೈರಿ ಪ್ರಾಯೋಜಿಸಿದ್ದ 'ಗಂಗಾ ಸಂಗೀತ ಸಭಾ'ದ ವಾರ್ಷಿಕ ಸಮ್ಮೇಳನದಲ್ಲಿ ಮೊನ್ನೆ ನನಗೆ 'ಸಂಗೀತ ಶಿರಮಣಿ' ಪ್ರಶಸ್ತಿ ಕೊಟ್ಟು ಸನ್ಮಾನ ಮಾಡಿದ್ದಕ್ಕೆ ಅನೇಕರು ತಮ್ಮ ವಿರೋಧವನ್ನು ವ್ಯಕ್ತಪಡಿಸಿ, ಇಂತಹ ಪ್ರಶಸ್ತಿಯನ್ನು ಯಾವುದಾದರೂ ಎಮ್ಮೆಗೊ ಅಥವಾ ಹಸುವಿಗೋ ಕೊಟ್ಟಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು. ಅಂತ ಅವಹೇಳನ ಮಾಡಿದ್ದಾರೆ.

ಇದರಿಂದ ನೊಂದ ನಾನು ಅವರೆಲ್ಲರೊಡನೆ ಜಗಳಕ್ಕೆ ನಿಲ್ಲುವ ಬದಲು, ಅಂದು ನನಗೆ ಸಂಗೀತ ಸಭಾ ಕೊಟ್ಟ ಪ್ರಶಸ್ತಿ ಪತ್ರವನ್ನು ಇಲ್ಲಿ ಪ್ರಕಟಿಸುತ್ತಿದ್ದೇನೆ. ಓದುಗರು ನಾನು ಪ್ರಶಸ್ತಿಗೆ ಅರ್ಹನೋ ಇಲ್ಲವೋ ಎಂದು ಇದರಿಂದ ಅರಿತುಕೊಳ್ಳಲಿ.

''ಇವತ್ತಿನ ಈ ಸಮಾರಂಭದಲ್ಲಿ ನಮ್ಮ ಸಂಗೀತ ಸಭಾ ಒಂದು ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಅದು ನಮ್ಮ ಪ್ರಿಯ ಶ್ರೀಮಾನ್.................... ಅವರಿಗೆ (ಅಂದರೆ ನನಗೆ) ಇಂದು ನಾವು ನಮ್ಮ ನಿಮ್ಮೆಲ್ಲರ ಪರವಾಗಿ 'ಸಂಗೀತ ಶಿರಮಣಿ' ಬಿರುದನ್ನು ಕೊಟ್ಟು ಅವರನ್ನು ಗೌರವಿಸುತ್ತಿದ್ದೇವೆ. ಶ್ರೀಯುತರು ನಮ್ಮ ಸಂಗೀತ ಸಭಾಗೆ ಕೊಟ್ಟಿರುವ ಪ್ರೋತ್ಸಾಹ ಮತ್ತು ಬೆಂಬಲ ನಮ್ಮ ಸಭಾವನ್ನು ಇಷ್ಟರ ಮಟ್ಟಿಗೆ ಬೆಳೆಸಿ ನಿಲ್ಲಿಸಿದೆ ಎಂದರೆ ಉತ್ಪ್ರೇಕ್ಷೆಯಾಗಲಾರದು. ಅಲ್ಲದೆ, ನಮ್ಮ ಸಭೆಯಲ್ಲಿ ಇಲ್ಲಿಯವರೆಗೆ ಭಾಗವಹಿಸಿದ ಅನೇಕ ಸಂಗೀತಗಾರರೂ ತಮ್ಮ ಕಛೇರಿಗಳಲ್ಲಿ ಶ್ರೋತೃ ವರ್ಗದಲ್ಲಿನ ಮೊದಲನೇ ಸಾಲಿನಲ್ಲೇ ಶ್ರೀಯುತರು ಕೂತು ಸತತವಾಗಿ ಕೊಡುವ ಸ್ಫೂರ್ತಿಯನ್ನು ಎಂದೂ ಜ್ಞಾಪಿಸಿಕೊಳ್ಳುತ್ತಲೇ ಇರುತ್ತಾರೆ. ಶ್ರೀಯುತರು ಕಳೆದ ಇಪ್ಪತ್ತೈದು ವರುಷಗಳಿಂದ ಒಂದು ಕಛೇರಿಯನ್ನೂ ತಪ್ಪಿಸಿಕೊಳ್ಳದೆ ಮೊದಲಿನಿಂದ ಕೊನೆಯವರೆಗೂ ಕೂತು ನಮ್ಮೊಂದಿಗೆ ನಂತರ ಕಾಫಿ ತಿಂಡಿ ತಿಂದೇ ಮನೆಗೆ ಹೋಗುವುದನ್ನು ನಾವು ಮೆಚ್ಚಬೇಕಾದ್ದೆ. ಎಷ್ಟೋ ವೇಳೆ ಶ್ರೋತೃಗಳೇ ಇಲ್ಲದಿದ್ದರೂ, ಶ್ರೀಯುತರು ಒಬ್ಬರೇ ಕುಳಿತು ಸಂಗೀತ ಕೇಳಿದ್ದುಂಟು. ಶ್ರೀಯುತರು ಪ್ರೋತ್ಸಾಹ ಕೊಡುವ ರೀತಿಯಂತೂ ಅಸಾಮಾನ್ಯವಾದದ್ದು. ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಅವರು ಸಂಗೀತಕ್ಕೆ ತಲೆ ಅಲ್ಲಾಡಿಸುವುದು ಅವರ ವೈಶಿಷ್ಟ್ಯ. ರಾಗ ತಾಳಕ್ಕೆ ಸರಿಹೊಂದಲಿ, ಬಿಡಲಿ, ಅವರ ತಲೆ ಒಂದು ಯಂತ್ರದ ಹಾಗೆ ಅಲ್ಲಾಡುವುದನ್ನು ಗಮನಿಸುವ ಸಂಗೀತಗಾರರೂ ಕೂಡ ಅದರಿಂದ ಇನ್ನಷ್ಟು ಪ್ರಚೋದನೆಗೊಂಡು, ಇನ್ನಷ್ಟು ಉತ್ಸಾಹದಿಂದ ಹಾಡುವುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಕೆಲವೊಮ್ಮೆ ಸಂಗೀತಗಾರರು ಕೀರ್ತನೆಯನ್ನು ಮುಗಿಸಿ ಪಕ್ಕದಲ್ಲಿರುವ ಫ್ಲಾಸ್ಕ್‌ನಿಂದ ಕಾಫಿ ಕುಡಿಯುವಾಗಲೂ, ಇವರು ತಲೆ ಅಲ್ಲಾಡಿಸುತ್ತಲೇ ಇರುವುದು ಒಂದು ಶ್ಲಾಘನೀಯ ಸಂಗತಿ. ಈ ಇಪ್ಪತ್ತೈದು ವರುಷಗಳ ಕಾಲದಲ್ಲಿ ಅವರು ಅಷ್ಟೊಂದು ಬಾರಿ ತಲೆ ಅಲ್ಲಾಡಿಸಿದರೂ ಅವರಿಗೆ ಯಾವ ಬಗೆಯ ಕತ್ತು ನೋವಾಗಲೀ ಸ್ಪಾಂಡಿಲೈಟಿಸ್ ತರಹ ತೊಂದರೆಯಾಗಲೀ ಬಂದಿಲ್ಲದಿರುವುದು ನಮ್ಮ ಪುಣ್ಯ. ಅನೇಕ ಬಾರಿ ಸಂಗೀತಗಾರರು ಕಛೇರಿಗೆ ಬರುವ ಮುನ್ನ, ಶ್ರೀ................ (ಅಂದರೆ ನಾನು) ಅವರು

ಬರುತ್ತಾರೆ ತಾನೆ? ಅಂತ ಆತಂಕದಿಂದ ನಮ್ಮನ್ನು ಕೇಳಿದ್ದುಂಟು. ಒಮ್ಮೊಮ್ಮೆ ಮಳೆಯಿಂದಾಗಿಯೋ ಟ್ರಾಫಿಕ್ ಜ್ಯಾಮ್ ನಿಂದಾಗಿಯೋ ಯಾರಾದರೂ ಪಕ್ಕವಾದ್ಯದವರು ಬರದೇ ಇದ್ದರೆ, ಸಂಗೀತಗಾರರು ಪರವಾಗಿಲ್ಲ, ಶ್ರೀ............. (ಅಂದರೆ ನಾನು) ನನ್ನ ಸಂಗೀತವನ್ನು ಕೇಳೋದಕ್ಕೆ ಇದ್ದಾರೆ ತಾನೆ? ಅಂತ ಖಚಿತಪಡಿಸಿಕೊಂಡು ಕಛೇರಿಯನ್ನು ಮುಂದುವರೆಸಿಯೇ ಹೋಗುತ್ತಾರೆ. ಅವರ ಪ್ರಭಾವ ಇಷ್ಟರ ಮಟ್ಟಿಗಿದೆ ಅಂತ ನಾವು ಹೆಮ್ಮೆಯಿಂದ ಹೇಳಿಕೊಳ್ಳಬಹುದು.

ಹೀಗೆ ನಮ್ಮ ಎಲ್ಲಾ ಕಛೇರಿಗಳಲ್ಲೂ ಸಕ್ರಿಯವಾಗಿ ಭಾಗವಹಿಸಿ ನಮ್ಮ ಕಾರ್ಯಕ್ರಮಗಳಿಗೆ ಕಳೆ ಕಟ್ಟುತ್ತಿರುವ ಈ ಮಹನೀಯರಿಗೆ ನಾವು ತಕ್ಕ ಗೌರವ ಮಾಡಿ ಒಂದು ಬಿರುದನ್ನೂ ಕೊಡಬೇಕೆಂಬ ನಮ್ಮಲ್ಲಿದ್ದ ಆಸೆ ಇಂದು ನಿಜರೂಪ ಪಡೆದಿದೆ. ಇಲ್ಲಿ ಶ್ರೀಯುತರ ಬಗ್ಗೆ ಎಲ್ಲರಿಗೂ ತಿಳಿದಿಲ್ಲದಿರುವ ವಿಷಯಗಳನ್ನು ನಾವು ಪ್ರಸ್ತಾಪಿಸಲೇಬೇಕು. ಒಂದು: ಅವರೇ ಒಮ್ಮೆ ಹೇಳಿದ ಹಾಗೆ, ಅವರಿಗೆ ಸ್ವಲ್ಪವೂ ಸಂಗೀತದ ಜ್ಞಾನವೇ ಇಲ್ಲ. ಎರಡೆಯದು: ಇದೂ ಅವರೇ ಹೇಳಿಕೊಂಡಿರುವ ಹಾಗೆ, ಅವರು ಕಿವುಡರೂ ಕೂಡ! ಈ ಹಿನ್ನೆಲೆಯಲ್ಲೂ ಅವರು ನಮ್ಮ ಸಂಗೀತ ಕಾರ್ಯಕ್ರಮಗಳಿಗೆ ತಪ್ಪದೇ ಬಂದು ತಲೆ ಅಲ್ಲಾಡಿಸುವುದು ಒಂದು ಮಹದಾಶ್ಚರ್ಯವೇ ಸರಿ. ಕೆಲವರು ಅವರು ಇಲ್ಲಿಗೆ ತಪ್ಪದೇ ಬರುವುದು ತಿಂಡಿ ಕಾಫಿಗಾಗಿ ಎಂದು ವ್ಯಂಗ್ಯವಾಡಿರುವುದೂ ಉಂಟು. ಇಂತಹ ಕೆಟ್ಟ ಮಾತುಗಳಿಂದ ಅವರು ವಿಚಲಿತರಾಗದೇ ನಮ್ಮೊಂದಿಗೆ ಎಂದೂ ಇದ್ದೇ ಇದ್ದಾರೆ. ಇನ್ನೊಂದು ವಿಷಯವೆಂದರೆ, ಶ್ರೀಯುತರು ಇದುವರೆವಿಗೂ ನಮ್ಮ ಸಭಾ ಸದಸ್ಯತ್ವಕ್ಕೆ ಚಂದಾ ಹಣ ಪಾವತಿಮಾಡಿಲ್ಲ. ಇದರ ಬಗ್ಗೆ ನಾವು ಅವರಿಗೆ ಕಳಿಸಿದ ಪತ್ರಗಳೆಲ್ಲಾ ನಮಗೆ ವಾಪಸ್ ಬಂದಿವೆ. ಆದರೂ ಅವರು ನಮ್ಮವರೆಂದೇ ನಾವು ಪರಿಗಣಿಸಿ ಅವರಿಗೆ ಗೌರವ ಸದಸ್ಯತ್ವವನ್ನು ಕೊಟ್ಟು ಕಾಗದ ಬರೆಯುವುದನ್ನು ನಿಲ್ಲಿಸಿದ್ದೀವಿ. ಇದು ಅವರ ಮೇಲೆ ನಮಗಿರುವ ಪ್ರೀತಿಯ ಸಂಕೇತ.

ಈ ಹಿನ್ನೆಲೆಯಲ್ಲಿ ನಮಗೊಂದು ಜಿಜ್ಞಾಸೆಯಾಯಿತು. ಅವರಿಗೆ ಯಾವ ಹೆಸರಿನ ಬಿರುದು ಕೊಡಬೇಕು ಎಂದು. ಇದಕ್ಕೆ ನಮ್ಮ ಈ ವಾರ್ಷಿಕ ಸಮ್ಮೇಳನದ ಪ್ರಾಯೋಜಕರಾದ ಗಂಗಮ್ಮ ಹಾಲಿನ ಡೈರಿಯ ಮಾಲೀಕರಾದ ಶ್ರೀಮತಿ ಗಂಗಮ್ಮನವರೇ ಒಂದು ಅದ್ಭುತ ಸೂಚನೆ ಕೊಟ್ಟರು. ಅದು: ಅವರಿಗೆ ''ಸಂಗೀತ ಶಿರಮಣಿ'' ಎಂಬ ಬಿರುದು ಕೊಡಿ. ಯಾಕೆಂದರೆ, ನಾವು ಗೌರವ ಸಲ್ಲಿಸಬೇಕಾದ್ದು ಅವರಿಗಲ್ಲ ಅವರ ತಲೆಗೆ ಎಂದು. ಈ ಸೂಚನೆ ಸಮಂಜಸವಾಗಿದ್ದು, ನಾವು ಇಂದು ಈ ಮಹನೀಯರಿಗೆ ''ಸಂಗೀತ ಶಿರಮಣಿ'' ಬಿರುದನ್ನು ಕೊಟ್ಟು ಗೌರವಿಸುತ್ತಿದ್ದೀವಿ. ದೊಡ್ಡ ಮನಸ್ಸಿನಿಂದ ಇದನ್ನು ಸ್ವೀಕರಿಸಲು ಶ್ರೀಯುತರು (ಅಂದರೆ ನಾನು, ಮರಿಯಬೇಡಿ) ಒಪ್ಪಿಗೆ ಕೊಟ್ಟಿದ್ದಾರೆ. ಶ್ರೀಯುತರಿಗೆ ಕೇಳುವ ಹಾಗೆ ನಿಮ್ಮೆಲ್ಲರ ಕಿವಿ ಬಿರಿಯುವ ಚಪ್ಪಾಳೆಯೊಂದಿಗೆ ನಮ್ಮ ಪರವಾಗಿ ಶ್ರೀಮತಿ ಗಂಗಮ್ಮನವರು ಈ ಬಿರುದನ್ನು ಶ್ರೀ............... ಅವರಿಗೆ ಕೊಟ್ಟು ಶಾಲು, ಫಲ ತಾಂಬೂಲಗಳನ್ನು ಅರ್ಪಿಸುತ್ತಿದ್ದಾರೆ.''

ಪ್ರಿಯ ಓದುಗರೇ, ನನ್ನ ಅರ್ಹತೆ ಬಗ್ಗೆ ನೀವೆ ನಿರ್ಧಾರಕ್ಕೆ ಬನ್ನಿ. ಧನ್ಯವಾದಗಳು.

✯

# ಸ್ವಲ್ಪ ನಗ್ತೀರಾ?

**- ಕೆ.ಆರ್. ಸ್ವಾಮಿ**

**(1)**

‘‘**ನಿ**ಮ್ಮೆಜಮಾನ್ರಿಗೆ ಆಫೀಸಿನಲ್ಲೂ ಟೆನ್ಷನ್, ಮನೇಲೂ ಟೆನ್ಷನ್, ರಾತ್ರಿ ಮಲಗಿದಾಗ್ಲೂ ಟೆನ್ಷನ್...?!! ಒದ್ದಾಡ್ತಿದಾರೆ ಅಂತಿದ್ರಲ್ಲಾ ಈಗ.’’

‘‘ಯಾವ ಔಷಧಿಯಿಂದ ಗುಣವಾಯ್ತು?’’

‘‘ತಿಂಗಳಿಗೆ ಮೂರು ಲಕ್ಷ ಸಂಬಳದ ಕೆಲಸ ಬಿಟ್ಟು ಐವತ್ತು ಸಾವಿರ ರೂಪಾಯಿ ಸಂಬಳದ ಕೆಲಸಕ್ಕೆ ಸೇರಿಕೊಂಡಮೇಲೆ.’’

**(2)**

‘‘ನೀನು ಸತ್ರೂ ನಾನು ನಿಂಜೊತೆಗೇ ಇರ್ತೀನಿ’’ ಎಂದು ಹೇಳಿದ ಪತಿರಾಯ ಮಾತಿಗೆ ತಪ್ಪಲಿಲ್ಲ.

ಇವತ್ತು ಮಂಚದ ಪಕ್ಕದಲ್ಲಿ ಹಾರ ಹಾಕಿದ ಅವಳ ಒಂದು ಫೋಟೋ ಇಟ್ಟುಕೊಂಡು ಬೇರೆಯವಳೊಂದಿಗಿದ್ದಾನೆ.




(3)

ಅವನೂ ಗೊರಕೆ ಹೊಡೆಯುತ್ತಾನೆ ಅವಳೂ ಗೊರಕೆ ಹೊಡೆಯುತ್ತಾಳೆ. ಆದರೆ ಯಾರಿಗೂ ಶಬ್ಧವೇ ಕೇಳಿಸುವುದಿಲ್ಲ. ಯಾಕೆಂದರೆ ಅವರ ಮನೆಯಲ್ಲಿ ತಿರುಗುತ್ತಿರುವ ಹಳೇ ಫ್ಯಾನಿನ ಶಬ್ಧ ಅದಕ್ಕಿಂತಲೂ ಜೋರಾಗಿರುತ್ತದೆ.

## (4)

ಗಂಡ ಆಫೀಸಿನಿಂದ ಮನೆಗೆ ಬಂದವನೇ ಕೊಠಡಿಯ ಒಳಹೊಕ್ಕು ಬಾಗಿಲಿನ ಬೋಲ್ಟ್, ಆಲ್ಡ್ರಾಪ್, ಸೀಲಿಂಗ್ ಫ್ಯಾನ್, ಹುಕ್ ಎಲ್ಲವನ್ನೂ ಕಿತ್ತು ಹಾಕಿಬಿಟ್ಟ.

ಇದನ್ನು ಕಿಟಿಕಿಯಿಂದ ಗಮನಿಸಿದ ಪಕ್ಕದ ಮನೆಯವನು ''ಯಾಕೆ ಹೀಗೆ ಮಾಡಿದಿರಿ?'' ಎಂದು ಪ್ರಶ್ನಿಸಿದ.

''ಈಸಲವೂ ಬೋನಸ್ ಬಂದಾಗ ನೀನು ನೆಕ್‌ಲೇಸು ಕೊಡಿಸದಿದ್ರೆ ನಾನು ನೇಣು ಹಾಕಿಕೊಂಡುಬಿಡ್ತೀನಿ ಅಂತ ನನ್ನ ಹೆಂಡ್ತಿ ಹೇಳಿದ್ಲು...

## (5)

''ಮದುವೆಗೆ ಮುಂಚೆ ನನ್ನ ಹೆಂಡ್ತಿ ಕವರಿನಲ್ಲಿ ಪತ್ರ ಬರೆಯುತ್ತಿದ್ದಳು. ಮದುವೆಯ ನಂತರ ಅಂತರ್ದೇಶೀಯ ಪತ್ರ ಶುರುವಾಯ್ತು.

ಮಕ್ಕಳಾದಮೇಲೆ ಪೋಸ್ಟ್ ಕಾರ್ಡು... ಈಗ ಬಿಡಿ ಎಲ್ಲವೂ ಓಪನ್, ಫೇಸ್ ಬುಕ್ನಲ್ಲಿ ಶೇರ್ ಮಾಡ್ತಾಳೆ.''

## (6)

ಆದಿನ ನಾನು ಸ್ಕೂಟರಿನಲ್ಲಿ ಹೋಗುತ್ತಿದ್ದಾಗ ಪೋಲೀಸಿನವನು ಡಿ.ಎಲ್. ಕೇಳಿಬಿಟ್ಟ. ಮಾರ್ಕೆಟ್ಟಿಗೆ ಹೋಗುವಾಗ ಬಸ್ಸಿನಲ್ಲಿ ನಿಂತುಕೊಂಡೇ ಹೋಗಬೇಕಾಯ್ತು. ಕಂಡಕ್ಟರ್ ಸೀಟು ಕೊಟ್ಟು ಕೂರಿಸಲಿಲ್ಲ. ಸಿನೆಮಾ ಟಿಕೆಟ್‌ಗೆ ಕ್ಯೂನಲ್ಲಿ ನಿಂತು ಕಾಲು ಊದಿಕೊಂಡಿತು. ವಾಕಿಂಗ್ ಟ್ರಾಕಿನಲ್ಲಿ ಹೆಂಗೆಳೆಯರು ಗೌರವ ಕೊಡದೇ ನನ್ನನ್ನು ಕಿಚಾಯಿಸಿದರು. ವಾಪಸ್ಸು ಬರುವಾಗ ರೈಲಿನಲ್ಲಿ ಚೆಕಿಂಗ್ ಇನ್‌ಸ್ಪೆಕ್ಟರು ಏಜ್ ಪ್ರೂಫ್ ಕೇಳಿದರು. ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣ ನಾನು ಹೆಂಡ್ತಿ ಮಾತು ಕೇಳಿ ಚಂದವಾಗಿ ಕಾಣಿಸಲು ತಲೆಗೆ ಹೇರ್ ಡಯ್ ಹಾಕಿಕೊಂಡದ್ದು.




☆

# 2018ರಲ್ಲಿ ಏನು ಮಾಡ್ತೀರ?

## ಎಂದು ಅಪರಂಜಿ ಓದುಗರನ್ನು ಕೇಳಿದ್ದಕ್ಕೆ ಬಂದ ಪ್ರತಿಕ್ರಿಯೆಗಳು

## ಹೊಸವರ್ಷ ಕನ್ನಡ 'ನುಡಿ' ಸ್ತೀನಿ

ಕೈಗೆ ಸಿಕ್ಕ ಕಥೆ ಕವನ, ಹಾಸ್ಯ ಬರೆದುಕೊಂಡು ತೆಪ್ಪಗಿದ್ದ ನನಗೆ ಬರಸಿಡಿಲಿನಂತಹ ವಾರ್ತೆ. ಪತ್ರಿಕೆಗಳೆಲ್ಲಾ ಇನ್ನುಮುಂದ್ೀ ಮೇಲ್‌ನಲ್ಲೇ ಬರೆದು ಕಳಿಸಿ ಅಂತ ಒಮ್ಮೆಲೇ ಘೋಷಿಸಿಬಿಟ್ಟವು. ರತ್ನ ಹೇಳಿರಲಿಲ್ಲವೇ "ಬಾಯ್ ಒಲಿಸಾಕಿದ್ರೂ ಮೂಗ್ನಲ್ ಕನ್ನಡ ಪದವಾಡ್ತೀನಿ" ಅಂತ. ಹಾಗೆ ನಾನು ಕನ್ನಡ ಬರೆಯದೇ ಬದುಕಲು ಸಾಧ್ಯವೇ? ಶತಾಯ ಗತಾಯ ತಿಂಗಳೊಳಗಾದರೂ ಕನ್ನಡ ಬರಹ ಕಲಿತು ಸೇರಿಗೆ ಸವ್ವಾಸೇರು ಎಂದು ಬೀಗುತ್ತಿರಲು ವರ್ಷ ಮುಗಿಯುತ್ತಿದ್ದಂತೆ ನುಡಿ ತಂತ್ರಾಂಶದಲ್ಲಿ ಬರೆಯಿರಿ ಎಂದು ಪತ್ರಿಕೆಗಳು ನುಲಿಯತೊಡಗಿವೆ.

ಹೊಸವರ್ಷದಲ್ಲಿ ನಿರ್ಧರಿಸಿಯೇ ಬಿಟ್ಟೆ. ಏನನ್‌ಕೊಂಡಿದಾರೆ ಕನ್ನಡ ಬರಹಗಾರರನ್ನ. ನಮ್ಮ ಕೈ ಕಾಲ್ ಕಟ್ಟಿ ಹಾಕಿದ್ರೂ ಕನ್ನಡ ಬರೆಯೋದನ್ನ ಬಿಡೋದೇ ಇಲ್ಲ. ನಾನು 2018ರಲ್ಲಿ ಕನ್ನಡ "ನುಡಿ" ಕಲಿತು ಅದರಲ್ಲೇ ಅದ್ದಿ ಅದ್ದಿ ತೆಗೆದು ಜಾಲಾಡಿ ಒಣಗಿಹಾಕಿ ಬಿಡ್ತೀನಿ. ಕನ್ನಡ ಅಕ್ಷರ "ನುಡಿ" ಸುತ್ತೇನೆ. ನೋಡ್ತಾ ಇರಿ.

***– ಎಸ್. ವಿಜಯ ಗುರುರಾಜ***

---

## ಓದಿನ ವರ್ಷ

2018 ನನಗೆ ಓದಿನ ವರ್ಷವಾಗಲೆಂದು ನನ್ನಾಶೆ. ನನಗೆ ಭೈರಪ್ಪ ರುದ್ರಮೂರ್ತಿಶಾಸ್ತ್ರಿಗಳು, ಟಿ.ಕೆ. ರಾಮರಾವ್, ದೊಡ್ಡೇರಿ ವೆಂಕಟಗಿರಿರಾವ್ ಅವರ ಕಾದಂಬರಿಗಳನ್ನು ಓದುವುದೆಂದರೆ ಎಲ್ಲಿಲ್ಲದ ಪ್ರೀತಿ–ಉತ್ಸಾಹ! ತ.ಸು. ಶಾಮರಾಯರ 'ಭಾಗವತ' ನನ್ನ ನಿತ್ಯದ ಓದು. ಹಾಗೆಯೇ ನಾರಾಯಣಾಚಾರ್ಯರ 'ಕೃಷ್ಣಾವತಾರ' ಸಹ. ಈ ವರ್ಷ ಟಿ.ಕೆ. ರಾಮರಾಯರ 'ಸೀಮಾರೇಖೆ' ಸಿಕ್ಕರಂತೂ ನನ್ನ ಓದಿನ ಮಿತಿ ಇನ್ನಷ್ಟು ವಿಸ್ತಾರಗೊಳ್ಳುತ್ತದೆ!

ನನ್ನವರು ಮಹಾ ಸೋಮಾರಿ. ಬರೀ ಪತ್ರಿಕೆ ಓದೋದರಲ್ಲೇ ಕಾಲ ಕಳೆಯುತ್ತಾರೆ. ಅವರನ್ನು ಹೆಚ್ಚಿನ ಓದಿಗೆ ಹಚ್ಚಬೇಕಾಗಿದೆ. ನನಗೆ ಪ್ರಕೃತಿ ವೀಕ್ಷಣೆ ಅಂದ್ರೆ ಬಹಳ ಇಷ್ಟ. ಹಂಪೆಯ ಪರಿಸರಕ್ಕೆ ಹೋಗಿ ಅಲ್ಲಿಯ ಶಿಲ್ಪಕಲೆಯನ್ನು ಇನ್ನಷ್ಟು ಅರಿಯುವುದು ರೋಚಕ! ನೋಡೋಣ 2018ರಲ್ಲಿ ಏನೇನು ಕಾದಿದೆಯೋ ಬಲ್ಲವರಾರು!

***– ವಿ. ಲಕ್ಷ್ಮೀ, ಹೊಸಪೇಟೆ***

# ಸೇರಿಗೆ ಸವಾಸೇರು

**- ಬೇಲೂರು ರಾಮಮೂರ್ತಿ**

ಹದಿನೈದು ವರ್ಷದ ಮಗ ಒಂದು ದಿನ ಮನೆಗೆ ಬಂದಾಗ ಕಾರು ಕೊಂಡ್ಕೊಂಡು ಬಂದಿದ್ದ. ಅದನ್ನು ಕಂಡು ತಂದೆ ತಾಯಿಯರಿಗೆ ಅಚ್ಚರಿ. ಕಾರು ಯಾರದ್ದು ಎಂದರೆ ನಾನು ಕೊಂಡುಕೊಂಡೆ ಅಂದ. ಅಮ್ಮ ಈ ಕಾರಿನ ಬೆಲೆ ಲಕ್ಷಗಟ್ಟಲೆ ಆಗುತ್ತೆ. ನೀನು ಅಷ್ಟೊಂದು ದುಡ್ಡು ಎಲ್ಲಿಂದ ಸಂಪಾದನೆ ಮಾಡಿದೆ, ನಿಜ ಹೇಳು'' ಅಂದಳು. ಮಗ ''ಅಮ್ಮಾ ಈ ಕಾರಿನ ಬೆಲೆ ಲಕ್ಷಗಟ್ಟಲೆ ಇರಬಹುದು. ಆದರೆ ಇದು ನನಗೆ ಸಿಕ್ಕಿದ್ದು ಕೇವಲ ಒಂದು ಸಾವಿರ ರೂಪಾಯಿಗೆ'' ಅಂದ. ತಂದೆಗೆ ಮಗನ ಮಾತು ಕೇಳಿ ಸಿಟ್ಟು ಬಂತು. ''ಹುಚ್ಚುಚ್ಚಾಗಿ ಮಾತಾಡಿ ನಮ್ಮನ್ನು ನಂಬಿಸಲು ಯತ್ನಿಸಬೇಡ. ಈಗ ನೀನು ನಿಜ ಹೇಳಿದರೆ ಸರಿ'' ಎಂದು ಜೋರು ಮಾಡಿದರು. ಮಗನೂ ತಾಳ್ಮೆಯಿಂದ. ''ಅಪ್ಪಾ ನಾನು ಹೇಳ್ತಿರೋದು ನಿಜಾಪ್ಪ ಈ ಬೀದಿ ಕೊನೇಲಿ ನಮ್ಮ ಏರಿಯಾಕ್ಕೆ ಹೊಸದಾಗಿ ಬಂದಿರೋ ಆಂಟಿ, ನಾನು ಅವರ ಮನೆ ಮುಂದೆ ಬೈಕಲ್ಲಿ ಹೋಗುವಾಗ ನನ್ನನ್ನು ಕರೆದು ನಿನಗೆ ನಮ್ಮ ಹೊಸಾ ಕಾರು ಬೇಕಾ, ಬರೀ ಸಾವಿರ ರೂಪಾಯಿ ಅಂದರು. ಅವರು ತಮಾಷೆ ಮಾಡ್ತಿದಾರೆ ಅಂದುಕೊಂಡೆ. ಅವರು ನಿಜವಾಗಿ ನಾನು ಸಾವಿರ ರೂಪಾಯಿಗೆ ಈ ಕಾರು ಮಾರ್ತಿದೀನಿ, ನಿನಗೆ ಆಸೆ ಇದ್ದರೆ ತಗೋ ಅಂದರು. ನಾನು ಅವರಿಗೆ ಸಾವಿರ ರೂಪಾಯಿ ಕೊಟ್ಟೆ. ಅವರು ಕಾರಿನ ಡಾಕ್ಯುಮೆಂಟ್ಸ್ ಎಲ್ಲಾ ಕೊಟ್ಟರು. ಫಾರಂಗಳಿಗೆ ಸಹಿ ಹಾಕಿಕೊಟ್ಟರು. ನಾನು ಆರ್.ಟಿ.ಓ.ಗೆ ಹೋಗಿ ಎಲ್ಲಾ ಕೆಲಸ ಮಾಡಿಕೊಂಡು ಬಂದೆ. ಈಗ ಈ ಕಾರು ನನ್ನ ಹೆಸರಿನಲ್ಲಿದೆ'' ಅಂದ. ಈಗ ಅಚ್ಚರಿಪಡೋ ಸರದಿ ಅಪ್ಪ ಅಮ್ಮ ಇಬ್ಬರದೂ ಆಯಿತು. ಹೆಂಡತಿ ಗಾಬರಿಯಿಂದ ''ರೀ ಆ ಹೆಂಗಸು ಹುಚ್ಚಿ ಇರಬಹುದು ಅಂತ ಕಾಣುತ್ತೆ ಅಥವಾ ನನ್ನ ಮಗನಿಗೆ ಅದೇನು ಮೋಡಿ ಮಾಡೋಕೆ ಪ್ಲಾನ್ ಹಾಕಿಕೊಂಡಿದಾಳೋ ಗೊತ್ತಿಲ್ಲ. ಸ್ವಲ್ಪ ಹೋಗಿ ವಿಚಾರಿಸ್ರೀ'' ಅಂದಳು. ಗಂಡನಿಗೂ ಅದೇ ಸರಿ ಅನಿಸಿತು. ಬೇಗ ಬೇಗ ಆಕೆಯ ಮನೆಗೆ ಹೋದ.

ಆ ಹೆಂಗಸು ಮನೆ ಮುಂದಿನ ಗಿಡಗಳಿಗೆ ನೀರು ಹಾಕುತ್ತಿದ್ದಳು. ಈತ ಕಾರು ಮಾರಿದ ವಿಚಾರ ಕೇಳಿದ. ಅವಳು ತುಂಬಾ ಸಹಜವಾಗಿ ''ಹೌದು ನಾನು ಕಾರನ್ನು ನಿಮ್ಮ ಮಗನಿಗೆ ಮಾರಿದೆ, ಅದೂ ಸಾವಿರ ರೂಪಾಯಿಗೆ'' ಅಂದಳು. ಅವನು ''ಸರಿ, ಕಾರನ್ನು ಬರೀ ಸಾವಿರ ರೂಪಾಯಿಗೆ ಮಾರೋ ಹಿನ್ನೆಲೆ ಏನು'' ಅಂತ ಕೇಳಿದಾಗ ಅವಳು ಹೇಳಿದಳು ''ಈಚೆಗೆ ಹದಿನೈದು ದಿವಸಗಳಿಂದ ನನ್ನ ಗಂಡ ಕಾಣುತ್ತಿಲ್ಲ. ನೆನ್ನೆ ನನಗೆ ಗೊತ್ತಾಗಿದ್ದೆಂದರೆ ಅವನು ಅವನ ಕಛೇರಿಯ ಕಾರ್ಯದರ್ಶಿ ಜೊತೆ ಎಲ್ಲೋ ದೂರದ ಊರಲ್ಲಿ ಸೆಟ್ಲ್ ಆಗಿದ್ದಾನೆ, ಇನ್ನು ಅವನು ಹಿಂದಿರುಗಲಾರ ಅಂತ. ಅವನ ಹೊರಗಿನ ಮೇವಿನ ವಿಚಾರ ಮೊದಲಿಂದ್ಲೂ ನನಗೆ ಗೊತ್ತಿತ್ತು ಮತ್ತು ಈ ಘಟನೆ ಕೂಡಾ ನಾನು ನಿರೀಕ್ಷಿಸಿದ್ದೇ. ನೆನ್ನೆ ಬೆಳಗ್ಗೆ ಇದ್ದಕ್ಕಿದ್ದಂತೆ ಅವನು ಫೋನ್ ಮಾಡಿದ. ಆಫೀಸ್ ಕೆಲಸ ಅಂತ ಬಂದು ಎಲ್ಲೋ ದೂರದ ದ್ವೀಪದಲ್ಲಿ ಸಿಕ್ಕಿಹಾಕಿಕೊಂಡಿದ್ದೇನೆ. ನಾನು ಬರೋದು ಇನ್ನೂ ಐದಾರು ತಿಂಗಳು ಆಗಬಹುದು. ನನಗೆ ಈಗ ದುಡ್ಡು ಬೇಕು, ಅದಕ್ಕೆ ನನ್ನ ಕಾರು ಮಾರಿ ದುಡ್ಡನ್ನು ನನ್ನ ಬ್ಯಾಂಕ್ ಖಾತೆಗೆ ಹಾಕು ಅಂತ ಏನೇನೋ ಕಥೆ ಕಟ್ಟಿದ. ಅವನ ಮೋಸ ಗೊತ್ತಾಯ್ತು. ಮೋಸಕ್ಕೆ ಪ್ರತಿಮೋಸ ಹೇಗೆ ಅಂತ ಯೋಚಿಸಿದಾಗ ನನಗೆ ಹೊಳೆದದ್ದು ಇದೇ ಉಪಾಯ. ಕಾರು ಮಾರಿದ್ದಕ್ಕೆ ಬಂದಿದ್ದು ಇಷ್ಟೇ ಹಣ ಅಂತ ಅವನ ಖಾತೆಗೆ ಸಾವಿರ ರೂಪಾಯಿ ಜಮೆ ಮಾಡಿದೆ. ಅನುಭವಿಸಲಿ ಅದೇನು ಸುಖ ಅನುಭವಿಸುತ್ತಾನೋ, ಅದೆಷ್ಟು ದಿನ ಅವಳ ಜೊತೆ ಇರ್ತಾನೋ ನಾನೂ ನೋಡ್ತೀನಿ. ಆದರೆ, ನಿಮ್ಮ ಮಗ ನಮ್ಮ ಹೊಸ ಕಾರಿನಲ್ಲಿ ಸುಖವಾಗಿರಲಿ, ಆನಂದವಾಗಿರಲಿ'' ಅಂದಳು. ಅವನಿಗೆ ಮಾತಾಡೋದು ಏನೂ ಉಳಿದಿರಲಿಲ್ಲವಾದ್ದರಿಂದ ಸುಮ್ಮನೇ ಹಿಂದಿರುಗಿದ.

☆

# ನಮ್ಮೊಳಗಿರುವುದು... ನಾವಲ್ಲ!

**- ಗಣೇಶ್ ಹೆಗ್ಗಡೆ**

**ಎಂ**ದಿನಂತೆ ಕಾಮನ್ ರೂಮಿನಲ್ಲಿ ಕುಳಿತಿದ್ದ ನಮಗೆ ಅಂದು ದೊಡ್ಡ ಅಚ್ಚರಿ ಕಾದಿತ್ತು. ಅಧ್ಯಕ್ಷ ಪೀಠವನ್ನಲಂಕರಿಸಿದ್ದ ರಾಯರು ಸಭೆಯನ್ನುದ್ದೇಶಿಸಿ, ''ಇವತ್ತು ನೀವೆಲ್ಲಾ ನಿರೀಕ್ಷಿಸಿದಂತೆ ನಾನು ಯಾವುದೇ ಕಹಾನಿ ಹೇಳುವುದಿಲ್ಲ. ಹೊಸ ವರ್ಷದ ಆರಂಭದ ದಿನ ನಿಮ್ಮ ಸಂಕಲ್ಪ ಏನಿರಬಹುದೆಂಬುದನ್ನೂ ಸಹ ಪ್ರಶ್ನಿಸುವುದಿಲ್ಲ. ಬಲು ದಿನಗಳಿಂದಲೂ ನನ್ನನ್ನೊಂದು ಪಾಪ ಪ್ರಜ್ಞೆ ಕಾಡುತ್ತಿದೆ. 'ನಮ್ಮೊಳಗಿರುವುದು... ನಾವಲ್ಲ..' ಹೌದೆ? ಈ ಪ್ರಶ್ನೆಗೆ ನೀವ್ಯಾರೂ ತತ್‌ಕ್ಷಣ ಉತ್ತರಿಸಬೇಕೆಂದಿಲ್ಲ. ಒಂದು ಘಂಟೆಯ ಸಮಯ ಕೊಡುತ್ತೇನೆ. ನೀವೆಲ್ಲಾ ಧ್ಯಾನಾಸಕ್ತರಾಗಿ ಈ ಪ್ರಶ್ನೆಗೊಂದು ಚಾಲನೆ ಕೊಡಿ. ನಂತರ ನಿಮ್ಮನ್ನೆಲ್ಲಾ ಎಚ್ಚರಿಸುವ ಜವಾಬ್ದಾರಿ ನನ್ನದು'' ಎಂದಾಗ, ನಾವೆಲ್ಲಾ ರಾಯರ ಅಣತಿಯಂತೆ ಮೊಬೈಲ್ ಮ್ಯೂಟ್ ಮಾಡಿ, ಕಣ್ಮುಚ್ಚಿ ಕುಳಿತುಕೊಂಡೆವು.

★★★

ಯಾಕೋ ಏನೋ ಮೊನ್ನೆಯ ದೃಶ್ಯ ನನ್ನ ಕಣ್ಣೆದುರಿಗೆ ಬಂದಿತು. ವರಾಂಡದಲ್ಲಿ ಪೇಪರ್ ಓದುತ್ತಾ ಕುಳಿತಿದ್ದ ನನಗೆ ಇವಳು ಮತ್ತು ನೆರೆಮನೆಯಾಕೆ ಕಾಂಪೌಂಡ್ ಗೋಡೆಯನ್ನೇ ಗಡಿಯಾಗಿಸಿಕೊಂಡು ಸಂಭಾಷಿಸುತ್ತಿದ್ದುದು ಗಮನಕ್ಕೆ ಬಂತು.

'ಇತ್ತೀಚೆಗೆ ಇವ್ರಿಗೆ ಮಾಮೂಲು ತಿಂಡಿ ಇಡ್ಲಿ, ಉಪ್ಪಿಟ್ಟು ಅಂದ್ರೆ ವಾಕರಿಕೇರಿ. ಅದಕ್ಕೆ ಇವತ್ತು ಮಸಾಲೆ ದೋಸೆ, ಚಟ್ನಿ, ಸಾಗು ಮಾಡಿದ್ದೆ.' ಎಲಾ ಇವಳಾ ಅನ್ನಿಸಿತು. ಬೆಳಿಗ್ಗೆ ಅವಲಕ್ಕಿ ವಗ್ಗರಣೆ ಮಾಡಿ, ತಿಂಡಿ ತಟ್ಟೆಯನ್ನು ಮುಂದೆ ಕುಕ್ಕಿ ನನ್ನ ಪ್ರತಿಕ್ರಿಯೆಗೂ ಕಾಯದೆ, ಹೊರಟು ಹೋಗಿದ್ದಳು. 'ಅಂದ್ಹಾಗೆ, ನಿಮ್ಮ ಮಗ-ಸೊಸೆ ದೂರದ ಪೊಲ್ಲಾಚೀಲಿ ಹೇಗಿದಾರ್ರೀ?' ಎಂಬ ಇವಳ ಪ್ರಶ್ನೆಗೆ ಆ ಪುಣ್ಯಾತ್ಗಿತ್ತಿ 'ಅವರಿಗೇನ್ರೀ ಗುನುಗು? ಸಂಬಳ ಲಕ್ಷದ ಮೇಲೆ ಬರುತ್ತೆ. ಜಾಮ್-ಜೂಮಂತ ಇದ್ದಾರೆ ಮಗ-ಸೊಸೆ' ಎಂದಾಗ ನನಗೆ ತಲೆ ತಿರುಗಿದಂತಾಯ್ತು. ಯಾಕೆಂದರೆ ಅಂದು ಬೆಳಿಗ್ಗೆ ಆ ಪುಣ್ಯಾತ್ಗಿತ್ತಿಯ ಗಂಡ ಹಾಲಿನ ಬೂತ್ ಬಳಿ ಸಿಕ್ಕಿ 'ಸಾರ್ ನನ್ನ ಮಗನಿಗೆ ಅಷ್ಟೊಳ್ಳೆ ಸಂಬಳವಿಲ್ಲ, ಡಿಡಕ್ಷನ್ ಎಲ್ಲಾ ಕಳೆದು ಇಪ್ಪತ್ತು ಸಾವಿರ ಕೈಗೆ ಬರುತ್ತೆ. ನಿಮ್ಮ ಇನ್‌ಫ್ಲುಯೆನ್ಸ್ ಯೂಸ್ ಮಾಡಿ ಇಲ್ಲಿ ಎಲ್ಲೋ ಕೆಲ್ಸ ಕೊಡ್ಸಿ' ಎಂದು ಅಲವತ್ತು ಕೊಂಡಿದ್ದ.

ಬ್ರೆಡ್ಡಿಗೆ ಜಾಮ್ ಕೊಳ್ಳಲು ತ್ರಾಸು ಪಡುತ್ತಿರುವ ಮಗನ ವಾಸ್ತವ ಸ್ಥಿತಿಯನ್ನು ಮರೆಮಾಚಿ ಜಾಮ್-ಜೂಮಾಗಿದ್ದಾರೆ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿರುವ ಆ ಹೆಂಗಸನ್ನೂ ಮತ್ತು ಮೊನ್ನೆ ವಿದ್ಯಾರಣ್ಯಪುರದ ಶಂಕರಿಯ ಹತ್ತಿರ ಐನೂರು ರೂಪಾಯಿಗೆ ಕೊಂಡುಕೊಂಡ ಸರವನ್ನು ಐವತ್ತು ಸಾವಿರ ಎಂದು, ಅವಳಷ್ಟೆ ರೈಲು ಬಿಡುತ್ತಿರುವ ನಮ್ಮ ಮನೆಯವಳನ್ನೂ ನೆನೆದಾಗ ರಾಯರದ್ದು ಎಂಥಹ ಸತ್ಯ ಚಿಂತನೆ ಎನ್ನಿಸಿತು. ಖಂಡಿತಾ 'ನಮ್ಮೊಳಗೆ ನಾವಿಲ್ಲ' ಎಂಬುದು ದೃಢವಾಯಿತು.

ಇನ್ನು ಮುಕ್ಕಾಲು ಘಂಟೆಯ ಅವಧಿ ಬಾಕಿ. ನನ್ನ ಸಮಾಧಿ ಸ್ಥಿತಿ ಹಾಗೆಯೇ ಮುಂದುವರೆಯಿತು. ನಿನ್ನೆ ಮಧ್ಯಾಹ್ನವಷ್ಟೇ ಜರುಗಿದ ಆ ಪ್ರಸಂಗ ಇನ್ನೂ ಸ್ವಾರಸ್ಯವಾಗಿತ್ತು. ಉತ್ತರಹಳ್ಳಿಯಿಂದ ಕೆಂಗೇರಿಗೆ ಹೋಗಲು 375 ಡಿ ಬಸ್ ಹತ್ತಿ ಕೂತಿದ್ದೆ. ಬಸ್ ವಿಷ್ಣುವರ್ಧನ್ ಸಮಾಧಿ ಬಳಿ ಹಾದುಹೋಗುತ್ತಿತ್ತು. ಅಷ್ಟರಲ್ಲಿ ಪಕ್ಕದ ಸೀಟಿನಲ್ಲಿ ಕುಳಿತಿದ್ದ ವ್ಯಕ್ತಿಯ ಜೇಬಿನಲ್ಲಿದ್ದ ಮೊಬೈಲ್ ರಿಂಗಣಿಸಿತು.

'ಇಲ್ಲಾ ಕಣಣ್ಣಾ ಈಗ ನೀನು ಮನೆಗೆ ಬಂದ್ರೂ ನಾನು ಸಿಗಲ್ಲ, ಜಸ್ಟ್ ನೌ ಶೃಂಗೇರಿ ಬಸ್ಸಿಗೆ ಹತ್ತಿದ್ದೇನೆ. ಪಕ್ಕದಲ್ಲಿ ಹೆಂಡ್ತೀನೂ ಕುಂತವ್ಳೆ. ಶೃಂಗೇರಿಗೆ ಹೋದ್ಮೇಲೆ ಧರ್ಮಸ್ಥಳ. ಏನು ಪಾಪ ಮಾಡಿತ್ತು? ವಾಪ್ಸು ಬರೋದು ಒಂದ್ವಾರ ಆದ್ರೂ ಆಗುತ್ತೆ..' ಇವನ ಮಾತನ್ನು ಕದ್ದು ಕೇಳಿ ನನಗೇ ತಬ್ಬಿಬ್ಬಾಯ್ತು. ಇವಾನ್ಯಾರೋ ಮರಿ ಮಲ್ಯನೇ ಇರ್ಬೇಕು ಎಂಬ ಸಂದೇಹವೂ ಕಾಡಿತು. ನನ್ನ ಮುಖದಲ್ಲಿ ಪುಟಿದೇಳುತ್ತಿದ್ದ ಗೊಂದಲದ ಗೆರೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿದ ಆ ಆಸಾಮಿ, 'ಅಣ್ಣಾ ವಸಿ ಕೆಂಗೇರಿ ಸ್ಟಾಪ್ ಬಂದ್ರೆ ಹೇಳಿ. ನಾನು ಈ ರೂಟಿಗೆ ಹೊಸಬ' ಅಂದ. ನನ್ನಲ್ಲಿದ್ದ ಸ್ಯಾಡಿಸ್ಟಿಕ್ ಮನಸ್ಸು ಜಾಗೃತವಾಗಿ, 'ಕೆಂಗೇರಿ ಇಷ್ಟು ಬ್ಯಾಗ ಹೇಗ್ಬರುತ್ತೆ, ಇನ್ನೂ ಸಿಕ್ಸ್ ಹವರ್ಸ್ ಜರ್ನಿ, ಹಾಸನ–ಚಿಕ್ಕಮಗಳೂರು–ಬಾಳೆಹೊನ್ನೂರು–ಜಯಪುರ.. ಎಲ್ಲಾ ಕ್ರಾಸ್ ಆಗ್ಬೇಕು' ಎಂದೆ. ಆತ ನನ್ನನ್ನೇ ದುರದುರ ನೋಡಿ ನೆಕ್ಸ್ಟ್ ಸ್ಟಾಪಿನಲ್ಲೇ ಇಳಿದು ಹೋದ. ಆಗ ಅವನೊಳಗೆ... ಖಂಡಿತಾ ಅವನಿಲ್ಲವೆನಿಸಿ ರಾಯರ ಬಗ್ಗೆ ನನ್ನ ಗೌರವ ಇಮ್ಮಡಿ ಹೆಚ್ಚಿತು.

ಇನ್ನೂ ಅರ್ಧ ಘಂಟೆಯ ಅವಧಿ. ಅಪ್ಪಣೆಯಿಲ್ಲದೆಯೆ ನಾನು ಕಣ್ತೆರೆಯುವಂತಿಲ್ಲ. ನನ್ನ ಸ್ಮೃತಿ ಪಟಲದ 70 ಎಂ.ಎಂ. ಸ್ಕ್ರೀನ್ ನನಗರಿವಿಲ್ಲದೆಯೆ ತೆರೆದುಕೊಂಡಿತು. ನಾನು ಬಾಲ್ಯಕ್ಕೆ ಜಾರಿ ಹೋಗಿದ್ದೆ ನಿವೃತ್ತ ಅರಣ್ಯಾಧಿಕಾರಿಯಾದ ತಾತ ತಮ್ಮೆಲ್ಲಾ ಮೊಮ್ಮಕ್ಕಳ ಮುಂದೆ ತಮ್ಮ ಸಾಹಸ ಗಾಥೆ ಆರಂಭಿಸಿದ್ದರು.

'ಒಂದ್ಸಲ ಏನಾಯ್ತು ಗೊತ್ತೆ... ನನ್ಗೂ.... ಆರಡಿ ಉದ್ದದ ಪಟ್ಟೆ ಹುಲಿಗೂ... ಎರಡಡಿ ಡಿಫರೆನ್ಸು.' 'ಎಲ್ಲಿ ತಾತ? ಝೂ ಗಾರ್ಡನಲ್ಲೇ?' ಇನ್ನೂ ನನ್ನ ಪ್ರಶ್ನೆಯೇ ಮುಗಿದಿರಲಿಲ್ಲ, ಯಾರೊ ನನ್ನ ತಲೆಗೆ ಪಠಾರ್ ಎಂದು ಹೊಡೆದ ಹಾಗಾಯ್ತು.

'ಪ್ರಾರಬ್ಧ ಮುಂಡೇದೆ. ಶಿವಮೊಗ್ಗದ ಹತ್ತಿರ ಕುಂಸಿ ಕಾಡಿನಲ್ಲಿ ಹೀಗಾಗಿದ್ದು ಇನ್ನೊಂದ್ಸಲ ಏನಾಯ್ತು ಗೊತ್ತೆ? ಕೊಟ್ಟಿಗೆ ಹಾರದ ಒಂದು ಫಾರೆಸ್ಟು ಐಬಿಯಲ್ಲಿ ವಿಧಿಯಿಲ್ಲದೆ ಒಂದು ರಾತ್ರಿ ನಾನು ತಂಗಬೇಕಾಯ್ತು. ಅವತ್ತು ಅಮಾವಾಸ್ಯೆ ಬ್ಯಾರೆ. ಸಾಲದ್ದಕ್ಕೆ ಐ.ಬಿ. ಮೇಟಿ 'ಸಾರ್ ಯಾವುದಕ್ಕೂ ಹುಷಾರು, ಇಲ್ಲಿ ರಾತ್ರೆ ಒಂಥರಾ ಕಾಟ' ಎಂದು ಬೇರೆ ಹೆದರಿಸಿಬಿಟ್ಟಿದ್ದ. ಬೆಳಿಗ್ಗೆ ಎದ್ದು ಕಣ್ಣು ಬಿಡುತ್ತೇನೆ, ನಾನು ರೂಮಿನಲ್ಲೇ ಇಲ್ಲ. ಬದಲಿಗೆ ಕಾಂಪೌಂಡಿನಾಚೆ ಹುಣಸೆ ಮರದ ಕೆಳಗೆ ಮಲಗಿದ್ದೇನೆ.'

ಕಥೆ ಕೇಳಿ ಮೊಮ್ಮಕ್ಕಳೆಲ್ಲಾ ಬೆಚ್ಚಿ ತಾತನಿಗೆ ಒರಗಿ ಕುಳಿತುಕೊಂಡೆವು. ಇದ್ದುದರಲ್ಲಿ ತುಸು ಧೈರ್ಯವಂತನಾದ ನಾನು ''ತಾತ, ನಿಮ್ಗೆ ನಿದ್ರೇಲಿ ನಡೆಯುವ ಅಭ್ಯಾಸ ಇತ್ತಂತೆ ಹೌದೆ? ಅಜ್ಜಿ ಆಗಾಗ್ಗೆ ಹೇಳುತ್ತಿದ್ದಳು.'' ಇನ್ನೂ ನನ್ನ ಮಾತೇ ಮುಗಿದಿಲ್ಲ, ಮತ್ತೆ ಯಾರೊ ನನ್ನ ತಲೆಗೆ ಪಠಾರ್ ಎಂದು ಹೊಡೆದ ಅನುಭವ. ಹಾಗೆ ಅಂದು ಹೊಡೆದದ್ದು ತಾತನೋ? ಅಥವಾ ಅವರೊಳಗಿದ್ದ ಬುರುಡೆ ದೆವ್ವವೋ? ಎಂಬ ಸಂಶಯ ಈಗಲೂ ನನಗೆ.

★★★

‘ಈಗ ಅವಧಿ ಮೀರಿದೆ’ ರಾಯರ ಗಡಸು ದನಿ ಕೇಳಿ ಒಬ್ಬೊಬ್ಬರಾಗಿ ನಾವು ಕಣ್ತೆರೆದೆವು.

‘ಹೇಗಿತ್ತು? ಅನುಭವ?’ ಎಂಬ ರಾಯರ ಪ್ರಶ್ನೆಗೆ ‘ಟ್ರೂಟು ಲೈಫ್ ಸರ್, ಖಂಡಿತಾ ನಮ್ಮೊಳಗೆ.... ನಾವಿಲ್ಲಾ...’ ಎಂದೆವು ಒಕ್ಕೊರಲಿನಿಂದ.

‘ಅಂದ್ವಾಗೆ ಯಾಕ್ಸಾರ್ ಬೆಳ್ಳಂಬೆಳಿಗ್ಗೆ ಕಾಮನ್ ರೂಮಿನಲ್ಲಿ ಈ ಜಿಜ್ಞಾಸೆ ತಮ್ಮನ್ನು ಕಾಡಿತ್ತು?’ ಎಂದು ಕೌತುಕಗೊಂಡು ಕೇಳಿದೆ. ರಾಯರು ಕಾಮನ್ ರೂಮಿನ ಕಿಟಕಿಯಾಚೆ ಮೌನದಿಂದ ನೋಡಿದರು. ಬಿಲ್ಡಿಂಗ್ ಪಕ್ಕದ ಹುಲ್ಲು ಮೈದಾನದಲ್ಲಿ ಸಾಕಷ್ಟು ಹಸುಗಳು ನಿಶ್ಚಿಂತೆಯಿಂದ ಹುಲ್ಲು ಮೇಯುತ್ತಿದ್ದವು. ಅವುಗಳತ್ತ ಭಕ್ತಿ ಭಾವದಿಂದ ಕೈ ಮುಗಿದು, ‘ಸಧ್ಯ ಘನವೆತ್ತ ನ್ಯಾಯಾಧೀಶರು ಈ ಜಿಜ್ಞಾಸೆಯಿಂದ ಹೊರಬಂದು ತೀರ್ಪು ನೀಡಿದರು. ಕೊಂಚ ಎಡವಟ್ಟಾಗಿದ್ದರೂ ಸ್ವಲ್ಪ ಸಮಯದಲ್ಲೇ ಈಗಿನ ‘ಬಿಹಾರ’ ‘ಬಿ.....ಹಾರರ್!’ ಆಗಿ ಹೋಗುತ್ತಿತ್ತು.

ಸಭೆ ಬರಖಾಸ್ತು ‘ಸತ್ಯ ಮೇವ ಜಯತೆ’ ಎಂದು ಎದ್ದು ನಿಂತರು ರಾಯರು. ನಾವೂ ಜಯತೆ ಎಂದೆವು.

☆

---

## ಕಾರಣ ಏನು

ಒಂದು ದಿನ ಸ್ಟೇಷನ್ನಿಗೆ ದೂರವಾಣಿ ಕರೆಯೊಂದು ಬಂದಿತು.

| | | |
|---|---|---|
| ಆತ | : | ಹಲೋ ಪೋಲೀಸ್ ಸ್ಟೇಷನ್, ನಮ್ಮ ಪಕ್ಕದ ಮನೆಯಾಕೆ ಆಗ ತಾನೇ ಒರೆಸಿದ ನೆಲದ ಮೇಲೆ ಕಾಲಿಟ್ಟ ಅಂತ ತನ್ನ ಗಂಡನನ್ನೇ ಷೂಟ್ ಮಾಡಿಬಿಟ್ಟಿದ್ದಾಳೆ. |
| ಇನ್ಸ್‌ಪೆಕ್ಟರ್ | : | ನೀವು ಆಕೆಯನ್ನು ಹಿಡಿದಿಟ್ಟುಕೊಂಡಿದ್ದೀರ. |
| ಆತ | : | ಇಲ್ಲ ನಾವು ಹಿಡಿದಿಟ್ಟುಕೊಳ್ಳಲು ಸಾಧ್ಯವಿಲ್ಲ. |
| ಇನ್ಸ್‌ಪೆಕ್ಟರ್ | : | ಯಾಕೆ? |
| ಆತ | : | ಯಾಕೇಂದ್ರೆ ನೆಲ ಇನ್ನೂ ಒದ್ದೆ ಇದೆ. |


# ವ್ಯಂಗ್ಯ ಮೆಲುಕು

**- ಪ್ರಕಾಶ್ ಶೆಟ್ಟಿ**


೬೦-೮೦ ರ ದಶಕದಲ್ಲಿ ದಿನಪತ್ರಿಕೆಗಳಲ್ಲಿ ರಾಜಕೀಯ ವ್ಯಂಗ್ಯಚಿತ್ರಕಾರರು ಇದ್ದದ್ದು ಬರೀ ಮೂವರು ! ಪ್ರಜಾವಾಣಿಯ ರಾಮಮೂರ್ತಿ, ನವಭಾರತದ ರಘು, ಸಂಯುಕ್ತ ಕರ್ನಾಟಕದ ನರೇಂದ್ರ. ಅಂದು ರಾಜಕೀಯ ವ್ಯಂಗ್ಯಚಿತ್ರಗಳು ಪತ್ರಿಕೆಯ ಮುಖಪುಟದಲ್ಲೇ ರಾರಾಜಿಸುತಿದ್ದವು !




ಮಹಾಜನ್ ವರದಿ ಫಲದಾಯಕವಾಗಬಹುದು ಅಂದುಕೊಂಡಿದ್ದ ಅಂದಿನ ಮುಖ್ಯ ಮಂತ್ರಿ ನಿಜಲಿಂಗಪ್ಪ.



ಅಮೆರಿಕದ ರಾಜ್ಯಾಂಗ ಕಾರ್ಯದರ್ಶಿ ಜೋನ್ ಪೋಸ್ಟರ್ ಡಲ್ಲೆಸರ್ ನವದೆಹಲಿಗೆ ಆಗಮಿಸಿ ಪ್ರಧಾನಿ ನೆಹರು ಅವರನ್ನು ಭೇಟಿಯಾಗಿದ್ದರು




ಜನತಾ ಸರಕಾರದ ಪ್ರಧಾನಿ ಮೊರಾರ್ಜಿ ದೇಸಾಯಿ ಮತ್ತು ಪಕ್ಷದ ಅಧ್ಯಕ್ಷ ಚಂದ್ರಶೇಖರ್ ಅವರು ಇಂದಿರಾ ಗಾಂಧಿ ಬಗ್ಗೆ ಎಚ್ಚರಿಕೆ ವಹಿಸಿದ್ದರು.

# ಯಾರಾಕಿ?

- ಗುಂಡುರಾವ್ ದೇಸಾಯಿ

ಒಬ್ಬೊಬ್ಬರಿಗೆ ಚೆಂದಾಗಿ ಸಹಬಾಳ್ವೆ ಮಾಡಿಕೊಂಡಿದ್ರನೂ ಬೇಜಾರಾಗುತ್ತಂತೆ. ಅಂತಹ ದುರ್ಗುಣ ಪಮ್ಮಿಗೆ ಯಾಕ ಹೊಕ್ಕಿತೊ ಗೊತ್ತಿಲ್ಲ ರಜಾಕ್ಕ ಅಂತ ತವರಮನಿಗೆ ಹೋದಾಕಿ ತಿಂಗಳಾದ್ರೂ ಮರಳಲಿಲ್ಲ. ನಿತ್ಯ ಫೋನ ಮಾಡಿ 'ಬಂದು ಬಿಡು ಮಕ್ಕಳು ದೊಡ್ಡ ಕ್ಲಾಸಿಗೆ ಬರಕತಾರ, ಅವರ ಭವಿಷ್ಯದ ಬಗ್ಗೆ ಚಿಂತಿ ಮಾಡೋ ಟೈಮಿದು. ಎಲ್ಲ ಆಗಿ ಹೋಗ್ಯಾದ ತೀರಿ ಹೋಗ್ಯಾದ ತವರಮನಿಗೆ ಏನಿಟ್ಟಿದಿ. ಬಂದು ಬಿಡು ನನಗೂ ತ್ರಾಸ ಆಗ್ಯಾದ' ಎಂದು ಪದ್ದು ಗೋಗರೆದರೂ.

'ಹಾಂ ಗೊತ್ತಾಯ್ತುರಿ, ನಿಮಗ ತ್ರಾಸ ಆಗ್ಯಾದಂತ ಕರಿಯಾಕತೀರಿ. ವರ್ಷಾನುಗಟ್ಟಲೇ ಮಾಡಿ ಹಾಕವಳಿಗೆ ತ್ರಾಸ ಆಗಲ್ವೇನು?'

'ಅಲ್ಲ ಹಿಂಗ್ಯಾಕ ಮಾತಾಡಕತಿ, ನಿನ್ನ ಕೆಲಸದ ಬಗ್ಗೆ ಚಿಂತಿಸಿಲ್ಲೇನು, ಎಷ್ಟೋ ಸಾರಿ ನಿನಗ ಸಹಾಯ ಮಾಡಿಲ್ಲೇನು. ನಿತ್ಯ ನಿನ್ನ ಕೆಲಸದಾಗ ನೆರವಾಗಲ್ವೇನು?'

'ಏನೇ ಇದ್ರೂ ನೀವು ಗಂಡಸರು ಸ್ವಾರ್ಥಿಗಳು, ನಿಮ್ಮ ಬಗ್ಗೇನೆ ಯೋಚನೆ ಮಾಡ್ತೀರಿ. ನಮ್ಮ ಬಗ್ಗೆ ಚಿಂತಿಸೋದೆ ಇಲ್ಲ.'

'ಅಲ್ಲ ತಲಿಗಿಲಿ ಕೆಟ್ಟಾದೇನು ಅಥವಾ ಯಾರಾದರೂ ಏನರ ತುಂಬ್ಯಾರೇನು. ನಿನಗ ಏನು ಕಡಿಮಿ ಮಾಡ್ಯಾದ. ಬೇಡಿದ್ದು, ಕಾಡಿದ್ದು, ನೋಡಿದ್ದು ಎಲ್ಲಾನೂ ಕೊಡಿಸೀನಿ. ನಿನ್ನ ಮಾತ ವಿಚಿತ್ರ ಅನಸಕತಾವ. ಖಾಲಿ ಇರೋ ತಲಿಗೋಳು ಏನ ಹೊಕ್ಕಿರಬೇಕು' ಅಂತ ಪದ್ದು ಅಂದಿದ್ದ ತಪ್ಪಾತು. ದಾರಿಗೆ ಬರುತ್ತಿದ್ದವಳು 'ಹಾಂ! ನಾನು ಓದದವಳು ಅಂತ ಸಿಕ್ಕಂಗ ಮಾತಾಡತಿರಿ. ನಿಮ್ಮ ಕಣ್ಣಿಗೆ ಅಷ್ಟು ಕೀಳಾಗಿ ಬಿಟ್ಟನಲ, ಬರಂಗಿಲ್ಲ ನೋಡ್ರಿ ಏನು ಮಾಡಿಕೊಂತಿರಿ?' ಎಂದು ಪ್ರಶ್ನೆ ಎಸೆದ್ಲು, ಪಾಪ ಪದ್ದು ಫೋನ ಇಟ್ಟ, ತಿಳದಾಕಾಗಿ ಹಿಂಗ್ಯಾ ಮಾತಾಡದ್ಲು ಅಂತ ಗೊತ್ತಾಗಲಿಲ್ಲ. ಎರಡು ಮೂರು ಬಾರಿ ಮತ್ತೆ ಫೋನಾಯಿಸಿದ. ಸರಿಯಾದ ಸ್ಪಂದನೆ ಸಿಗಲಿಲ್ಲ. ಅತಿಯಾದ್ರೂ ಅಮೃತ ಕೂಡ ವಿಷವಾಗುತ್ತಂತ, ಅಲ್ಲದೆ 'ತೀರ ಸಡಲಸಿಕ್ರ ತಲಿಮ್ಯಾಲೆ ಚಟ್ನಿ ಹರಿತಾರ' ಅನ್ನಂಗ ಈಕಿಗೆ ಬುದ್ದಿ ಕಲಿಸೋಣ ಅಂತ ಸುಮ್ಮನಾದ.

ವಾರಕಳಿತು ಪದ್ದುನಿಂದ ಫೋನ್ ಬಾರದ ಕಾರಣ ಪಮ್ಮಿ ತತ್ತರಿಸಿದ್ಲು. ಸುಮ್ಮನೆ ಏನೋ ಮಾಡಕ ಹೋಗಿ ಪಾಪ ಅವರ ಮನಸ್ಸಿಗೆ ತ್ರಾಸ ಮಾಡಿಬಿಟ್ಟೆ ಹಾಗ ಮಾಡಬಾರದಾಗಿತ್ತು ಅಂತ ಕಳಕಳಿಸಕತಿದ್ಲು. ಪದ್ದು ಫೋನನ್ನ ಔಟ್ ಆಫ್ ಕವರೇಜ್ ಇಟ್ಟುದದರಿಂದ ಅವಳಿಗೆ ಭಯ ಹಾಗೂ ಆತಂಕ ಎರಡು ಶುರುವಾದ್ವು. ಲ್ಯಾಂಡ್ ಫೋನನ್ನು ಎತ್ತಿ ಇಟ್ಟದ್ದರಿಂದ ಅವಳಿಗೆ ಅಳೋದೊಂದೆ ಬಾಕಿ ಉಳಿದಿತ್ತು. ವಾರ ಕಳಿದಿರಲಿಲ್ಲ ರಾತ್ರಿ ಹತ್ತರ ಸುಮಾರಿಗೆ ಫೋನ ಬಂತು. ಪದ್ದು ಯಾರೊಡನೆ ಮಾತಾಡತಾ ಇದ್ದಾಗ 'ನೈಟ್ ಬಂದುಬಿಡು, ಕಾಲ್ ಬರತಿದೆ. ಆಮೇಲೆ ಮಾತಾಡತೀನಿ' ಎಂದು 'ಹಲೋ' ಅಂತ ರಿಸೀವ್ ಮಾಡಿದ. ಕರ್ಮಕ್ಕ ಅದು ಈಕಿದ ಇತ್ತು. 'ಯಾರಿಗೇರಿ ನೈಟು ಬಾ ಅಂತ ಹೇಳಿದ್ದು?'

'ಯಾರಿಗರ ಹೇಳ್ಲಿ ನಿನಗ್ಯಾಕೆ, ಏನು ಮಾಡಿದ್ದು?'

'ಅಲ್ಲ ಇಷ್ಟು ಹೊತ್ತಿನ್ಯಾಗ ಯಾರ ಹತ್ರ ಮಾತಾಡತಾ ಇದ್ರಿ.'

'ನಮ್ಮನಮ್ಮ ತಿಪ್ಲ ಏನಾರ ಇರತಾವ ಅದೆಲ್ಲ ನಿನಗ್ಯಾಕೆ. ನಾನು ಕಣ್ಣಿಗೆ ಹ್ಯಾಂಗರ ಕೆಟ್ಟ ಮನುಷ್ಯ ಆಗಿನಿ. ನೀನು ಹ್ಯಾಂಗರ ತಿಳಕ' ಅಂತ ಬೇಕಂತಲೆ ಕಟ್ ಮಾಡಿದ. ಆಕಿಗೆ ಇನ್ನಷ್ಟು ಆತಂಕ ಸುರುವಾತು. ಒಮ್ಮೆ ಯಾವುದೋ ಮಾತಿಗೆ ಬಂದಾಗ ಆಕೆಗಿಂತಲೂ ನೋಡಲು ಚೆನ್ನಾಗಿದ್ದ ಪದ್ದು, ಬೇಕಂತಲೇ ನಿನಗ ಡೈವೋರ್ಸ ಕೊಟ್ಟು ಇನ್ನೊಂದು ಮದುವಿ ಮಾಡಿಕೊಂತಿನಿ ಅಂತ ಧಮುಕಿ ಹಾಕಿದ್ದ. 'ಅಯ್ಯ ಮೊದಲೇ ನಮ್ಮ ಮಂದ್ಯಾಗ ಕನ್ಯಾ ಸಿಗೋರಿಗೆ ಸಿಗವಲ್ವು, ಸೆಕೆಂಡ ಹ್ಯಾಂಡ ಆಗಿರೋ ನಿಮ್ಮನ್ನ ಯಾರ ಮಾಡಿಕೊಂತಾರಿ' ಎಂದು ಛೇಡಿಸಿದ್ದು, 'ಲವ್ ಈಜ್ ಬ್ಲೈಂಡ್. ಯಾರಿಗೆ ಯಾ ಟೈಮಲ್ಲಿ ಹ್ಯಾಂಗ ಆಗತ್ತ ಅಂತ ಹೇಳಾಕ ಆಗಲ್ಲ, ಮೂರುವರ್ಷ ಹಿಂದ ಮುದುಕ ಮಂತ್ರಿ ದಿಗ್ವಿಜಯಸಿಂಗ 40ರ ಟಿ.ವಿ. ನಿರೂಪಕಿ ಜೊತೆ ಲಗ್ನ ಮಾಡಿಕೊಂತಿನಿ ಅಂತ ಅವರಿಬ್ಬರ ರಾಸಲೀಲೆಗಳ ಫೋಟೊ ಹೊರಬಿದ್ದ ಮೇಲೆ ಸ್ಟೇಟ್‌ಮೆಂಟ್ ಕೊಡಲಿಲ್ಲವೇ? ಪಾಕಿಸ್ತಾನದಾಗ ಆ ಮುದುಕ ಇಮ್ರಾನಖಾನ 40 ವರ್ಷದಾಕಿನ ಮದುವೆ ಆಗಲಿಲ್ಲವೇ? ಈ ವಯಸ್ಸಿನ್ಯಾಗ ಯಾರರ ನನ್ನ ಪ್ರಪೋಜ ಮಾಡಿದ್ರ ನಾನು ಹಿಂಜರಿಯಲ್ಲ' ಎಂದಿದ್ದ ನೆನಪು ಮೊತ್ತೊಮ್ಮೆ ಕಾಡಕತ್ತಿತು. ನಮ್ಮ ಮನೆಯವರ ಮಾತು ಕೇಳಿ ಹಾಲಿನಂಗ ಇದ್ದ ಸಂಸಾರದಾಗ ಕೈಯಾರ ಹುಳಿ ಹಿಂಡಿಕೊಂಡಂಗ ಆತು ಅಂತ ಚಿಂತಿಸತೊಡಗಿದಳು.

ಮರುದಿನ ನಾಳೆ ಊರಿಗೆ ಹೋಗಲೇಬೇಕೆಂಬ ನಿರ್ಧಾರ ಮಾಡಿ ರಾತ್ರಿ ಮೊಬೈಲನಲ್ಲಿ ಸಿಗದಿದ್ದಾಗ ಲ್ಯಾಂಡ್ ಫೋನಗೆ ಕರೆ ಮಾಡಿದಳು. ಪದ್ದು ಬೇಕಂತ್ರ ಹೆಣ್ಣಿನ ವಾಯಸಿನಲ್ಲಿ 'ಹಲೋ' ಎಂದ.

'ನೀನು ಯಾರೇ?'

'ಹೌದೂ ತಾವು ಯಾರೆಂಬುದು ಮೊದಲು ಹೇಳಿ?'

'ಅವರಿದ್ದಾರಾ? ಕೊಡೆ ಅವರ ಕೈಲಿ.'

'ಅವರಾ, ಬಾತ್‌ರೂಮಲ್ಲಿ ಇದ್ದಾರೆ, ಯಾರಂತ ಹೇಳಿ ಅವರಿಗೆ ಹೇಳತಿನಿ.'

'ನಿಮ್ಮಜ್ಜಿ ಪಿಂಡಾ. ನಾನು ನೀ ನಿಂತಿರೋ ಮನೆಯ ಯಜಮಾನಿ, ಬಂದ ಮಾಡ್ತನಿ' ಅನ್ನುತ್ತಲೇ ಫೋನ ಎತ್ತಿ ಇಟ್ಟು.

ಮರುದಿನ ಬೆಳಗಾಗದ್ರೊಳಗೆ 'ಧಡ್, ಧಡ್, ಧಡ್..' ಎಂದು ಬಾಗಿಲು ಬಡಿಯುವ ಶಬ್ದ ಕೇಳಿಸ್ತು.

ನಿದ್ದೆಗಣ್ಣಲ್ಲಿದ್ದ ಪದ್ದು ಕಣ್ಣ ತಿಕ್ಕೋತ ಬಾಗಲ ತೆರೆದ. ಆಶ್ಚರ್ಯ! ಪ್ರತ್ಯಕ್ಷವಾಗಿದ್ದಾಳೆ. ಒಳಗೆ ಹೊಕ್ಕವಳೆ ಬೆಡ್‌ರೂಮು, ಅಡಿಗಿಮನಿ, ಬಚ್ಚಲಮನಿ ಎಲ್ಲ ತಡಕಾಡಕತಿದ್ದು, 'ಏನು ಹುಡಕಾಕತಿದಿ ಏನಾಯ್ತು?' ಎಂದ.

'ಎಲ್ರೀ ಅವಳು ರಾತ್ರಿ ಮಾತಾಡಿದ್ಲಲ ಬಿನ್ನಾಣಗಿತ್ತಿ.' ನಗು ಬಂದು ತಡಿಯಲಾರದೆ 'ಅದಾ ಮಾತಾಡಿದ್ದು ನಾನೇ ಕಣೆ' ಎಂದ ಪದ್ದು.

'ಇಲ್ಲ ಇಲ್ಲ ಸುಳ್ಳ ಹೇಳಕತಿರಿ.'

'ನಾನ್ಯಾಕೆ ಸುಳ್ಳು ಹೇಳ್ಲಿ. ಇಪ್ಪತ್ತು ಬಾರಿ ಫೋನ್ ಮಾಡಿದ್ರು ನೀನು ಏನೇನೋ ಹುಚ್ಚುಚ್ಚು ಮಾತಾಡಿ ನನಗೆ ಮನಸಿಗೆ ಬೇಜಾರ ಮಾಡಿದಿ. ಇಷ್ಟುದಿನ ಜೊತೆಗಿದ್ದು ನನ್ನ ಗುಣ ಗೊತ್ತಿದ್ದು ಬದಲಾದ ನಿನಗ ಬುದ್ದಿ ಕಲಸಬೇಕು. ನೀನಾ ಬರಂಗ ಮಾಡಬೇಕು ಅಂತ ಮೊಬೈಲ್ ಸ್ವಿಚ್ ಆಫ್ ಮಾಡಿ, ಹೆಣ್ಣಿನ ತರಹ ಧ್ವನಿ ಮಾಡಿ ನಿನಗ ಆತಂಕ ಹುಟ್ಟಿಸಿ ಬೇಗ ಬರಂಗ ಮಾಡಿದೆ.'

'ನಿಜನಾ?' ಅಂದ್ಲು.

'ನಿಜಾನೆ. ನನಗ ಅಷ್ಟು ಧೈರ್ಯ ಅದ ಏನು?' ಅಂತ ಲೇವಡಿಮಾಡಿ ಸಮಾಧಾನಿಸಿದ.

'ಇಲ್ಲ ನನಗ ನಂಬೋದು ಆಗವಲ್ತು' ಅಂತ ಆಣೆ ಪಾಣಿ ಎಲ್ಲಾನೂ ಮಾಡಿಸಿಕೊಂಡು ಇಂಚಿಂಚಾಗಿ ಟೆಸ್ಟ್ ಮಾಡಿ ವಾರ ಆದ ಮೇಲೆ 'ಸ್ವಾರಿ ನಾನು ಹಾಗ ನಿಮ್ಮೊಂದಿಗೆ ವರ್ತಿಸಬಾರದಿತ್ತು' ಅಂತ ಕ್ಷಮೆ ಯಾಚಿಸಿದ್ಲು. ಆಗಿದ್ದೇನೊ ಆಗಿ ಹೋಗ್ಯಾದ ಆದರ ಈಗ ಪದ್ದುಗ ಇನ್ನೊಂದು ಪ್ರಾಬ್ಲಮ್ ಸ್ಟಾರ್ಟ ಆಗ್ಯಾದ. ಈಗ ಆಕಿ ಮನೆಯಿಂದ ಹೊರಗೆ ಹೋಗೋದೆ ಇಲ್ಲ. ಊರು ಬಿಟ್ಟು ಹೋಗುವ ಪ್ರಸಂಗ ಬಂದ್ರೂ ದಿನದಾಗ ವಾಪಾಸು ಬರತಾಳ. ಯಾವುದ ಫೋನ ಬಂದ್ರ ಮೊದಲು ಆಕಿನ ರಿಸೀವ್ ಮಾಡ್ತಾಳ. ಹೆಣ್ಣು ಧ್ವನಿ ಬರತ್ತಿತ್ತು ಅಂದ್ರ ಸಂಭಾಷಣೆ ಮುಗಿಯಾತನ ಕದಲುವುದೇ ಇಲ್ಲ. ಹೊರಗಡೆ ಯಾರರ ಹೆಂಗಸರ ಕೂಡ ಮಾತಾಡತಾ ಇದ್ರ ಏಟು ಝಡ್ ಎನ್ಕ್ವಾಯಿರಿ ಮಾಡ್ತಾಳ. ಎಲ್ಲೇರ ಹೋಗಲಿ ಮಗಳನ್ನ ಹಿಂದ ಕಳಸ್ತಾಳ. ರಾತ್ರಿ ಮಲಕಂಡಗಾ ಕನಸನ್ಯಾಗ ಏನು ಕಂಡಂತಾಗಿ ಗಳಗಳ ಅಳಾಕ ಸುರುವು ಮಾಡ್ತಾಳ. 'ಅನುಮಾನಂ ಪೆದ್ದ ರೋಗಂ' ಅಂತಾರ. ಅದು ಹೆಣ್ಣಿನಾಗ ಬರಬಾರದಂತ. ಪದ್ದು ತನ್ನ ಸಾಚಾತನ ವರ್ಷದಿಂದ ಪ್ರೂಫ್ ಮಾಡಿಕೊಂತಾ ಬಂದಾನ, ಆಕಿಗಿ ಕನ್ಫರ್ಮ ಆಗವಲ್ತು. ಊರಿಗೆ ಹೋದಾಕಿ ಹ್ಯಾಂಗರ ಬಂದೆ ಬರತಿದ್ಲು. ಏನೋ ನಾಟಕ ಮಾಡಕ ಹೋಗಿ ಬಯಸಿ ಸುಖದ ಜೀವಕ್ಕ ಮುಳ್ಳು ಚುಚ್ಚಿಕೊಂಡಾಂಗ ಆಗ್ಯಾದ.

☆

## ಸೀಸನ್ ಪಾಸ್

ಸೋಮು ಕಾಲೇಜಿಗೆ ಸೇರಿಕೊಂಡ. ಹಾಗೆ ಹಾಸ್ಟೆಲ್ಲಿಗೂ ಪ್ರವೇಶ ದೊರೆಯಿತು. ಆಗ ಅಲ್ಲಿದ್ದ ವಾರ್ಡನ್ ವಿದ್ಯಾರ್ಥಿಗಳನ್ನು ಕುರಿತು ನೋಡಿ ಬಲಗಡೆ ಇರೋದು ಹುಡುಗರ ಹಾಸ್ಟೆಲ್ಲು. ಎಡಗಡೆ ಇರೋದು ಹುಡುಗಿಯರ ಹಾಸ್ಟೆಲ್ಲು. ಹುಡುಗರ ಹಾಸ್ಟೆಲ್ಲಿಗೆ ಹುಡುಗಿಯರೂ ಹುಡುಗಿಯರ ಹಾಸ್ಟೆಲ್ಲಿಗೆ ಹುಡುಗರೂ ಹೋಗೋದು ನಿಷಿದ್ಧ. ಹಾಗೆ ಹೋದವರಿಗೆ ಮೊದಲ ತಪ್ಪಿಗೆ 500 ರೂಪಾಯಿ, ಎರಡನೇ ತಪ್ಪಿಗೆ 1000 ರೂಪಾಯಿ, ಮೂರನೇ ತಪ್ಪಿಗೆ 1500 ರೂಪಾಯಿ ಜುಲ್ಮಾನೆ ವಿಧಿಸಲಾಗುವುದು ಎಂದು ಹೇಳಿ ಏನಾದರೂ ಪ್ರಶ್ನೆ ಇದೆಯೇ ಅಂತ ಕೇಳಿದ. ಆಗ ಸೋಮು ಸೀಸನ್ ಪಾಸಿಗೆ ಎಷ್ಟು ಅಂತ ಕೇಳಿದ.

# ರಾಜೇಂದ್ರನ ರಗಳೆ

- ಗಾಯತ್ರಿ ಮೂರ್ತಿ

ರಾಜೇಂದ್ರ ನಮ್ಮ ಮನೆಯಲ್ಲಿ ಗಾರೆ ಕೆಲಸ, ಕಾಂಪೌಂಡ್ ಕಸ ಗುಡಿಸುವುದು, ಮನೆಯೊಳಗೆ ಧೂಳು ತೆಗೆಯುವುದು, ಫ್ಯಾನ್ ಮತ್ತಿತರ ವಸ್ತುಗಳನ್ನು ಚೊಕ್ಕಟ ಗೊಳಿಸುವುದು, ಒಂದೇ ಎರಡೇ, ಹೀಗೆ ನಮ್ಮ ಅವಶ್ಯಕತೆಗೆ ತಕ್ಕಂತೆ ಕೆಲಸ ಮಾಡುವ ಪರಿಣಿತ ಎನ್ನೋಣ. ಹೀಗೇ ಒಮ್ಮೆ ಮನೆಯಲ್ಲಿ ಗಾರೆ ಕೆಲಸ ಮಾಡುತ್ತಿದ್ದ. ಆಗಿನ್ನೂ ಅವನು ಹೆಂಡತಿ ಮಕ್ಕಳ ಜೊತೆಯೇ ಇದ್ದ. ಮೇಸ್ತ್ರಿ ವಾರಕ್ಕೊಮ್ಮೆ ಹಣ ಬಟವಾಡೆ ಮಾಡುವುದು ಪದ್ಧತಿ. ಅಂದು ಇನ್ನೇನು ರಾಜೇಂದ್ರನಿಗೂ ಹಣ ನೀಡಬೇಕು. ಅಷ್ಟರಲ್ಲಿ ಅವನ ಹೆಂಡತಿ ಬಂದು, ನನ್ನ ಪತಿಯನ್ನು ಕುರಿತು, 'ಅಣ್ಣ, ರಾಜೇಂದ್ರ ಮನೆಗೆ ಒಂದು ಪೈಸಾ ಕೊಡಲ್ಲ. ಕುಡಿದು ಬೀದೀಲಿ ಬಿದ್ದಿರ್‍ತಾನೆ. ಇಬ್ಬರು ಮಕ್ಕಳನ್ನು ಸಾಕ್ಬೇಕು, ಏನ್ಮಾಡ್ಲಿ?' ಎಂದು ಅಳತೊಡಗಿದಳು. ಆಗ ನನ್ನ ಪತಿ ಹಣದ ಬಹುಪಾಲು ಅವಳಿಗೆ ಕೊಟ್ಟು, ಮಿಕ್ಕಿದ್ದನ್ನು ರಾಜೇಂದ್ರನಿಗೆ ನೀಡಿದರು. ಮುಂದೆಯೂ ಇದೇ ಪರಿಪಾಠ ನಡೆಯಿತು.

ಒಂದು ದಿನ ರಾಜೇಂದ್ರನ ಹೆಂಡತಿ ಅಳುತ್ತ ಬಂದು, 'ಅಣ್ಣ, ರಾಜೇಂದ್ರ ಕುಡಿದು ಮನೆಗೆ ಬಂದು ಸಿಕ್ಕಾಪಟ್ಟೆ ಹೊಡೀತಾನೆ. ಮಕ್ಕಳು ಹೆದರಿಕೊಂಡು ಅಳ್ತಾರೆ. ಏನು ಮಾಡ್ಲಿ?' ಎಂದು ಅಳತೊಡಗಿದಳು.

'ಅದಕ್ಕೆ ಯಾಕೆ ಯೋಚನೆ ಮಾಡ್ತೀಯಾ? ಅವನು ಮನೆ ಒಳಗೆ ಬಂದ ತಕ್ಷಣ ಕೋಲು ತೊಗೊಂಡು ಎರಡು ಬಾರಿಸು. ಸುಮ್ಮನಾಗ್ತಾನೆ' ಎಂದು ಹೇಳಿ ಕಳುಹಿಸಿದರು. ಮರುದಿನ ರಾಜೇಂದ್ರ ನಮ್ಮನೆಗೆ ಬಂದು, 'ನೋಡಿ ಅಣ್ಣ, ನನ್ನ ಹೆಂಡ್ರು ಹ್ಯಾಂಗ ಬರ್‍ಲು ತೊಗೊಂಡು ಹೊಡದೌಳೆ?' ಎಂದು ಕೆಂಪಗೆ ಬಾಸುಂಡೆ ಬಂದಿದ್ದನ್ನು ತೋರಿಸಿದ. 'ಕುಡಿತ ಒಳ್ಳೇದಲ್ಲ, ಬಿಟ್ಬಿಡು' ಎಂದು ಬುದ್ದಿಮಾತು ಹೇಳಿದಾಗೆಲ್ಲಾ, 'ದ್ಯಾವ್ರಾಣೆಗೂ ಅಣ್ಣ, ಇನ್ಮ್ಯಾಗೆ ಕುಡಿಯಾಕ್ಕಿಲ್ಲ' ಎಂದು ದೇವರ ಮೇಲೆ ಆಣೆ ಪ್ರಮಾಣ ಮಾಡಿ ಹೇಳುತ್ತಾನೆ. ಅವನ ಆಣೆ ಪ್ರಮಾಣದ ಅವಧಿ ಒಂದು ರಾತ್ರಿ ಕಳೆಯುವುದರಲ್ಲಿ ಮುಗಿದಿರತ್ತೆ! ನಾಲ್ಕು ದಿನ ಅವನು ನಮ್ಮ ಮನೆಗೆ ಬಂದು, 'ಕಾಸು ಕೊಡಿ ಅಣ್ಣ, ನಾಷ್ಟಾ ಮಾಡ್ಬೇಕು. ನನ್ನ ಹೆಂಡ್ರು ಮನೆಗೆ ಬರಕೂಡ್ದು, ಬಂದ್ರೆ ಬರಲು ಸೇವೆ ಗ್ಯಾರಂಟಿ ಅಂದವ್ಳೆ' ಎಂದು ಗೋಗರೆದ.

ಸರಿ, ಇವನಿಗೆ ಈ ಜನ್ಮದಲ್ಲಿ ಬುದ್ದಿ ಬರಲ್ಲ, ಎಂದು ನನ್ನ ಪತಿ, 'ಹೋಗಲಿ, ದುಡ್ಡು ಕೊಡ್ತೀನಿ. ತಿಂಡಿ ತಿಂದು ಬಂದು ಸ್ವಲ್ಪ ಮನೆ ಧೂಳು ತೆಗೆದು, ಫ್ಯಾನುಗಳನ್ನು ಒರೆಸು' ಎಂದು ಹೇಳಿ ದುಡ್ಡು ಕೊಟ್ಟು ಕಳುಹಿಸಿದರು.

ಈ ಪರಿಪಾಠ ಆಗಾಗ ನಡೆಯುತ್ತಲೇ ಇರುತ್ತದೆ. ಅವನು ಕೆಲಸ ಮಾಡಬೇಕಾದರೆ, ಮೊದಲು ದುಡ್ಡು ಕೊಡಬಾರದು. ಕೊಟ್ಟರೆ ಅವನು ಸಾರಾಯಿ ಕುಡಿದು ಬಿದ್ದಾನೆಯೇ ಹೊರತು ಕೆಲಸಕ್ಕೆ ಬರಲ್ಲ. ಆದ್ದರಿಂದ ಈಗೆಲ್ಲ ನನ್ನ ಪತಿ ಅವನಿಂದ ಕೆಲಸ ಮಾಡಿಸಿಕೊಂಡು ನಂತರ ಅವನಿಗೆ ದುಡ್ಡು ಕೊಡುತ್ತಾರೆ. ಆ ಹಣದಲ್ಲಿ ಅವನು ಸಾರಾಯಿ ಕುಡಿದು ಧನ್ಯನಾಗುತ್ತಾನೆ.

ಅಂದು ದೀಪಾವಳಿ. ಬೆಳಗ್ಗೆಯೇ ಕಂಠಮಟ್ಟ ಕುಡಿದು ನಮ್ಮ ಮನೆಗೆ ಬಂದು ಕರೆಗಂಟೆ ಬಾರಿಸಿದ. ನಾನು ಬಾಗಿಲು ತೆಗೆದೆ. ನನ್ನನ್ನು ನೋಡಿದವನೇ, 'ಅಮ್ಮ ನೀವು ಮಹಾಲಕ್ಷ್ಮೀನಮ್ಮ' ಎಂದವನೇ ಬುಡಕ್ಕನೆ ನನ್ನ ಕಾಲಿಗೆ ಬೀಳುವುದೇ?

'ಏಯ್, ರಾಜೇಂದ್ರ, ಬೆಳಿಗ್ಗೇನೇ ಕುಡಿದು ಬಂದು ವಾಸನೆ ಬೀರ್‍ತಿದೀಯ. ಏಳು, ನಿನ್ನ ನಖರಾ ಸಾಕು' ಎಂದು ನಾನು ಹಿಂದೆ ಸರಿದೆ. ಆದರೂ ನನಗೆ ನಗು ತಡೆಯಲಾಗಲಿಲ್ಲ. ನನ್ನ ನಗು ಕಂಡು ಅವನಿಗೆ ಪ್ರಚೋದನೆಯಾಯಿತೇನೋ? 'ಮಮ್ಮಿ ನಕ್ಕರದೇ ನನಗೆ ಎಟಿಎಮ್..' ಎಂದು ಬಡಬಡಿಸಿದ. ಈ ಕುಡುಕ ಭೂಪನಿಗೆ ನಾನ್ಯಾವಾಗಲಿಂದ ಮಮ್ಮಿಯಾದೆ ಎಂದು ಅಚ್ಚರಿಗೊಂಡೆ. ಅಷ್ಟರಲ್ಲಿ ನನ್ನ ಗಂಡ ಬಂದು 'ರಾಜೇಂದ್ರ, ನೀನು ಮೊದಲು ಇಲ್ಲಿಂದ ಹೊರಡು' ಎಂದರು.

ಆದರೆ ಅವನದು ಅದೇ ಮಂತ್ರ, 'ಮಮ್ಮಿ ನಕ್ಕರೆ ನನಗದೇ ಎಟಿಎಮ್' ಎಂದು ಕುಡಿತದ ಅಮಲಿನಲ್ಲಿ ಬಡಬಡಿಸತೊಡಗಿದ. ಕೊನೆಗೆ ನನ್ನ ಗಂಡ ಸಹಿಸಲಾರದೆ ಅವನಿಗೆ ಐವತ್ತು ರೂಪಾಯಿ ಕೊಟ್ಟು, 'ಇನ್ನೊಂದು ದಿನ ಕುಡಿದು ನಮ್ಮನೆಗೆ ಬರ್‍ಕೂಡದು' ಎಂದು ಖಡಕ್ಕಾಗಿ ಹೇಳಿ ಅವನನ್ನು ಕಳುಹಿಸಿದರು. ತೂರಾಡುತ್ತಲೇ ಹೋದ ರಾಜೇಂದ್ರ, 'ಮಮ್ಮಿ ನಕ್ಕರೆ ನನಗದೇ ಎಟಿಎಮ್' ಎಂದು ಗೊಣಗುತ್ತಲೇ ಹೋದ!

ಒಮ್ಮೆ ಕಾರ್ಪೊರೇಶನ್‌ನವರು ಬಂದು ನಮ್ಮ ಮನೆಯ ರಸ್ತೆಗೆ ಇಕ್ಕೆಲಗಳಲ್ಲಿ 'ಆಪ್ಟಿಕಲ್ ಫೈಬರ್' ಕೇಬಲ್ ಹಾಕುವ ಸಲುವಾಗಿ, ನಮ್ಮ ಮನೆಯ ಗೇಟಿನ ಆಚೆ ಹಾಕಿಸಿರುವ ಕಲ್ಲು ಹಾಸನ್ನು ತೆಗೆದು, ಕೆಲಸ ಮುಗಿಸಿ, ಅವ್ಯವಸ್ಥಿತವಾಗಿ, ಮಣ್ಣಿನಿಂದ ಮುಚ್ಚಿದ್ದರು. ಅದರ ಮೇಲೆ ಕಾರು ಹೋಗುವುದಿರಲಿ, ನಡೆಯುವುದೂ ಕಷ್ಟಕರವಾಗಿತ್ತು. ಸರಿ, ಅಂದು ರಾತ್ರಿ ರಾಜೇಂದ್ರ ನಮ್ಮ ಮನೆಗೆ ಬಂದು, 'ಅಣ್ಣ, ಈ ಮಣ್ಣನ್ನೆಲ್ಲಾ ದಮ್ಮಸ್ಸು ಮಾಡ್ಲಾ?' ಎಂದು ಕೇಳಿದ. 'ಸರಿ, ಬೆಳಿಗ್ಗೆ ಬೇಗ ಬಂದು ಕೆಲಸ ಮುಗಿಸಿ ಕೊಡು' ಎಂದು ನಮ್ಮವರಿಂದ ಅಪ್ಪಣೆಯಾಯಿತು.

ಅಂದು ಅರ್ಧರಾತ್ರಿಯಲ್ಲಿ ಏನೋ ಗಲಾಟೆ! ಇದ್ಯಾರು ಎಂದು ಆಶ್ಚರ್ಯದಿಂದ ಕಿಟಕಿಯಿಂದಲೇ ಬಗ್ಗಿ ನೋಡಿದರು ನನ್ನ ಪತಿ. ಪೋಲೀಸರು, ಜೊತೆಗೆ ರಾಜೇಂದ್ರ! ಕುತೂಹಲದಿಂದ ಹೊರಗೆ ಹೋಗಿ ವಿಚಾರಿಸಿದರೆ ಪೋಲೀಸರು ಹೇಳಿದರು, 'ಇವನು ನಿಮ್ಮ ಮನೆ ಕಾಂಪೌಂಡ್ ಹಾರ್‍ತಿದ್ದ. ಕಳ್ಳ ಇರ್‍ಬೇಕು ಅಂತ ಹಿಡಿದ್ವಿ' ಎಂದರು.

ಆಗ ನನ್ನ ಪತಿ, 'ಇವನು ನಮ್ಮನೇಲಿ ಕೆಲಸ ಮಾಡ್ತಾನೆ. ನಾನೇ ವಿಚಾರಿಸ್ತೀನಿ' ಎಂದು ಹೇಳಿ, 'ಯಾಕೋ ನಮ್ಮನೆ ಕಾಂಪೌಂಡ್ ಹಾರಿದ್ದು? ಇಷ್ಟು ಹೊತ್ನಲ್ಲಿ ಏನು ಮಾಡ್ತಿದ್ದೆ?' ಎಂದು ಕೇಳಿದರು.

'ಅಣ್ಣ, ಬೆಳಿಗ್ಗೆ ಬೇಗ ಬಂದು ಕೆಲಸ ಮಾಡ್ಕೊಡೂಂತ ಯೋಳಿದ್ರಾ? ನಂಗೆ ಎಚ್ಚರಾತು. ಇನ್ನೇನು ಬೆಳಗಾಯ್ತದೇಂತ ಕೆಲಸಕ್ಕೆ ಬಂದೆ. ಅಣ್ಣಾಂತ ಕೂಗ್ದೆ. ನಿಮ್ಗೆ ಎಚ್ಚರಾಗ್ಲಿಲ್ಲ. ಸರಿ, ಕಾಂಪೌಂಡ್ ಹಾರಿ, ಬಾಂಡ್ಲೆ, ಗುದ್ದಲಿ, ದಮ್ಮಸ್ಸು ಮಾಡೋದನ್ನು ಎತ್ಕೊಂಡು, ನೋಡಿ, ಅಲ್ಲೇ ಕಾಂಪೌಂಡ್ ಮೇಲೆ ಇಟ್ಟಿದ್ನಿ. ನಾನು, ಕಾಂಪೌಂಡ್ ಹಾರಿ ಆಚೆ ಬರೋ ಒತ್ಗೂ ಈ ಪೊಲೀಸಪ್ಪನ್ನೋರು ನನ್ನ ನೋಡೋಕೂ ಸರಿಯಾಯ್ತು. ಬಂದದ್ದೇ ಕಳ್ಳಾಂತ ಹಿಡಕೊಂಡಿದಾರೇ. ಒಸಿ ಏಳಣ್ಣ' ಎಂದು ಗೋಗರೆದ.

'ಅವನನ್ನು ಬಿಟ್ಬಿಡಿ ಸಾರ್. ಚಳಿಗಾಲ. ಬೇಗ ಬೆಳಕು ಬರಲ್ವಲ್ಲ, ಅದಕ್ಕೇ ಅವನು ಎದ್ದ ತಕ್ಷಣ ಬೆಳಗಾಗ್ತಾ ಇದೇಂತ ತಪ್ಪುತಿಳ್ಕೊಂಡು ಬಂದಿರಬೇಕು. ಅದೂ ಅಲ್ದೆ ನಾನು ಆರು-ಆರೂವರೆ ಒಳಗೆ ಬಂದು ಕೆಲಸ ಮಾಡ್ಕೊಡು ಅಂತ ಬೇರೆ ಹೇಳಿದ್ದು ಅವನ ತಲೇಲಿತ್ತೂಂತ ಕಾಣತ್ತೆ, ಎಚ್ಚರ ಆದ ತಕ್ಷಣ ಓಡಿ ಬಂದಿದಾನೆ' ಎಂದರು. ಪೋಲೀಸರು ಅವನನ್ನು ಬಿಟ್ಟರು. 'ಅಣ್ಣ, ನಿಮಗೆ ಎಚ್ರಾಗ್ದೆ ಇದ್ದಿದ್ರೆ ನಂಗೆ ಲಾಕಪ್ಪೇ ಗತಿ ಆಗ್ತಿತ್ತು' ಎಂದವನೇ ರಾಜೇಂದ್ರ ಬುಡಕ್ಕನೆ, ನಮ್ಮವರ ಪಾದಗಳಿಗೆರಗಿದ.

'ನಮಸ್ಕಾರ ಎಲ್ಲ ಯಾಕಪ್ಪಾ? ಮಲಕ್ಕೋಹೋಗು. ಬೆಳಕು ಹರಿದ ಮೇಲೆ ಬಂದು ಕೆಲಸ ಮಾಡು. ಇನ್ನೊಂದು ಸರಿ ಕಾಂಪೌಂಡ್ ಹಾರಿದ್ರೆ ನಮ್ಮ ಮನೆ ಒಳಗೆ ಬಂದ್ರೆ ನಿನಗೆ ಲಾಕಪ್ಪೇ ಗತಿ' ಎಂದು ಹೇಳಿ ನಗುತ್ತಾ ನನ್ನ ಗಂಡ ಒಳಗೆ ಬಂದರು. ಈ ಎಲ್ಲ ನಾಟಕಕ್ಕೆ ನಾನು ಮೂಕ ಪ್ರೇಕ್ಷಕಳಾಗಿ ಬಾಗಿಲ ಬಳಿ ನಿಂತಿದ್ದೆ.

ಈಗಲೂ ರಾಜೇಂದ್ರನ ಪರಿಸ್ಥಿತಿಯಲ್ಲೇನೂ ಬದಲಾವಣೆಯಿಲ್ಲ. ಆಗಾಗ ನಮ್ಮ ಮನೆಗೆ ಬರ್ತಿರ್ತಾನೆ. ಸಣ್ಣಪಣ್ಣ ಕೆಲಸ ಮಾಡ್ತಾನೆ. ಕುಡಿತವೇ ಅವನ ಧರ್ಮ, ಅದೇ ಅವನ ಕರ್ಮ. ಅವನ ಜಗತ್ತೆಲ್ಲಾ ಸಾರಾಯಿಯ ಬಾಟಲಿನಲ್ಲೇ ಅಡಗಿರತ್ತೆ. ಅದು ಅವನ ಹೊಟ್ಟೆ ಸೇರಿದರೆ, ಅವನು ಅಂದಿಗೆ ಧನ್ಯ.

☆

## ಸ್ವರ್ಗದ ಬಾಗಿಲು

ಸೋಮು ಸ್ವರ್ಗದ ಬಾಗಿಲಿನಲ್ಲಿ ನಿಂತಿದ್ದ. ಚಿತ್ರಗುಪ್ತ ನೋಡು ನೀನು ಅಂಥಾ ಒಳ್ಳೇ ಕೆಲಸವನ್ನೂ ಮಾಡಿಲ್ಲ ಅಂಥಾ ಕೆಟ್ಟ ಕೆಲಸವನ್ನೂ ಮಾಡಿಲ್ಲ. ಆದರೂ ನೀನು ಮಾಡಿರುವ ಏನಾದರೂ ವಿಶೇಷ ಕೆಲಸ ಇದ್ದರೆ ಹೇಳು. ಅದರ ಪ್ರಕಾರ ನಿನ್ನನ್ನು ಸ್ವರ್ಗದ ಒಳಕ್ಕೆ ಬರಮಾಡಿಕೊಳ್ಳುತ್ತೇನೆ ಅಂದ. ಅದಕ್ಕೆ ಸೋಮು ನಾನು ಒಂದು ದಿನ ಮನೆಗೆ ಮರಳುತ್ತಿದ್ದೆ. ಆಗ ದಾರಿಯಲ್ಲಿ ಐದು ಜನ ದಾಂಡಿಗರು ಒಂದು ಹುಡುಗಿಯನ್ನು ಬಲಾತ್ಕಾರ ಮಾಡಲು ಯತ್ನಿಸುತ್ತಿದ್ದರು. ಆಗ ನಾನು ಅಲ್ಲಿಗೆ ಹೋಗಿ ಮರ್ಯಾದೆಯಾಗಿ ಆ ಹುಡುಗಿಯನ್ನು ಬಿಟ್ಟುಬಿಡಿ ಇಲ್ಲದಿದ್ದರೆ ಒಬ್ಬೊಬ್ಬರನ್ನೂ ಹುಟ್ಟಿಲ್ಲ ಅನಿಸಿಬಿಡ್ತೀನಿ ಅಂದೆ. ಆಗ ಆ ಗುಂಪಿನಲ್ಲಿದ್ದ ಒಬ್ಬ ನನ್ನ ತಲೆಯ ಮೇಲೆ ಜೋರಾಗಿ ಹೊಡೆದ ಅಂದ. ಆಗ ಚಿತ್ರಗುಪ್ತ ಇದು ನಡೆದದ್ದು ಯಾವಾಗ ಅಂತ ಕೇಳಿದರೆ ಸೋಮು ಈಗ ಒಂದು ಐದು ನಿಮಿಷದ ಕೆಳಗೆ ಅಂದ.

# ಹೆಸರಿನಲ್ಲಿದೆ ಎಲ್ಲವೂ

**- ಕುಮುದಾ ಪುರುಷೋತ್ತಮ್**

**ಒಂ**ದು ಮುಂಜಾನೆ ಸುಬ್ಬುಲಕ್ಷ್ಮಿ ಮಗ ಸುಬ್ಬುವನ್ನು ಮುಂದೆ ಕೂರಿಸಿಕೊಂಡು ಕ್ಲಾಸ್ ತೆಗೆದುಕೊಳ್ಳುತ್ತಿದ್ದಳು.

ಒಂದೇ ಒಂದು ನಿಮಿಷ. ಅಮ್ಮ ಸುಬ್ಬುಲಕ್ಷ್ಮಿ ಮಗ ಸುಬ್ಬು ಅಂದೆ ಅಲ್ವೇ? ನಮ್ಮ ನಾಡಿನಲ್ಲಿ ಮುಕ್ಕೋಟಿ ದೇವತೆಗಳು ಇದ್ದು ಒಬ್ಬೊಬ್ಬರಿಗೂ ಅಷ್ಟೋತ್ತರ ಸಹಸ್ರ ನಾಮಾವಳಿಗಳಿರುವಾಗ ವೈವಿಧ್ಯದ ಹೆಸರುಗಳಿಗೆ ಬರವೇ? ಹೀಗಿದ್ದೂ ಸುಬ್ಬುಲಕ್ಷ್ಮಿಯ ಮಗ ಸುಬ್ಬುವೇ ಏಕೆ ಎಂದೆನಿಸಿದರೆ ಅದು ಸಹಜವೇ. ಆದರದಕ್ಕೆ ಚಾರಿತ್ರಿಕ ಕಾರಣಗಳಿವೆ. ಅದನ್ನು ಪರಾಂಬರಿಸಿ ಮುಂದಕ್ಕೆ ತೆರಳಿದರೆ ಆಗದೇ?

ಹಲವು ದಶಕಗಳ ಹಿಂದಕ್ಕೆ ತೆರಳೋಣ. ಅಂದು ಸುಬ್ಬುಲಕ್ಷ್ಮಿ ಮತ್ತು ಸುಬ್ರಾಯನ ಮದುವೆ ನಿಶ್ಚಿತಾರ್ಥದ ದಿನ. ಪುರೋಹಿತರು ಲೇಖನಿ ಹಿಡಿದು ಇನ್ನೇನು ಲಗ್ನಪತ್ರಿಕೆ ಬರೆಯಬೇಕು. ಆಗ ನಮಗನಿಸಿದ್ದಂತೆಯೇ ಗಂಡಿನ ತಂದೆ ಸುಬ್ರಾಮಯ್ಯನಿಗೆ ಅನ್ನಿಸಿರಬೇಕು. ಕನ್ಯಾಪಿತೃ ಸುಬ್ಬನರಸಿಂಹನ ಬಳಿ ಈ ಬಗ್ಗೆ ಪ್ರಸ್ತಾಪಿಸಿದರು.

ಸುಬ್ಬುಲಕ್ಷ್ಮಿಯನ್ನು ಸುಬ್ರಾಯನಿಗೆ ಕೊಟ್ಟು ವಿವಾಹ ಅಂತಂದ್ರೆ ತಮಾಷೆಯಾಗಿರತ್ತೆ. ಕನ್ಯೆಯ ಹೆಸರು ತುಸು ಮೊಟಕುಗೊಳಿಸಿ ಸಿಂಪಲ್ಲಾಗಿ ಲಕ್ಷ್ಮಿ ಅಂತ ಹಾಕಿಸೋಣವೇ? ಸುಬ್ಬನರಸಿಂಹ ನರಸಿಂಹಾವತಾರ ತಾಳಿದ್ರು. ಹೆಣ್ಣಿನವರು ಅಂದಕೂಡ್ಲೆ ನಾವಿಟ್ಟ ಹೆಸರನ್ನೇ ಅಳಿಸಿಹಾಕುವಷ್ಟು ಕೀಳಾಗಿಹೋದ್ವೇ? ನಾನು ಮೊದಲಿನಿಂದ ಗಾನಕೋಗಿಲೆ ಎಮ್.ಎಸ್. ಸುಬ್ಬುಲಕ್ಷ್ಮಿಯ ಸಂಗೀತದ ಆರಾಧಕ. ಆಕೆಯ ಫೋಟೋ ಮುಂದೆ ನಿಂತು ಹೆಣ್ಣು ಮಗುವಾದರೆ ಅವರ ಹೆಸರೇ ಇಡುವುದಾಗಿ ಹರಸಿಕೊಂಡಮೇಲಲ್ಲವೇ ಮಗಳು ಹುಟ್ಟಿದ್ದು ಅವರ ಹೆಸರೇ ಇಟ್ಟಿದ್ದು. ಮಗಳು ಬೆಳೆಯುತ್ತಾ ಸಂಗೀತದ ಗಂಧವನ್ನೂ ಮೂಸದೆ ಸಂಗೀತ ಎಂದರೆ ಕಿಲೋವಿಗೆಷ್ಟು ಬೆಲೆ ಎಂದು ಕೇಳುವಷ್ಟು (ಅ)ಜ್ಞಾನ ಬೆಳೆಸಿಕೊಂಡಿದ್ದರೂ ಹೆಸರು ಹೆಸರೇ ಅಲ್ಲವೇ? ಆ ಹೆಸರು ಮೊಟಕು ಮಾಡಲು ಸಾಧ್ಯವೇ ಇಲ್ಲ, ನೀವೇ ಬೇಕಿದ್ದರೆ ಸುಬ್ರಾಯಪ್ಪನ ಹೆಸರು ಮೊಟಕು ಮಾಡಿ ರಾಯಪ್ಪ ಅಂತ ಹಾಕಿಸಿ ಲಗ್ನಪತ್ರಿಕೇಲಿ ಎಂದುಬಿಟ್ಟರು. ಸುಬ್ರಾಮಯ್ಯ ನಖಶಿಖಾಂತ ಉರಿದು ಹೋದರು. ನೀವ್ಯಾರ್ರೀ ಅದನ್ನು ಹೇಳೋಕ್ಕೆ? ಆ ಹೆಸ್ರು ನಮ್ಮ ತಾತ ಸುಬ್ಬನಂಜಪ್ಪ ಪ್ರೀತಿಯಿಂದ ಇಟ್ಟ ಹೆಸರು. ಯಾವುದೇ ಕಾರಣಕ್ಕೂ ಅದನ್ನು ಬದಲಾಯಿಸೋಲ್ಲ. ಒಪ್ದೇ ಇದ್ರೆ ಎಂಗೇಜ್ಮೆಂಟೇ ಕ್ಯಾನ್ಸಲ್ ಮಾಡಿಬಿಡಿ ಎಂದುಬಿಟ್ಟರು.

ಅಂದು ಮನೆಯಲ್ಲಿ ಅಡುಗೆಯನ್ನು ಮಾಡದೆ ಬಹು ನಿರೀಕ್ಷೆಯಿಂದ ಹಸಿದು ಬಂದಿದ್ದ ಬಂಧು ಮಿತ್ರರು ನಡೆಯುತ್ತಿದ್ದ ವಿದ್ಯಮಾನವನ್ನು ಕಂಡು ಕಂಗೆಟ್ಟು ಹೋದರು. ಅವರೆಲ್ಲಾ ಒಂದಾಗಿ ಮಧ್ಯಸ್ತಿಕೆ ವಹಿಸಿ ಕದನವಿರಾಮ ಘೋಷಿತವಾಯ್ತು. ಹೆಸರು ಬದಲಾಯಿಸಲು ಹೋಗದೆ ಎಲ್ಲವೂ ಸಮರ್ಪಕವಾಗಿ ನಡೆದು ಕಾಲಕ್ರಮದಲ್ಲಿ ಕಲ್ಯಾಣ ವಿಧಿ ನಡೆಯಿತು. ವರ್ಷದಲ್ಲೇ ಕುಡಿಯೊಡೆದು ಮಗುವಿಗೆ ಕುಲದೇವರ ಹೆಸರು ಸುಬ್ರಹ್ಮಣ್ಯ ಎಂದಿಟ್ಟರು. ಈ ಮಗುವೇ ಈಗ ಬೆಳೆದಿರುವ ನಮ್ಮ ಕಥಾನಾಯಕ ಸುಬ್ಬು.

ವಿಷಯಾಂತರಕ್ಕೆ ಕ್ಷಮೆಯಿರಲಿ. ಮೂಲಕಥೆಗೆ ಮತ್ತೆ ಮರಳೋಣ. ಸುಬ್ಬುಲಕ್ಷ್ಮಿ ಕ್ಲಾಸ್ ತೆಗೆದುಕೊಳ್ಳುತ್ತಿದ್ದಳೆಂದು ಹೇಳುತ್ತಿದ್ದೆನಲ್ಲವೇ? ಕ್ಲಾಸು ಮುಂದುವರೀತು.

ನಿನಗೂ ಮೂವತ್ತೊಂಬತ್ತಾಯ್ತು. ಹೀಗೇ ಆದ್ರೆ ನಿನಗ್ಯಾರೂ ಹೆಣ್ಣು ಕೊಡೋಲ್ಲ. ಆಗ್ಲೇ ಅಲ್ಲಲ್ಲಿ ಬೆಳ್ಳಿ ಕೂದಲು ಮಿಂಚುತ್ತಿದೆ. ಹಣೆಯ ಉದ್ದ ಅಗಲ ವಿಸ್ತಾರಗೊಳ್ಳುತ್ತಿದೆ. ತಲೆ ಪೂರ್ತಿ ತಾಮ್ರದ ಚೊಂಬಿನಂತಾದ್ರೆ ನಿನ್ನ ಯಾರೋ ಮದ್ವೆ ಆಗ್ತಾರೆ? ನಾನೇ ಹೆಣ್ಣು ನೋಡ್ತೀನಿ ಅಂದ್ರೆ ಅರೇಂಜ್ಡ್ ಮ್ಯಾರೇಜ್ ಹಳೇ ಕಾಲಕ್ಕಾಯ್ತು ಅಂತೀ. ಹೋಗ್ಲಿ ನೀನೇ ಲವ್ವು ಮಾಡಿ ಮದ್ವೆಯಾಗೋ ಅಂದ್ರೆ ಅದಕ್ಕೆ ಬೇಕಾದ ದಾಷ್ಟೀಕ, ಸಾಮರ್ಥ್ಯ ಎರಡೂ ನಿನ್ನಲ್ಲಿಲ್ಲ. ಇನ್ನು ಆಫೀಸಿನ ತುಂಬಾ ಬೆಡಗುಗಾರ್ತಿಯರಿದ್ದರೂ ರಾಖೀ ಹಬ್ಬದ ದಿನ ಮುಂಗೈಪೂರಾ ರಾಖೀ ಕಟ್ಟಿಸಿಕೊಂಡು ಬರ್ತಿಯೇ ಹೊರ್ತು ಅಮ್ಮಾ ಇವ್ಳೇ ನಿನ್ನ ಸೊಸೆ ಅಂತ ಒಬ್ಬಳನ್ನ ಮುಂದೆ ನಿಲ್ಸಿಲ್ಲ. ಹೀಗಾದ್ರೆ ನೀನೀ ಜನ್ಮದಲ್ಲಿ ಮದ್ವೆಯಾಗೊಲ್ಲ.

ಅಮ್ಮಾ ನಾನೇನು ಮಾಡ್ಲಿ? ಮನಸ್ಸಿಗೆ ಹಿಡಿಸಿದ ಹುಡ್ಗಿ ಮುಂದೆ ನಿಂತು ಐ ಲವ್ ಯೂ ಅಂತ ಹೇಳೋಕ್ಕೆ ತುಂಬಾ ಪ್ರಯತ್ನ ಪಡ್ತಾ ಇದ್ದೀನಿ. ಕಪಾಳಕ್ಕೆ ತಟ್ತಾಳೇನೋ ಅನ್ನೋದು ಮನಸ್ಸಿಗೆ ಬಂದು ಕಣ್ಣು ಕತ್ಲಿಟ್ಕೊಂಡು ಬಾಯಿ ನಿರ್ಜಲವಾಗುತ್ತೆ. ನೀನೇ ಹೆಣ್ಣು ನೋಡು ಎಂದು ಪರವಾನಗೆ ಇತ್ತ. ಅಂದೇ ಮದ್ವೆ ಏಜೆಂಟಿಗೆ ಸುಬ್ಬುವಿನ ಫೋಟೋ, ಜಾತಕ, ಬ(ಯ್ಯೋ)ಯೋಡೇಟಾ ರವಾನೆಯಾಯ್ತು. ಅನೇಕ ಪ್ರಸ್ತಾಪನೆಗ್ಳೂ ಬಂತು.

ಸುಬ್ಬುಲಕ್ಷ್ಮಿ ಒಪ್ಪಿದ ಹೆಣ್ಣನ್ನು ಸುಬ್ಬು ಉಹೂಂ ಅಂದ. ಸುಬ್ಬು ಎಸ್ ಅಂದಾಗ ಅವ್ಳು ನೋ ಅಂದಳು. ಇಬ್ಬರೂ ಒಪ್ಪಿದಾಗ ಜಾತಕ ಅಡ್ಡಗಾಲು ಹಾಕಿತು. ಮೂರೂ ಸರಿಯಾದಾಗ ಅಪ್ಪ ಸುಬ್ರಾಯಪ್ಪ ಮನೆತನ ಸರಿಯಿಲ್ಲ ಎಂದು ತಪ್ಪಿಸುತ್ತಿದ್ದ. ಎಲ್ಲರೂ ಒಪ್ಪಿದ್ದಾಗ ಹೆಣ್ಣು ಮಕ್ಕಳೇ ನಾ ಒಲ್ಲೆ ಎಂದು ಬಿಡುತ್ತಿದ್ದರು. ನನ್ನದು ಚೂಪು ಮೂಗು ಅವಂದು ಚಪ್ಪಟೆ ಮೂಗು. ವರಸಾಮ್ಯ ಸರಿ ಇಲ್ಲ ಎಂದು ಒಬ್ಬಳೆಂದರೆ ಮತ್ತೊಬ್ಬಳು ಅವಂದು ಕೀರಲು ಧ್ವನಿ ನಂದು ಗಡಸು ಧ್ವನಿ. ಒಟ್ಟಿಗೆ ಜೀವನರಾಗ ಹಾಡಿದರೆ ಅಪಸ್ವರವೇ ಹೆಚ್ಚಾಗ್ತತ್ತೆ ಎಂದಳು. ಒಟ್ಟಿನಲ್ಲಿ ಕುಂತೀ ಮಕ್ಕಳಿಗೆ ರಾಜ್ಯವಿಲ್ಲ ಎನ್ನುವಂತಾಗಿ ಸುಬ್ಬು ಬ್ರಹ್ಮಚಾರಿಯಾಗಿಯೇ ಉಳಿದುಬಿಟ್ಟ.

ಇಂತಹ ವಿಷಮಕಾಲದಲ್ಲೇ ಸುಬ್ಬುಲಕ್ಷ್ಮಿ ನಮ್ಮ ಮನೆಗೆ ಬಂದಿದ್ದು. ತನ್ನ ಗೋಳನ್ನು ಹೇಳಿಕೊಂಡು ಕಣ್ಣೀರ್ಗರಿದಿದ್ದಳು. ಅವಳ ಬಿಸಿ ಕಣ್ಣೀರಿಗೆ ನನ್ನ ಮೃದು ಮನಸ್ಸು ಬೆಂಕಿ ತಾಗಿದ ಬೆಣ್ಣೆಯಂತೆ ಕರಗಿಹೋಯ್ತು.

ನನ್ನ ಬಗ್ಗೆ ಒಂದೇ ಮಾತಲ್ಲಿ ಹೇಳೋದಾದ್ರೆ ನಂದು ವಕ್ರಬುದ್ಧಿ. ನೇರಮಾರ್ಗ ಮುಚ್ಚಿದಾಗ ವಕ್ರವಕ್ರವಾಗಿ ಸಾಗಿ ಅಂತೂ ಗುರಿ ಮುಟ್ಟುತ್ತೆ. ನಾನೊಂದು ಜಾಹೀರಾತು ಬರೆದು ಕೊಡ್ತೀನಿ. ನಾಡಿನ ವಿವಿಧ ಪತ್ರಿಕೇಲಿ ಹಾಕಿಸು. ಒಂದೇ ತಿಂಗಳಲ್ಲಿ ಸುಬ್ಬೂಗೆ ಮದ್ವೆಯಾಗ್ದಿದ್ರೆ ಕೇಳು ಎಂದು ಸ್ವ ಹಸ್ತದಲ್ಲಿ ಬರೆದುಕೊಟ್ಟೆ. ಮುಂದಿನದು ಇತಿಹಾಸ. ಸುಬ್ಬು ಈಗ ಸಂಸಾರವಂದಿಗನಾಗಿ ಸುಖವಾಗಿದ್ದಾನೆ.

ಅದೇನು ಜಾಹೀರಾತು ಎಂಬ ಕುತೂಹಲವೇ ನಿಮಗೆ? ಅದಿಲ್ಲಿದೆ ನೋಡಿ.

ಬುದ್ಧಿವಂತ, ಗುಣವಂತ, ಉದ್ಯೋಗವಂತ ಮುವತ್ತೊಂಬತ್ತರ ವರನಿಗೆ ಸುಬ್ಬಮ್ಮ ನಾಮಾಂಕಿತ ಕನ್ಯೆ ಬೇಕಾಗಿದ್ದಾಳೆ. ವಿವರಗಳಿಗೆ ಕೆಳಕಂಡ ಫೋನ್ ನಂ. ಸಂಪರ್ಕಿಸಿ.

ಹೇಗಿದೆ ಹೆಸರಿನ ಮಹಿಮೆ?

☆

# ಹೀಗೊಂದು ಸುದ್ದಿ

**- ಕೆ.ಆರ್. ಮಧುಸೂದನ್**

‘‘**ಖ್ಯಾ**ತ ಸಿನಿಮಾ ತಾರೆ ಕುಮಾರಿ ಶ್ರೀಮತಿ ಅವರು ಇಂದು ಬೆಳಿಗ್ಗೆ ತಮ್ಮ ಮನೆಯಲ್ಲಿ ಮೂರ್ಛಿತರಾದರು. ಅವರನ್ನು... ಆಸ್ಪತ್ರೆಗೆ ಸೇರಿಸಲಾಗಿದೆ’’ ಹೀಗೊಂದು ಸುದ್ದಿ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದಂತೆ ಆಕೆಯ ಅಭಿಮಾನಿಗಳ ದಂಡು ಆಸ್ಪತ್ರೆಯ ಕಡೆ ದೌಡಾಯಿಸಿತು. ಎಲ್ಲಾ ಚಾನೆಲ್ಲಿನ ರಿಪೋರ್ಟರುಗಳು ಕ್ಯಾಮರಾ ಜೊತೆ ಪೈಪೋಟಿಯಲ್ಲಿ ಆಸ್ಪತ್ರೆಯ ಬಾಗಿಲಿಗೆ ಬಂದು ನಿಂತರು. ಆಕೆಯ ಮನೆಯ ಕೆಲಸದವಳನ್ನು ಪೋಲೀಸಿನವರು ಒಳಗೆ ಕೂಡಿಸಿಕೊಂಡು ಬಿಟ್ಟಿದ್ದರು. ಆಸ್ಪತ್ರೆಯ ಒಳಗೆ ಯಾರಿಗೂ ಪ್ರವೇಶವಿಲ್ಲದಂತೆ ಪೋಲೀಸರ ಬಂದೋಬಸ್ತು ಆಗಿತ್ತು. ಒಳ ಹೋಗಲಾರದ ಚಾನೆಲ್ಲಿನವರು ಚಡಪಡಿಸುತ್ತಾ ಬಾಗಿಲ ಬಳಿಯೇ ನಿಂತು ಒಳಗಡೆ ಓಡಾಡುತ್ತಿದ್ದ ಇತರೆ ರೋಗಿಗಳನ್ನೇ ಮತ್ತೇ ಮತ್ತೇ ತೋರಿಸುತ್ತಾ ತಮ್ಮ ಮಾತಿನ ಅಸ್ತ್ರ ಪ್ರಯೋಗಿಸುತ್ತಿದ್ದರು. ಒಂದು ಚಾನೆಲ್ಲಿನ ಹೆಣ್ಣು ರಿಪೋರ್ಟರಿನ ಮಾತಿನ ವೈಖರಿ ಹೀಗಿತ್ತು ‘‘ತರಾ ತುರಿಯಲ್ಲಿ ಓಡಾಡುತ್ತಿರುವ ಇಲ್ಲಿ ಡಾಕ್ಟರು ಮತ್ತು ಸಿಬ್ಬಂದಿಯನ್ನ ಗಮನಿಸಿ ನೋಡಿದರೆ ಶ್ರೀಮತಿಯವರ ಪರಿಸ್ಥಿತಿ ಚಿಂತಾಜನಕವಾದಂತೆಯೇ ಇದೆ. ಆದರೆ ಅದನ್ನು ಯಾರೂ ಹೇಳುತ್ತಿಲ್ಲ. ಇಲ್ಲಿ ಇರುವ ಇತರರ ಮುಖದಲ್ಲಿ ಆತಂಕ ಸ್ಪಷ್ಟವಾಗಿ ಕಾಣಿಸುತ್ತಿದೆ. (ಇತರೆ ರೋಗಿಗಳನ್ನು ತೋರಿಸುತ್ತಾರೆ) ಸದ್ಯಕ್ಕೆ ಹೊರಗಿನಿಂದ ಯಾರನ್ನೂ ಒಳಗೆ ಬಿಡುತ್ತಿಲ್ಲ, ರೋಗಿಗಳನ್ನು ಹೊರತುಪಡಿಸಿ. ಅವರು ಒಳಗೆ ಹೋಗಬಹುದೇ ಹೊರತು ಹೊರಗೆ ಬರುವಂತಿಲ್ಲ. ಇದೀಗ ಒನ್‌ವೇ ಆಗಿದೆ. ನಮಗೆ ವಿಷಯ ತಿಳಿದ ತಕ್ಷಣ ಮತ್ತೆ ನಿಮ್ಮನ್ನು ಸಂಪರ್ಕಿಸುತ್ತೇವೆ ಓವರ್ ಟು ಸ್ಟುಡಿಯೋ.’’

ಇನ್ನೊಂದು ಚಾನೆಲ್ಲಿನವರ ಸುದ್ದಿ ‘‘ಶ್ರೀಮತಿಯವರು ಮುಂಜಾನೆ ವಿಷ ಸೇವಿಸಿರಬಹುದೆಂದು ಇಲ್ಲಿ ಜನ ಮಾತಾಡಿಕೊಳ್ಳುತ್ತಿದ್ದಾರೆ. ಆದರೆ ಯಾರಾದರೂ ಡಾಕ್ಟರುಗಳ ಸಂಪರ್ಕ ಸಿಕ್ಕಿದರೆ ಮಾತ್ರಾ ವಿಷಯ ಸರಿಯಾಗಿ ಗೊತ್ತಾಗುತ್ತದೆ. ಬಿಗಿಯಾದ ಪೋಲೀಸ್ ಬಂದೋಬಸ್ತಿನಿಂದಾಗಿ ಯಾರೂ ಒಳಗೆ ಹೋಗಲಾಗುತ್ತಿಲ್ಲ. ಇದೊಂದು ಆತ್ಮಹತ್ಯೆಯ ಪ್ರಯತ್ನ ಇರಬಹುದೆಂದು ಜನರ ಮಾತಿನಿಂದ ತಿಳಿದು ಬರುತ್ತಿದೆ. ಆದರೆ ಕಾರಣ ಏನಿರಬಹುದೆಂದು ಯಾರೂ ಸರಿಯಾಗಿ ಊಹಿಸುತ್ತಿಲ್ಲ. ಯಾರಿಂದಾದರೂ ವಿಷಯ ತಿಳಿದ ತಕ್ಷಣ ನಿಮ್ಮನ್ನು ಸಂಪರ್ಕಿಸುತ್ತೇವೆ.’’

ಮೂರನೆ ಚಾನೆಲ್ಲಿನವರು ‘‘ಇಂದು ಮುಂಜಾನೆ ತಮ್ಮ ಮನೆಯ ತಮ್ಮ ರೂಮಿನಲ್ಲಿದ್ದ ಫ್ಯಾನಿಗೆ ಮೊನ್ನೆ ತಾನೆ ಖರೀದಿಸಿದ್ದ ಹೊಸ ದುಪ್ಪಟ್ಟದಿಂದ ನೇಣು ಬಿಗಿದುಕೊಂಡಾಗ ಫ್ಯಾನ್ ಕಳಚಿಕೊಂಡು ಬಿದ್ದ ಸದ್ದಿಗೆ ಕಸಗುಡಿಸುತ್ತಿದ್ದ ಕೆಲಸದಾಕೆ ರತ್ನಮ್ಮ ಬಂದು ಕುತ್ತಿಗೆಯ ಕುಣಿಕೆಯನ್ನು ಬಿಡಿಸಿ ನೋಡಿದಾಗ ಶ್ರೀಮತಿಯವರು ಪ್ರಜ್ಞೆ ತಪ್ಪಿರುವುದು ಕಂಡು ಅವರನ್ನು

ಆಸ್ಪತ್ರೆಗೆ ಕರೆದುಕೊಂಡು ಬಂದು ಸೇರಿಸಿದ್ದಾರೆ. ಈಗ ಸದ್ಯಕ್ಕೆ ರತ್ನಮ್ಮ ಅವರು ನಮ್ಮ ಕೈಗೆ ಸಿಗುತ್ತಿಲ್ಲವಾದ್ದರಿಂದ ಅವರು ಸಿಕ್ಕಿದ ನಂತರ ಇತರೆ ವಿಚಾರಗಳನ್ನು ನಿಮಗೆ ತಿಳಿಸುತ್ತೇವೆ.''

ನಾಲ್ಕನೆಯದೊಂದು ಕ್ರೈಂ ಚಾನೆಲ್ಲಿನ ಅದ್ಭುತ ವರದಿ : ಇಂದು ಬೆಳಿಗ್ಗೆ ಸುಮಾರು ಆರು ಗಂಟೆಯ ಸಮಯದಲ್ಲಿ ಮನೆ ಕೆಲಸದಾಕೆ ರತ್ನಮ್ಮ ಕೆಲಸಕ್ಕೆಂದು ಬಂದಾಗ ಶ್ರೀಮತಿಯವರು ಒಬ್ಬರೇ ಇರುವುದನ್ನು ಗಮನಿಸಿ ಅವರ ಒಡವೆ ವಸ್ತುಗಳನ್ನು ದೋಚುವ ಉದ್ದೇಶದಿಂದ ಅವರ ರೂಮಿನೊಳಗೆ ಹೋಗಿದ್ದಾಳೆ. ಅವಳ ಉದ್ದೇಶ ಅರಿತ ಶ್ರೀಮತಿಯವರು ಗಾಬರಿಯಿಂದ ಕೂಗಿಕೊಳ್ಳಬೇಕೆನ್ನುವಷ್ಟರಲ್ಲಿ ಆಕೆ ಅವರ ತಲೆದಿಂಬನ್ನು ಅವರ ಮುಖದ ಮೇಲೆ ಹಾಕಿ ಕೊಲ್ಲುವ ಪ್ರಯತ್ನ ಮಾಡಿದ್ದಾಳೆ. ಆದರೂ ಬಿಡದೆ ಶ್ರೀಮತಿಯವರು ಕೂಗಿಕೊಂಡಿದ್ದಾರೆ. ಆ ಕೂಗಿಗೆ ಅಕ್ಕಪಕ್ಕದ ಜನರು ಬಂದು ಜಮಾಯಿಸಿದ್ದಾರೆ. ಆ ತಕ್ಷಣ ಶ್ರೀಮತಿಯವರು ಮೂರ್ಛೆ ಹೋಗಿದ್ದಾರೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡ ರತ್ನಮ್ಮ ತಾನು ಹಾಲಿನಲ್ಲಿ ಕಸ ಗುಡಿಸುತ್ತಿದ್ದಾಗ ಆಕೆ ರೂಮಿನಲ್ಲಿ ಕೂಗಿ ಕೊಂಡರು, ಆ ತಕ್ಷಣ ಜನ ಬಂದು ಸೇರಿ ಆಕೆಯನ್ನು ಆಸ್ಪತ್ರೆಗೆ ಸೇರಿಸುವಲ್ಲಿ ಸಹಾಯ ಮಾಡಿದರೆಂದು ಹೇಳಿದ್ದಾಳೆ. ಆಕೆಯ ಹೇಳಿಕೆಯು ಅನುಮಾನಾಸ್ಪದವೆಂದು ಪೋಲೀಸಿನವರು ಆಕೆಯನ್ನು ತಮ್ಮ ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ಆಕೆ ತನ್ನ ಕಾರ್ಯದಲ್ಲಿ ಎಷ್ಟು ಸಫಲಳಾಗಿದ್ದಾಳೆಂದು ಪೋಲೀಸಿನವರು ಹೇಳಿದ ನಂತರ ತಿಳಿಯುತ್ತದೆ.

ವರದಿ ಮುಗಿಯುತ್ತಿದ್ದಂತೆ ಒಳಗೆ ನರ್ಸ್‌ಗಳ ಓಡಾಟ ಜೋರಾದರೂ ಒಳಗಿದ್ದ ಎಲ್ಲರ ಮುಖದಲ್ಲೂ ಸಂತಸದ ಅಲೆ ಕಾಣಿಸಿಕೊಂಡಿತು. ಹೊರಬಂದ ಪೋಲೀಸ್ ಅಧಿಕಾರಿಗಳು ಡಾಕ್ಟರ ಕೈಕುಲುಕಿ ವರದಿಗಾರರ ಕಡೆ ತಿರುಗಿ ನೀವಿನ್ನು ಒಳ ಹೋಗಬಹುದೆಂಬಂತೆ ಕೈಸನ್ನೆ ಮಾಡಿ ನಗುತ್ತಾ ಹೊರಟು ಹೋದರು. ತಕ್ಷಣ ಒಳ ನುಗ್ಗಿದ ವರದಿಗಾರರಿಗೆ ಡಾಕ್ಟರು ''ದಯವಿಟ್ಟು ಸ್ವಲ್ಪ ಇರಿ, ಈಗ ತಾನೆ ಆಕೆ ತನಗಾದ ಶಾಕಿನಿಂದ ಹೊರಬಂದಿದ್ದಾರೆ. ಸುಧಾರಿಸಿಕೊಳ್ಳಲು ಜ್ಯೂಸ್ ಕುಡಿಯುತ್ತಿದ್ದಾರೆ. ಅವರು ಕುಡಿದು ಸುಧಾರಿಸಿಕೊಂಡ ನಂತರ ಹೊರ ಬರುತ್ತಾರೆ. ಆನಂತರ ನೀವು ಅವರನ್ನು ನೋಡಬಹುದು'' ಎಂದರು. ''ಏನಾಗಿತ್ತು ಆಕೆಗೆ?'' ಎಲ್ಲರ ಒಕ್ಕೊರಿಲಿನ ಪ್ರಶ್ನೆ ಇನ್ನೇನು ಆಕೆ ಹೊರಗಡೆ ಬರುತ್ತಾರೆ ಆಕೆಯನ್ನು ನೀವೇ ಕೇಳಿ ಎಂದು ಹೇಳಿ ಡಾಕ್ಟರ್ ರೌಂಡ್ಸ್‌ಗೆ ತೆರಳಿದರು. ಎಲ್ಲಾ ಕ್ಯಾಮರಾಗಳು ಆಕೆಯ ರೂಮಿನ ಬಾಗಿಲಿನತ್ತ ನಾಟಿತ್ತು. ನೆರೆದಿದ್ದ ಅಭಿಮಾನಿಗಳು ಕೆಲವರು ಏನಾಗಿದೆಯೋ ಎಂಬ ಆತಂಕ, ಡಾಕ್ಟರ ಮಾತಿನಿಂದ ಏನೂ ಆಗಿಲ್ಲವೆಂಬ ಸಮಾಧಾನ, ಇನ್ನೂ ಬಾಗಿಲು ತೆಗೆಯಲಿಲ್ಲ ಎಂದು ಕೋಪ ಇತ್ಯಾದಿ ನವರಸಗಳನ್ನೂ ಮುಖದಲ್ಲಿ ಪ್ರದರ್ಶಿಸುತ್ತಾ ಚಡಪಡಿಸುತ್ತಾ ಕಾದಿದ್ದರು. ಬಾಗಿಲು ತೆಗೆದು ಮೊದಲು ಹೊರ ಬಂದ ರತ್ನಮ್ಮನ ಮುಖದ ಮೇಲೆ ಕ್ಯಾಮರಾ ಫ್ಲಾಶ್‌ಗಳು ಮಿಂಚ ತೊಡಗಿತು. ಆಕೆಯನ್ನು ಸುತ್ತುವರಿದ ಎಲ್ಲರದೂ ಒಂದೊಂದು ಪ್ರಶ್ನೆ ''ಏನಾಯ್ತು? ಯಾಕಾಯ್ತು? ಎಲ್ಲಾಯ್ತು? ಹೇಗಾಯ್ತು?'' ಎಲ್ಲಾ ಪ್ರಶ್ನೆಗಳಿಗೂ ಆಕೆಯದು ನಗುಮೊಗದ ಒಂದೇ ಉತ್ತರ ''ಮೇಡಂ ಬರ್ತಾರೆ ಅವರೇ ಹೇಳ್ತಾರೆ.'' ಮತ್ತೆ ಕೆಲವು ಕ್ಷಣಗಳು ಟೆನ್ಷನ್. ಮತ್ತೆ

ನಿಧಾನವಾಗಿ ತೆರೆದ ಬಾಗಿಲಿನಿಂದ ಹೊರಬಂದರು ಕುಮಾರಿ ಶ್ರೀಮತಿ. ಅವರನ್ನು ಮುತ್ತಿಕೊಂಡ ಅಭಿಮಾನಿಗಳು ವರದಿಗಾರರು ಎಲ್ಲರ ಪ್ರಶ್ನೆಗಳ ಸುರಿಮಳೆಗೆ ಮೇಡಂ ನಗುತ್ತಾ ಉತ್ತರಿಸಿದರು. ''ನನ್ನ ಮೇಲೆ ನೀವಿಟ್ಟಿರೋ ಅಭಿಮಾನ ತೋರಿಸ್ತಿರೋ ಈ ಪ್ರೀತಿಗೆ ನಾನು ನಿಮಗೆ ಚಿರಋಣಿ. ನನ್ನ ಎಲ್ಲಾ ಚಿತ್ರಗಳನ್ನು ನೋಡಿ ಪ್ರೋತ್ಸಾಹಿಸುತ್ತಿರೋ ನಿಮಗೆ ಏನು ಹೇಳಬೇಕೋ ಗೊತ್ತಾಗ್ತಾ ಇಲ್ಲ'' ''ಬೆಳಿಗ್ಗೆ ಏನು ನಡೀತು ಅದನ್ನ ಹೇಳಿ ಮೇಡಂ'' ಒಬ್ಬ ಕೂಗಿದ. ''ಓ ಅದಾ!'' ಮೇಡಂ ಮುಖದ ಮೇಲೊಂದು ನಗೆಯ ಅಲೆ ಉಕ್ಕಿತು. ಅದೇನಾಯ್ತುಪ್ಪಾಂದ್ರೆ ''ಬೆಳಿಗ್ಗೆ ನಮ್ಮ ರತ್ನಮ್ಮ ಬಂದು ನನ್ನನ್ನು ಎಬ್ಬಿಸಿ ಕಸ ಗುಡಿಸ್ತಾ ಇದ್ಲು. ನಾನು ನನ್ನ ರೂಂನಲ್ಲಿ ನನ್ನ ಅಲ್ಮೇರಾ ಮುಂದೆ ನಿಂತ್ಕೊಂಡು ಒಂದು ಡಾಕ್ಯುಮೆಂಟ್ ಹುಡುಕ್ತಾ ಇದ್ದೆ. ಆದ್ರೆ ಅದ್ರಲಿದ್ದ ನನ್ನ ಆಧಾರ್ ಕಾರ್ಡು ಸಿಕ್ಬಿಟ್ತು. ಅದರಲ್ಲಿದ್ದ ನನ್ನ ಫೋಟೋ ನೋಡ್ದೆ ಅಷ್ಟೆ. ಎಚ್ಚರಿಕೆ ಆದಾಗ ಇಲ್ಲಿ ಬೆಡ್ ಮೇಲಿದ್ದೆ ಅಷ್ಟೆ. ಬರ್ಲಾ ಬಾಯ್'' ನಗುತ್ತಾ ಕಾರು ಹತ್ತಿ ಕೈಬೀಸುತ್ತಾ ಹೊರಟರು ಮೇಡಂ.

☆

## ಎರಡು ಶಬ್ದಗಳು

ಒಬ್ಬನಿಗೆ ಸನ್ಯಾಸಿಯಾಗುವ ಬಯಕೆ ಆಯಿತು. ಮಠಕ್ಕೆ ಹೋಗಿ ಗುರುಗಳನ್ನು ಕಂಡು ಮಾತನಾಡಿದ. 'ನೀನು ಮೌನ ವ್ರತ ಆಚರಿಸಬೇಕು. ಮೂರು ವರ್ಷಕ್ಕೊಮ್ಮೆ ಎರಡು ಶಬ್ದಗಳನ್ನು ಮಾತ್ರ ಹೇಳಬೇಕು' ಎಂದರು ಗುರುಗಳು. ಇವನು ಒಪ್ಪಿದ.

ಮೂರು ವರ್ಷಗಳ ನಂತರ ಗುರುಗಳು ಬಂದು 'ಏನು ನಿನ್ನ ಎರಡು ಶಬ್ದಗಳು?' ಎಂದು ಕೇಳಿದರು.

'ಊಟ ತಣ್ಣಗಿರುತ್ತದೆ' ಎಂದ ಇವನು.

ಬಿಸಿ ಊಟಕ್ಕೆ ಗುರುಗಳು ವ್ಯವಸ್ಥೆ ಮಾಡಿದರು.

ಇನ್ನು ಮೂರು ವರ್ಷಗಳು ಕಳೆದವು. ಗುರುಗಳು ಬಂದು 'ಏನು ನಿನ್ನ ಎರಡು ಶಬ್ದಗಳು?' ಎಂದು ಕೇಳಿದರು.

'ಬಟ್ಟೆ ಕೊಳೆಯಾಗಿದೆ' ಎಂದ. ಗುರುಗಳು ಬಟ್ಟೆ ಒಗೆಯಲು ವ್ಯವಸ್ಥೆ ಮಾಡಿದರು.

ಮತ್ತೆ ಮೂರು ವರ್ಷಗಳು ಕಳೆದವು. ಗುರುಗಳು ಬಂದು 'ಏನು ನಿನ್ನ ಎರಡು ಶಬ್ದಗಳು?' ಎಂದು ಕೇಳಿದರು.

'ಹಾಸಿಗೆ ಮೆತ್ತಗಿಲ್ಲ' ಎಂದ. ಹೊಸ ಹಾಸಿಗೆಗೆ ವ್ಯವಸ್ಥೆ ಮಾಡಲಾಯಿತು.

ಮೂರು ವರ್ಷಗಳು ಕಳೆದ ನಂತರ ಗುರುಗಳು ಬಂದು 'ಏನು ನಿನ್ನ ಎರಡು ಶಬ್ದಗಳು?' ಎಂದು ಕೇಳಿದರು.

'ಸಾಕಾಯಿತು ಹೊರಡುತ್ತೇನೆ' ಎಂದ.

'ನನಗೇನು ಆಶ್ಚರ್ಯವಾಗುತ್ತಿಲ್ಲ. ಬಂದಾಗಿನಿಂದ ನೀನು ದೂರುಗಳನ್ನಷ್ಟೇ ಹೇಳುತ್ತಿರುವೆ' ಎಂದರು ಗುರುಗಳು.